ಕನಕದಾಸರ ಕೀರ್ತನೆಗಳಲ್ಲಿ ಪ್ರತಿಮಾಜಗತ್ತು

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ. ಫಿಲ್ ಪದವಿಗಾಗಿ

ಸಾದರಪಡಿಸಿದ ಸಂಪ್ರಬಂಧ

ಸಂಶೋಧಕರು

ವೀಣಾ ಪ್ರಸಾದ್ ಕಜೆ

ಮಾರ್ಗದರ್ಶಕರು

ಡಾ. ಗಿರೀಶ ಭಟ್. ಎ

ಸಹ ಪ್ರಾಧ್ಯಾಪಕರು

ಸರಕಾರಿ ಪ್ರಥಮದರ್ಜೆ ಕಾಲೇಜು, ಬಂಟ್ವಾಳ

೨೦೧೪

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು -೫೭೫ ೦೦೧

ಕನಕದಾಸರ ಕೀರ್ತನೆಗಳಲ್ಲಿ ಪ್ರತಿಮಾಜಗತ್ತು

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ. ಫಿಲ್ ಪದವಿಗಾಗಿ

ಸಾದರಪಡಿಸಿದ ಸಂಪ್ರಬಂಧ

ಸಂಶೋಧಕರು

ವೀಣಾ ಪ್ರಸಾದ್ ಕಜೆ

ಮಾರ್ಗದರ್ಶಕರು

ಡಾ. ಗಿರೀಶ ಭಟ್. ಎ

ಸಹ ಪ್ರಾಧ್ಯಾಪಕರು

ಸರಕಾರಿ ಪ್ರಥಮದರ್ಜೆ ಕಾಲೇಜು, ಬಂಟ್ವಾಳ

೨೦೧೪

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು –೫೭೫ ೦೦೧

ಯೋಗ್ಯತಾ ಪತ್ರ

ವೀಣಾ ಪ್ರಸಾದ್ ಕಜೆ ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ **"ಕನಕದಾಸರ ಕೀರ್ತನೆಗಳಲ್ಲಿ ಪ್ರತಿಮಾ ಜಗತ್ತು"** ಎಂಬ ಶೀರ್ಷಿಕೆಯಲ್ಲಿ ಈ ಸಂಪ್ರಬಂಧವನ್ನು ಎಂ. ಫಿಲ್ ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ,ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲಸ್ವರೂಪವಾಗಿದೆ. ಇವರು ಸಂಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲ.

ಡಾ. ಗಿರೀಶ ಭಟ್. ಎ

ಸಹ ಪ್ರಾಧ್ಯಾಪಕರು

ಸರಕಾರಿ ಪ್ರಥಮ ದರ್ಜೆ ಕಾಲೇಜು, ಬಂಟ್ವಾಳ

ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ. ಫಿಲ್ ಪದವಿಗಾಗಿ ಸಾದರಪಡಿಸಿದ **"ಕನಕದಾಸರ ಕೀರ್ತನೆಗಳಲ್ಲಿ ಪ್ರತಿಮಾ ಜಗತ್ತು"** ಶೀರ್ಷಿಕೆಯ ಈ ಸಂಪ್ರಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು ವಿಶ್ಲೇಷಣೆ ಮತ್ತು ಅಧ್ಯಯನದ ಫಲೋದಯವಾಗಿದೆ. ಮಂಗಳೂರಿನ ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ **ಡಾ. ಗಿರೀಶ ಭಟ್. ಎ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲೋಮಾ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢಪಡಿಸುತ್ತೇನೆ.

ಸ್ಥಳ : ಮಂಗಳೂರು | **ವೀಣಾ ಪ್ರಸಾದ್ ಕಜೆ**

ದಿನಾಂಕ : ೧೪/೦೬/೨೦೧೪ | **ಸಂಶೋಧಕರು**

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು –೫೭೫ ೦೦೧

ಪರಿವಿಡಿ

ಅಧ್ಯಾಯ ೧

ಪ್ರಸ್ತಾವನೆ

ಅಧ್ಯಾಯ – ೧

ಪ್ರಸ್ತಾವನೆ

ನಡುಗನ್ನಡ ಸಾಹಿತ್ಯ ಕಾಲಘಟ್ಟದಲ್ಲಿ ಹುಟ್ಟಿಕೊಂಡ ವಿಶಿಷ್ಟ ಪ್ರಕಾರಗಳಾಗಿ 'ವಚನ' ಮತ್ತು 'ಕೀರ್ತನೆ' ಗಳನ್ನು ಗುರುತಿಸುತ್ತೇವೆ. 'ವಚನ' ಮತ್ತು 'ಕೀರ್ತನೆ' ಗಳು ಕನ್ನಡ ಸಾಹಿತ್ಯದ ಎರಡು ಕಣ್ಣುಗಳೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಇವೆರಡು ಪ್ರಕಾರಗಳು ಭಕ್ತಿ ಕಾವ್ಯ ಎಂದು ಸ್ಥೂಲವಾಗಿ ಕರೆಸಿಕೊಳ್ಳುತ್ತವಾದರೂ ಅವುಗಳ ಹಿಂದಿನ ತಾತ್ವಿಕತೆಗಳಲ್ಲಿ ಹಾಗೂ ಕಾವ್ಯ ರಚನೆಯ ಹಿಂದಿನ ಧೋರಣೆಗಳಲ್ಲಿ ಎದ್ದು ಕಾಣುವ ವ್ಯತ್ಯಾಸಗಳಿವೆ. ಕೀರ್ತನೆಕಾರರು ಗೇಯತೆಗೆ ತುಂಬಾ ಪ್ರಾಧಾನ್ಯ ನೀಡಿದರು. ವಚನಕಾರರು ಗೇಯತೆಯ ಕಡೆಗೆ ಅಷ್ಟಾಗಿ ಗಮನ ನೀಡಲಿಲ್ಲ. ಪರಿಣಾಮದ ದೃಷ್ಟಿಯಿಂದ ನೋಡಿದರೂ ಇವರೆಡೂ ಪ್ರಕಾರಗಳು ಸಮಾಜದ ಮೇಲೆ ಉಂಟುಮಾಡಿದ ಪರಿಣಾಮದ ಸ್ವರೂಪ ಮತ್ತು ಪ್ರಮಾಣದಲ್ಲಿ ವ್ಯತ್ಯಾಸವಿದೆ.

ಹರಿದಾಸ ಸಾಹಿತ್ಯದ ಮುಖ್ಯ ತತ್ವ ಭಕ್ತಿ ಮೂಲ ಸತ್ಯ ಭಗವಂತ. ಈ ಸತ್ಯದ ಹುಡುಕಾಟ ಭಕ್ತಿಯ ಮಾರ್ಗದಲ್ಲಿ ಸಾಗಿದೆ. ದಾಸರು ಭಕ್ತಿಯ ಮಾರ್ಗಕ್ಕೆ ತಮ್ಮನ್ನಷ್ಟೇ ತೆರೆದುಕೊಂಡಿಲ್ಲ. ಅದನ್ನು ಇಡೀ ಸಮುದಾಯಕ್ಕೆ ತೆರೆದಿಟ್ಟರು. ಹರಿದಾಸ ಸಾಹಿತ್ಯ ಜನರ ಮಧ್ಯೆ, ಜನರ ಮುಂದೆ ಹುಟ್ಟಿದ ಆಶು ರಚನೆಗಳು. ನೂರಾರು ವರ್ಷ ಕಾಲ ಕೇವಲ ಬಾಯಿಂದ ಬಾಯಿಗೆ ಸಾಗಿಬಂದ ಮೌಖಿಕ ಸಾಹಿತ್ಯ ಮನೆ ಮನೆಗಳಲ್ಲಿ, ಓಣಿ, ಬೀದಿಗಳಲ್ಲಿ ಒಬ್ಬರು ಹಾಡಿದ್ದನ್ನು ಕೇಳಿ ಇನ್ನೊಬ್ಬರು ಕಲಿತು ಹಾಡುತ್ತಿದ್ದರು. ಹಾಡುತ್ತಾ, ಕುಣಿಯುತ್ತಾ ಸಾಗುವಾಗ ಕಂಡುಂಡ ಲೋಕಾನುಭವಗಳನ್ನು ಅಲ್ಲಲ್ಲಿ ಕಟ್ಟಿ ಹಾಡಿದ್ದು, ಭಾವ ತನ್ಮಯತೆಯಲ್ಲಿ ಮೂಡಿಬಂದ ಈ ರಚನೆಗಳು ಕವಿತೆಯ ಎಲ್ಲಾ ಕಾವ್ಯಾಂಶಗಳನ್ನು ತುಂಬಿ ನಿಂತವು. ಸಾಹಿತ್ಯ ಮತ್ತು ಸಂಗೀತದ ಸಾಮರಸ್ಯದ ಪ್ರತೀಕವಾದ ಹರಿದಾಸರ ರಚನೆಗಳು ಶುದ್ಧ ಭಾವಗೀತೆಗಳು. ಹರಿದಾಸರು ತಾವು ನುಡಿದಂತೆ ನಡೆದು ತಮ್ಮ ಜೀವನಾನುಭಗಳನ್ನು ಇತರರಿಗೆ ಹಂಚುವ ಮೂಲಕ ಸಮಾಜದ ಉನ್ನತಿಗೆ, ಜನಸಾಮಾನ್ಯರ ಉನ್ನತಿಗೆ ಶ್ರಮಿಸಿದ್ದಾರೆ. ಯಾವುದೋ ಒಂದು ಗಳಿಗೆಯಲ್ಲಿ ಹರಿಯುತ್ತ ಹರಿದ ಮನಸ್ಸು ಅವನ ಸುತ್ತ ಮುತ್ತ ಅವನ ಬಗ್ಗೆ ಅದಮ್ಯ ಪ್ರೀತಿಯನ್ನು ಬೆಳೆಸಿಕೊಂಡು, ಅವನನ್ನು ಕಣ್ಣಾರೆ ಕಾಣಲು ಬಯಸಿ, ಕನಸಿನಲ್ಲಿ ಕಂಡು ಪರಿತಪಿಸಿ ಕೊನೆಗೆ ತಮ್ಮ ಇಷ್ಟ ದೈವವನ್ನು ಕಣ್ಣಾರೆ ಕಂಡ ಅನುಭವ ಪಡೆದಿದ್ದಾರೆ. ತಮ್ಮ ಮನದ ಕಾತರ, ಕಳವಳಗಳು ಆರಿ, ಭಗವಂತನ ಸಾಕ್ಷಾತ್ಕಾರದ ತಂಪು ತಣಿಸಿದಾಗ ಆ ನೆಮ್ಮದಿ, ತೃಪ್ತಿಗಳು ಮುಂಖಾನುಮುಂಖವಾಗಿ ಕೀರ್ತನೆಗಳ ರೂಪದಲ್ಲಿ ಹೊರಹೊಮ್ಮಿದವು. ಹರಿದಾಸ ಸಾಹಿತ್ಯವು ಭಕ್ತಿ–ತತ್ವಗಳ ಹಿನ್ನಲೆಯಲ್ಲಿ ಉತ್ತಮ ಜೀವನ ಮೌಲ್ಯಗಳನ್ನು ಎತ್ತಿ ಹಿಡಿದು ಜನಸಾಮಾನ್ಯರಿಗೆ ಮಾರ್ಗದರ್ಶನ ಮಾಡಿದೆ.

ದಾಸ ಸಾಹಿತ್ಯವು ಒಟ್ಟಿನಲ್ಲಿ ಅವರ ಮನದ ಭಕ್ತಿಯ ತುಡಿತ, ಆಧ್ಯಾತ್ಮಿಕ ಸಾಧನೆ, ಭಕ್ತಿತತ್ವ ಬೋಧನೆ, ಸಾಮಾಜಿಕ ಕಳವಳಿ ಉತ್ತಮ ಮೌಲ್ಯಗಳ ಬಗೆಗಿನ ಕಾಳಜಿ ಎಲ್ಲವನ್ನೂ ಹೇಳುತ್ತದೆ. ಆ

ಕಾಲದ ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಏರುಪೇರುಗಳ ಪರಿಣಾಮವಾಗಿ ಸಂಕಷ್ಟಕ್ಕೆ ಸಿಲುಕಿ, ಭಯಭೀತರಾಗಿ ಅತಂತ್ರ ಸ್ಥಿತಿಯಲ್ಲಿದ್ದ ಜನಸಾಮಾನ್ಯರ ಭಾವನೆಗಳಿಗೆ ಮಾತಾದರು ಹರಿದಾಸರು.

ಹರಿದಾಸರು ತಮ್ಮ ಕೀರ್ತನೆಗಳ ಮೂಲಕ ಅಧ್ಯಾತ್ಮ ಸಾಧನೆ ಹಾಗೂ ಸಮಾಜಬೋಧನೆಯನ್ನು ಏಕಕಾಲಕ್ಕೆ ಕೈಗೊಂಡರು. ಸಮಕಾಲೀನ ಬದುಕಿನ ಸ್ಥಿತ್ಯಂತರಗಳನ್ನು ಸಂಸಾರದ ನಶ್ವರತೆಯನ್ನು ತಮ್ಮ ಕೀರ್ತನೆಗಳ ಮೂಲಕ ಪರಿಣಾಮಕಾರಿಯಾಗಿ ಬಿಂಬಿಸಿದರು. ಸಮಾಜದ ಲೋಪದೋಷಗಳನ್ನು ಮೃದುವಾಗಿ ಖಂಡಿಸಿ ಸಾಮಾಜಿಕ ಸ್ವಾಸ್ಥ್ಯ ಹಾಗೂ ಸಮಾಜದ ಉನ್ನತಿಗೆ ಕಾರಣರಾದರು. ದಾಸರ ಅಭಿವ್ಯಕ್ತಿಯ ಮಾಧ್ಯಮದಲ್ಲಿ ಭಾಷೆಯೂ ಒಂದಾಗಿದೆ. ಭಾಷೆಯ ಮತ್ತು ಚಿಂತನೆಯ ದಿಕ್ಕನ್ನು ಸಮಾಜದ ಕಡೆಗೆ ಹೊರಳಿಸಿದುದು. ದಾಸಸಾಹಿತ್ಯದಲ್ಲಿ ಒಂದು ಗಮನೀಯ ಅಂಶ. ಗಹನವಾದ ಧಾರ್ಮಿಕ ಅಂಶಗಳನ್ನು ಜನಸಾಮಾನ್ಯರಿಗೆ ಸುಲಭವಾಗಿ ತಿಳಿಯುವಂತೆ ಸರಳವಾದ ಕನ್ನಡದಲ್ಲಿ ಹೇಳಿದುದು ದಾಸರು ಮಾಡಿದ ವೈಚಾರಿಕ ಕ್ರಾಂತಿಯಾಗಿದೆ.

"ಸುಮಾರು ಒಂದುಸಾವಿರ ವರ್ಷಗಳ ಕನ್ನಡ ಸಾಹಿತ್ಯ ಇತಿಹಾಸವನ್ನು ಗಮನಿಸಿದರೆ ಜನಪರ ದೃಷ್ಟಿಧೋರಣೆಗಳನ್ನುಳ್ಳ ಎರಡು ಪ್ರಮುಖ ಘಟ್ಟಗಳನ್ನು ಕಾಣುತ್ತೇವೆ. ಒಂದು ೧೨ನೇ ಶತಮಾನದ ಶಿವಶರಣರ 'ವಚನಸಾಹಿತ್ಯ'ಯುಗ. ಎರಡು, ೧೫ನೇ ಶತಮಾನದಿಂದ ಪ್ರಾರಂಭವಾಗುವ ಹರಿದಾಸರ 'ದಾಸಸಾಹಿತ್ಯ' ಯುಗ. ಇವೆರಡೂ ಕನ್ನಡ ಸಾಹಿತ್ಯ ಪರಂಪರೆಯ ಸುವರ್ಣ ಅಧ್ಯಾಯಗಳು. ಕನ್ನಡಿಗರ ಜೀವನದಲ್ಲಿ ಕ್ರಾಂತಿಕಾರಕವಾದ ಜೀವನ ತತ್ವಗಳನ್ನು, ಆದರ್ಶ ವಿಚಾರಗಳನ್ನು ಜನರಿಗೆ ಅರ್ಥವಾಗುವ ಹಾಗೆ ಬೋಧಿಸಿದವರು ಶರಣರು ಮತ್ತು ದಾಸರು. ನಡೆನುಡಿಗಳೊಂದಾಗಿ ಬಾಳಿದ ಇವರ ಬಾಳು ಇವರ ಬೋಧನೆಯಂತೆಯೇ ಜನರಿಗೆ ಆದರ್ಶಪ್ರಾಯವಾಯಿತು"[೧].

'ಕೀರ್ತನೆ' ಎಂಬುದು ಅದರ ಹೆಸರೇ ತಿಳಿಸುವಂತೆ ಮೂಲತಃ ಭಗವಂತನ ಗುಣಲೀಲೆಗಳನ್ನು ಕೀರ್ತಿಸುವ ಒಂದು ಪ್ರಕಾರ. ಈ ದೃಷ್ಟಿಯಿಂದ ಸ್ತೋತ್ರ ಪ್ರಕಾರಕ್ಕೆ ಸೇರಿದ್ದು. ಕನ್ನಡದಲ್ಲಿ ಕೀರ್ತನೆ ಸಾಹಿತ್ಯದ ಬೆಳವಣಿಗೆ ಸಂದರ್ಭದಲ್ಲಿ ಶ್ರೀ ಮಧ್ವಾಚಾರ್ಯರ 'ದ್ವಾದಶಸ್ತೋತ್ರ'ದ ಪ್ರೇರಣೆಯನ್ನು ಕೆಲವರು ಗುರುತಿಸುತ್ತಾರೆ.

'ಸಾಹಿತ್ಯ, ಸಂಗೀತ, ಮತಬೋಧನೆ, ನೀತಿಬೋಧೆ ಸಮಾಜರಚನೆಗಳ ವಿಷಯದಲ್ಲಿ ಹರಿದಾಸರು ಮಾಡಿದ ಸೇವೆ ಅಪಾರವಾದುದು. ಸಮಾಜದಲ್ಲಿ ನೈತಿಕ ಉನ್ನತಿಯನ್ನು ಸಾಧಿಸುವುದೇ ಎಲ್ಲಾ ದಾಸರ ಗುರಿಯಾಗಿತ್ತು. ಹೀಗಾಗಿ ಅವರ ಕೀರ್ತನೆಗಳಲ್ಲಿ ಮತ ಪ್ರಚಾರಕ್ಕಿಂತ ನೀತಿಬೋಧೆ, ಶುದ್ಧಾಚರಣೆ, ಹರಿಭಕ್ತಿ ಸಾಧನೆ ಮುಂತಾದವುಗಳೇ ಪ್ರಮುಖವಾಗಿ ಗೋಚರಿಸುತ್ತವೆ. ಕರ್ನಾಟಕ ಹರಿದಾಸರ ಕೀರ್ತನೆಗಳಲ್ಲಿ ಅಂದಿನ ಸಮಾಜ ಚಿತ್ರಣ ದೊರೆಯುತ್ತದೆ. ಹರಿದಾಸರ ನೀತಿಬೋಧೆ ಅಗಾಧವಾದುದಾಗಿದೆ. ಭಕ್ತಿಯಲ್ಲಿ ನವವಿಧ ಭಕ್ತಿಯ ಮಹಿಮೆಯನ್ನು ಸಾರಿದ ದಾಸರು, ಆದರ್ಶ ನೀತಿ

ಬೋಧಕರಾಗಿದ್ದಾರೆ. ತಮ್ಮ ಜೀವಿತ ಕಾಲದಲ್ಲಿ ಸಮಾಜದಲ್ಲಿ ನಡೆದ ಅನ್ಯಾಯ ಅನೀತಿಗಳನ್ನು ಬಲವಾಗಿ ಖಂಡಿಸಿದ್ದಾರೆ.[೨]

ಜನಸಾಮಾನ್ಯರಿಗೆ ಕಬ್ಬಿಣದ ಕಡಲೆಯಾದ ವೇದ, ಶಾಸ್ತ್ರ, ಪುರಾಣಗಳೊಳಗಣ ನೀತಿಸುಧೆಯನ್ನು ದಾಸರ ಕೀರ್ತನೆಗಳು ಸುಲಭವಾಗಿ ಒದಗಿಸುತ್ತವೆ. ಮಾನವನನ್ನು ದಾನವನನ್ನಾಗಿಸದೆ, ದೈವತ್ವಕ್ಕೇರಿಸುವುದೇ ಹರಿದಾಸರ ಕೀರ್ತನೆಗಳ ಉದ್ದೇಶ. ಹರಿದಾಸರು ತಮ್ಮ ಕೀರ್ತನೆಗಳ ಮೂಲಕ ಭಕ್ತಿಯ ಪರಿಕಲ್ಪನೆಗಳನ್ನು, ಕುರುಡು ನಂಬಿಕೆಯ ಮೌಢ್ಯದ ಬಿಗಿಮುಷ್ಠಿಯಿಂದ ಬಿಡಿಸಿದರು. ಅವರ ಕೀರ್ತನೆಗಳು ಜನರ ದಿನದಿನದ ಅನುಭವಗಳಿಗೆ ನಾಲಿಗೆಯಾದವು. ಅಧ್ಯಾತ್ಮ ವಿದ್ಯೆಯ ರಸಸಂಪರ್ಕದಿಂದ ವಂಚಿತರಾಗಿದ್ದ ಜನರನ್ನು ಅವು ಸ್ಪಂದಿಸಿದವು. ನಿತ್ಯದ ಬದುಕಿನಲ್ಲಿ ಸಜ್ಜನಿಕೆಯನ್ನು, ಸಾತ್ವಿಕತೆಯನ್ನು, ಸಭ್ಯತೆಯನ್ನು ಸಮಾಧಾನವನ್ನು ಉದ್ದೀಪಿಸುವ ಮೂಲಕ ಹೊಸದೊಂದು ಸುಸಂಸ್ಕೃತ ಸಮಾಜದ ನಿರ್ಮಾಣದಲ್ಲಿ ಕ್ರಿಯಾತ್ಮಕವಾಗಿ ದಾಸರ ಕೀರ್ತನೆಗಳು ತಮ್ಮನ್ನು ತೊಡಗಿಸಿಕೊಂಡವು. ಹರಿದಾಸರು ಅಧ್ಯಾತ್ಮದ ಧ್ಯೇಯದಲ್ಲಿ ಹೊರಟರೂ, ಅವರು ಹೊರಟದ್ದು ಸಮಾಜಮುಖಿಗಳಾಗಿ ಸಮಾಜದ ನೋವು ನಲಿವುಗಳಿಗೆ ಸ್ಪಂದಿಸಿದಾಗಲೇ ಬದುಕಿನ ಸಾರ್ಥಕತೆಯೆಂದು ನಂಬಿದ್ದ ಹರಿದಾಸರು ಮೌಲ್ಯಾಧಾರಿತ ಸಮಾಜದ ನಿರ್ಮಾಣಕ್ಕೆ ಸಕ್ರಿಯವಾಗಿ ಪ್ರಯತ್ನಿಸಿದರು.[೩]

ದಾಸರ ಕೀರ್ತನೆಗಳಲ್ಲಿ ಭಕ್ತಿ ಪ್ರತಿಪಾದನೆ ಅಷ್ಟೇ ಅಲ್ಲ. ತಮ್ಮ ಸುತ್ತಲಿನ ಬದುಕಿನ ಪರಿಸರವನ್ನು ಹಸನಾಗಿಸುವ ಕಾಳಜಿಯಿದೆ. ಸಾಮಾಜಿಕ ಹೊಣೆಗಾರಿಕೆಯಿದೆ. ಕೀರ್ತನೆಗಳಲ್ಲಿ ಲೌಕಿಕ ಬದುಕನ್ನು ಉತ್ತಮಿಸಿಕೊಂಡು ಮನುಷ್ಯ ಪ್ರೇಮವನ್ನು ಬೆಳೆಸಿಕೊಳ್ಳುವ, ಬದುಕಿನ ಸವಾಲುಗಳನ್ನು ಎದುರಿಸುವ ಮನುಷ್ಯರನ್ನು ಸಮಾಜೀಕರಿಸುವ ಅಂಶಗಳು ಪರಿಣಾಮಕಾರಿಯಾಗಿ ಮೂಡಿಬಂದಿವೆ. ದಾಸರ ಚಿಂತನಾಕ್ರಮ ಜನಪರವಾದ ಅವರ ಸಾಂಸ್ಕೃತಿಕ ನಿರ್ವಚನ ಕೀರ್ತನೆಗಳಲ್ಲಿ ಸೊಗಸಾಗಿ ಮೂಡಿ ಬಂದಿದೆ.[೪]

ಭಕ್ತಿರಸದ ಮೂಲ ಉಗಮಕ್ಕೆ ದೇವರ ಸಂಕೇತವೆನಿಸಿದ ಮೂರ್ತಿ, ಪ್ರತಿಮೆಗಳು ಕಾರಣವಾಗಿವೆ. ಜಗತ್ತಿನ ಪ್ರತಿಯೊಂದು ಜನಾಂಗವೂ ಒಂದಿಲ್ಲೊಂದು ರೂಪದಿಂದ ಮೂರ್ತಿಪೂಜೆಯನ್ನು ಹೊಂದಿದೆ. ಕೆಲವೆಡೆ ಸಾಕಾರವಿದ್ದರೆ, ಇನ್ನು ಕೆಲವೆಡೆ ನಿರಾಕಾರವಿದೆ. ಭಾರತದಲ್ಲಿ ಈ ಮೂರ್ತಿಪೂಜೆಯ ಪ್ರಾಚೀನತೆಯು ಹರಪ್ಪಾ, ಮೊಹೆಂಜೊದಾರೊ, ಸಂಸ್ಕೃತಿಗಳವರೆಗೂ ಹೋಗುತ್ತದೆ. ಅಲ್ಲಿಯ ಅವಶೇಷಗಳ ಆಧಾರದಿಂದ ಮೊದಲಿನಿಂದಲೂ ಭಕ್ತಿಯ ಪ್ರವಾಹವು ಒಂದಿಲ್ಲೊಂದು ರೀತಿಯಲ್ಲಿ ಒಂದಿಲ್ಲೊಂದು ಮಾರ್ಗದಲ್ಲಿ ಹರಿಯುತ್ತ ಬಂದಿದೆ ಎಂದು ಹೇಳಬಹುದು. ಒಂದೆಡೆ ವಿಷ್ಣುಪರವಾಗಿದ್ದರೆ ಮತ್ತೊಂದೆಡೆ ಶಿವಪರವಾಗಿದೆ.

ಕನ್ನಡ ನಾಡಿನ ಭಕ್ತಿಪರಂಪರೆಯಲ್ಲಿ ಹರಿದಾಸರು ವಚನ ಮಹಾನುಭಾವರ ಸಂಪ್ರದಾಯಕ್ಕೆ ಉತ್ತರಾಧಿಕಾರಿಗಳಾಗಿ ಬಂದ ಮಹಾನುಭಾವರು. ಹರಿದಾಸರು ಶ್ರೀ ಹರಿಯನ್ನು ಆರಾಧ್ಯ ದೈವವನ್ನಾಗಿಟ್ಟುಕೊಂಡು ಶ್ರೀಹರಿಯ ಸ್ತುತಿಯೊಂದಿಗೆ ಸಮಾಜಬೋಧನಾಪರವಾದ ಕೀರ್ತನೆ, ಸುಳಾದಿ

ಉಗಾಭೋಗಗಳನ್ನು ರಚಿಸಿದರು. ಶಿವಶರಣರಂತೆ ಆತ್ಮಸಾಕ್ಷಾತ್ಕಾರ ಹಾಗೂ ನೀತಿಬೋಧೆಗಳು ದಾಸ ವರೇಣ್ಯರೆಲ್ಲರ ಗುರಿಯಾಗಿದ್ದವು. ಕನ್ನಡವಾಙ್ಮಯದಲ್ಲಿ ಸಾಹಿತ್ಯಕ್ಕಿದ್ದ ಪ್ರತಿಭೆ ಹಾಗೂ ವಿಶೇಷ ಸ್ಥಾನಗಳು ದಾಸ ಸಾಹಿತ್ಯಕ್ಕೂ ಇವೆ. ಆದ್ದರಿಂದಲೇ ದಾಸ ಸಾಹಿತ್ಯ, ಶರಣ ಸಾಹಿತ್ಯಗಳೆರಡನ್ನೂ ವಿದ್ವಾಂಸರು "ತವನಿಧಿ" ಎಂದು ಕರೆದಿದ್ದಾರೆ.[೫]

ಭಕ್ತಿಕಾವ್ಯವು ಸಂಪೂರ್ಣ ಅರ್ಪಣಾ ವೃತ್ತಿಯಾಗಿದೆ. ಭಕ್ತಿ ಕಾವ್ಯದ ಬಗ್ಗೆ ತಾಳ್ತಜೆ ವಸಂತಕುಮಾರರು. 'ನಾರದ ಸೂತ್ರ' ಪ್ರಕಾರ ಭಕ್ತನಲ್ಲಿ ಇರಬೇಕಾದ ಒಂದೇ ಪಾತ್ರತೆಯೆಂದರೆ, ಸಂಪೂರ್ಣ ಅರ್ಪಣಾ ವೃತ್ತಿಯಾಗಿದೆ. ಭಾಗವತವು ಇದನ್ನು ಸ್ವಾರ್ಥ ತ್ಯಾಗದ ಮಜಲಿಗೆ ವಿಸ್ತರಿಸುತ್ತದೆ. ರಾಮಾಯಣದ ಪ್ರಕಾರ "ಭಕ್ತಿಯ ಉತ್ಕಟವಾದ ಪ್ರೀತಿ" ಯಾಗಿದೆ. ರಾಮಾನುಜಾಚಾರ್ಯರು ಅನುಗಾಲವೂ ಸ್ನೇಹಪೂರ್ವಕವಾಗಿ ಮಾಡುವ ಭಗವಂತನ ಧ್ಯಾನವನ್ನು ಭಕ್ತಿಯೆನ್ನುತ್ತಾರೆ. ಮಧ್ವಾಚಾರ್ಯರ ಅಭಿಪ್ರಾಯದಲ್ಲಿ ಭಕ್ತಿಯು ಮುಕ್ತಿಯನ್ನು ದೊರಕಿಸಿಕೊಡುವ ಸಾಧನವಾದ ಭಗವಂತನ ಮೇಲಿನ ನಂಬಿಕೆಯಾಗಿದೆ ಎಂಬುದಾಗಿ ಹೇಳಿದ್ದಾರೆ.[೬]

ಕೀರ್ತನ ಸಾಹಿತ್ಯವು ಪಲ್ಲವಿ, ಅನುಪಲ್ಲವಿ ಹಾಗೂ ಚರಣಗಳಿಂದ ಕೂಡಿದ ರಾಗಯುಕ್ತ ಮತ್ತು ತಾಳಬದ್ಧವಾದ ರಚನೆಯಾಗಿದೆ. ಕೀರ್ತನೆಗಳ ವಸ್ತು ಮೇಲ್ನೋಟಕ್ಕೆ ಭಿನ್ನವಾಗಿ ಕಂಡರೂ, ಎಲ್ಲಾ ಕೀರ್ತನೆಗಳ ಆಂತರ್ಯ ಭಕ್ತಿಯಾಗಿದೆ. ಜನಜೀವನದ ಸಾಮಾನ್ಯ ಘಟನೆಗಳು, ಜನಸಾಮಾನ್ಯರ ನಡವಳಿಕೆ, ನೀತಿ ಮಾತುಗಳು ದಾಸರ ಕೀರ್ತನೆಗಳಿಗೆ ವಸ್ತುವಾಗಿವೆ.

ಕನಕದಾಸರು ಸುಮಾರು ಕ್ರಿ. ಶ. ೧೫೫೦ ರ ಕಾಲಮಾನದಲ್ಲಿ ಬದುಕಿದ್ದರೆಂದು ಗುರುತಿಸಲಾಗಿದೆ. ಕನಕ, ತಿಮ್ಮಪ್ಪನಾಯಕ ಎಂಬ ಹೆಸರುಗಳನ್ನು ಪೂರ್ವಾಶ್ರಮದಲ್ಲಿ ಹೊಂದಿರುವ ಕನಕದಾಸರು ಇಂದಿನ ಹಾವೇರಿ ಜಿಲ್ಲೆಯ ಬಾಡ ಗ್ರಾಮದಲ್ಲಿ ಜನಿಸಿದರು. ಕಾಲಾನಂತರದಲ್ಲಿ ಇಲ್ಲಿಗೆ ಸಮೀಪದ ಕಾಗಿನೆಲೆಗೆ ಬಂದು ನೆಲೆಸಿದರು. ಬರುವಾಗ ತಮ್ಮ ಆರಾಧ್ಯದೈವವಾದ ಆದಿಕೇಶವನ ಮೂರ್ತಿಯನ್ನು ಜೊತೆಯಲ್ಲಿ ತಂದು ಕಾಗಿನೆಲೆಯಲ್ಲಿ ಸ್ಥಾಪಿಸಿದರು. ಬಾಡದಾದಿಕೇಶವ, ಕಾಗಿನೆಲೆಯಾದಿಕೇಶವ ಎಂಬ ಎರಡೂ ಅಂಕಿತನಾಮಗಳು ಅವರ ಕೀರ್ತನೆಗಳಲ್ಲಿ ಕಂಡುಬರುತ್ತವೆ. ಕನಕದಾಸರು ಕೀರ್ತನೆಗಳನ್ನು ಬರೆದಿರುವಂತೆಯೇ ಷಟ್ಪದಿ ಮತ್ತು ಸಾಂಗತ್ಯದಲ್ಲಿ ಕಾವ್ಯವನ್ನೂ ಬರೆದಿದ್ದಾರೆ. ಹರಿಭಕ್ತಿಸಾರ, ನಳಚರಿತ್ರೆ, ಮೋಹನತರಂಗಿಣಿ ಮತ್ತು ರಾಮಧಾನ್ಯಚರಿತೆ ಅವರ ಕೃತಿಗಳು.

ಪ್ರಸ್ತುತ ಕನಕದಾಸರ ಕೀರ್ತನೆಗಳನ್ನು ಅಧ್ಯಯನಕ್ಕಾಗಿ ಆಯ್ದುಕೊಳ್ಳಲಾಗಿದೆ. ಒಟ್ಟಾರೆಯಾಗಿ ಕಾವ್ಯದಲ್ಲಿ ಪ್ರತಿಮಾ ನಿರ್ಮಾಣ ಹೇಗೆ ನಡೆಯುತ್ತದೆ? ಯಾಕೆ ನಡೆಯುತ್ತದೆ? ಅದರಿಂದ ಕಾವ್ಯಕ್ಕೆ ಸಿಗುವ ಪ್ರಯೋಜನ ಏನು? ಇತ್ಯಾದಿ ವಿಚಾರಗಳ ಬಗ್ಗೆ ಈಗಾಗಲೇ ಅಧ್ಯಯನಗಳು ನಡೆದಿವೆ. ಕನಕದಾಸರ ಕೀರ್ತನೆಗಳ ವಸ್ತು ಮತ್ತು ತಂತ್ರಗಳ ಹಿನ್ನೆಲೆಯಲ್ಲಿಯೂ ಅಧ್ಯಯನಗಳು ನಡೆದಿವೆ. ಈ ಹಿನ್ನೆಲೆಯಲ್ಲಿ ಕನಕದಾಸರು ಪ್ರತಿಮೆಗಳನ್ನು ಬಳಸಿದ ಬಗ್ಗೆ ವಿಸ್ತೃತವಾದ ಅಧ್ಯಯನವನ್ನು ನಡೆಸುವುದು ಪ್ರಸ್ತುತವಾಗುತ್ತದೆ.

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನಗಳು:

ಕನಕದಾಸರನ್ನು ಅಥವಾ ಒಟ್ಟಾಗಿ ದಾಸಸಾಹಿತ್ಯವನ್ನು ಭಕ್ತಿ ಕಾವ್ಯವೆಂದು ಸ್ಥೂಲವಾಗಿ ಪರಿಗಣಿಸಲಾಗುತ್ತದೆ. ಕನಕದಾಸರ ಕೃತಿಗಳನ್ನು ವರ್ಗ ಸಂಘರ್ಷದ ಪ್ರಕ್ರಿಯೆಯ ಭಾಗವಾಗಿ ನೋಡುವವರಿದ್ದಾರೆ. ಅದೇ ರೀತಿ ಬ್ರಾಹ್ಮಣರೇ ಪ್ರಧಾನವಾಗಿದ್ದ ದಾಸ ಪರಂಪರೆಯ ನಡುವೆ ಒಬ್ಬ ಶೂದ್ರನಾಗಿ ಇಟ್ಟು ಕನಕದಾಸರನ್ನು ನೋಡುವವರಿದ್ದಾರೆ. ಈ ನಿಟ್ಟಿನಲ್ಲಿ ಕನಕದಾಸರ ಕೀರ್ತನೆಗಳು ಸಾಮಾಜಿಕತೆಗೆ ಒತ್ತು ನೀಡಿವೆಯೋ ಆಧ್ಯಾತ್ಮಿಕತೆಗೆ ಒತ್ತು ನೀಡಿವೆಯೇ ಅಥವಾ ಇವೆರಡರ ನಡುವೆ ಕನಕದಾಸರು ಸಮತೋಲನ ಸಾಧಿಸಿದ ಬಗೆ ಹೇಗೆ ಎಂಬುದು ಅಧ್ಯಯನ ಮಾಡಬೇಕಾದ ಒಂದು ಮುಖ್ಯ ಸಮಸ್ಯೆಯಾಗಿದೆ. ಅದೇ ರೀತಿ ಪ್ರತಿಮೆಗಳು ಕೀರ್ತನೆಗಳ ಕಾವ್ಯಾತ್ಮಕತೆಗೆ ನೀಡಿದ ಕೊಡುಗೆಯೇನು ಎಂಬುದು ಕೂಡಾ ಪರಿಶೀಲನಾರ್ಹ ವಿಚಾರ.

ಕನಕದಾಸರ ಜೀವನ ಮತ್ತು ವಿಚಾರಧಾರೆಗಳ ಹಿನ್ನೆಲೆಯಲ್ಲಿ ಅವರ ಕೀರ್ತನೆಗಳಲ್ಲಿ ಕಂಡುಬರುವ ಪ್ರತಿಮೆಗಳ ವಿಶಿಷ್ಟ ಅಂಶಗಳನ್ನು ಪರಿಶೀಲಿಸಿ ವಿಮರ್ಶಿಸುವ ದೃಷ್ಟಿಯಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಕನಕದಾಸರ ಬಗ್ಗೆ ಬಂದಿರುವ ವಿಭಿನ್ನ ವ್ಯಾಖ್ಯಾನಗಳನ್ನು ಪರಾಮರ್ಶಿಸುವುದು ಹಾಗೂ ಕೀರ್ತನೆಗಳಲ್ಲಿ ಬಳಕೆಯಾದ ಪ್ರತಿಮೆಗಳ ಮೂಲಕ ಅವರು ವ್ಯಕ್ತಪಡಿಸಿರುವ ಆಶಯಗಳನ್ನು ಕಂಡುಕೊಳ್ಳುವುದು ಈ ಅಧ್ಯಯನದ ಮುಖ್ಯ ಉದ್ದೇಶ. ಅದೇ ರೀತಿ ಇತರ ದಾಸರ ಕೀರ್ತನೆಗಳಿಗೆ ಹೋಲಿಸಿದಾಗ ಅವರ ಪ್ರತಿಮೆಗಳ ವೈಶಿಷ್ಟ್ಯ ಮತ್ತು ಆ ಮೂಲಕ ವ್ಯಕ್ತವಾಗುವ ಕನಕದಾಸರ ಕಾವ್ಯತತ್ವಗಳನ್ನು ಅರ್ಥ ಮಾಡಿಕೊಳ್ಳುವ ಉದ್ದೇಶವೂ ಈ ಅಧ್ಯಯನಕ್ಕಿದೆ. ಅಧ್ಯಯನದ ಅನುಕೂಲತೆಯ ದೃಷ್ಟಿಯಿಂದ ಹಾಗೂ ಚೌಕಟ್ಟನ್ನು ರೂಪಿಸಿಕೊಳ್ಳುವ ದೃಷ್ಟಿಯಿಂದ ಪ್ರಧಾನವಾಗಿ ಕನಕದಾಸರ ಕೀರ್ತನೆಗಳನ್ನು ಮಾತ್ರ ಇಲ್ಲಿ ಪರಿಗಣಿಸಲಾಗುತ್ತದೆ. ಅವರ ರಾಮಧಾನ್ಯಚರಿತೆಯಂತಹ ದೀರ್ಘ ಕಾವ್ಯಗಳನ್ನು ಆನುಷಂಗಿಕವಾಗಿಯಷ್ಟೇ ಬಳಸಿಕೊಳ್ಳಲಾಗುವುದು.

ಕನಕದಾಸರ ಲಭ್ಯ ಕೀರ್ತನೆಗಳನ್ನು ಅಂದರೆ ಪ್ರೊ. ಎ.ವಿ. ನಾವಡ ಮತ್ತು ಡಾ। ಗಾಯತ್ರಿ ನಾವಡ ಅವರು ಸಂಪಾದಿಸಿರುವ 'ಸಾವಿರಾರು ಕೀರ್ತನೆಗಳು' ಎಂಬ ಕೃತಿಯನ್ನು ಹಾಗೂ ಕೀರ್ತನೆಗಳ ಇತರ ಸಂಕಲನಗಳನ್ನು ಮೂಲ ಆಕರಗಳಾಗಿ ಬಳಸಿಕೊಂಡು ಅಧ್ಯಯನ ಮಾಡಲಾಗುವುದು. ಕನಕದಾಸರು ದಾಸರ ಪೈಕಿ ಸಾಮಾಜಿಕವಾದ ಚಿಂತನೆಯನ್ನು ನಡೆಸಿದವರಲ್ಲಿ ಪ್ರಮುಖರು. ಆಧ್ಯಾತ್ಮಿಕ ಮತ್ತು ಸಾಮಾಜಿಕ ಕಾಳಜಿಯನ್ನು ಬೆರೆಸಿದವರು ಕನಕದಾಸರು. ಪ್ರತಿಮೆಗಳ ಮೂಲಕ ಯಾವ ಯಾವ ಸಾಮಾಜಿಕ ಹಾಗೂ ಆಧ್ಯಾತ್ಮಿಕ ಆಶಯಗಳನ್ನು ವ್ಯಕ್ತಪಡಿಸಲು ಯತ್ನಿಸಿದ್ದಾರೆ ಎಂಬುದನ್ನು ಈ ಅಧ್ಯಯನದಲ್ಲಿ ಪರಿಶೀಲಿಸಬೇಕಾಗುತ್ತದೆ. ಹೀಗಾಗಿ ಈ ಅಧ್ಯಯನದಲ್ಲಿ ವಿವಿಧ ಸಾಮಾಜಿಕ ಸಿದ್ಧಾಂತಗಳನ್ನು ಹಾಗೂ ಭಾರತೀಯ ತತ್ವಶಾಸ್ತ್ರದಲ್ಲಿ ಅಭಿವ್ಯಕ್ತವಾದ ಆಧ್ಯಾತ್ಮಿಕ ತತ್ವಗಳನ್ನು ದೃಷ್ಟಿಯಲ್ಲಿಟ್ಟುಕೊಳ್ಳಬೇಕಾಗುತ್ತದೆ. ಪ್ರತಿಮೆಗಳ ಬಳಕೆಗೆ ಸಂಬಂಧಿಸಿದಂತೆ ಪ್ರಾಚೀನ ಹಾಗೂ ಆಧುನಿಕ ಸಾಹಿತ್ಯ ಮೀಮಾಂಸೆಗಳ ತತ್ವಗಳನ್ನೂ ಅಧ್ಯಯನದಲ್ಲಿ ಪರಿಗಣಿಸಲಾಗುತ್ತದೆ.

ಟಿಪ್ಪಣಿಗಳು:

೧. ಟಿ.ಎನ್. ನಾಗರತ್ನ, ಕನಕದಾಸ, ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ, ಪುಟ ೨೪೩

೨. ಬೆಟಗೇರಿ ಕೃಷ್ಣಶರ್ಮ ಮತ್ತು ಹುಚ್ಚರಾವ ಬೆಂಗೇರಿ, ಕನಕದಾಸರ ಹಾಡುಗಳು, ಪುಟ ೧೭.

೩. ಡಾ. ಅರಳು ಮಲ್ಲಿಗೆ ಪಾರ್ಥಸಾರಥಿ, ಮುನ್ನುಡಿ, ಸಾವಿರಾರು ಕೀರ್ತನೆಗಳು, ಪುಟ ೪.

೪. ಡಾ. ಎಸ್.ಎಸ್. ಅಂಗಡಿ, ದಾಸ ಸಾಹಿತ್ಯ ಭಾಷೆ, ಪುಟ ೭೯.

೫. ಶ್ರೀ ಕೃಷ್ಣಶರ್ಮ ಬೆಟಗೇರಿ, ಹುಚ್ಚರಾವ ಬೆಂಗೇರಿ, ಕನಕದಾಸರ ಹಾಡುಗಳು, ಪುಟ ೭

೬. ಡಾ. ತಾಳ್ತಜೆ ವಸಂತಕುಮಾರ, ಮುತ್ತಿನಸತ್ತಿಗೆ, ಪುಟ ೪೭-೪೮.

ಅಧ್ಯಾಯ ೨

ಸಾಹಿತ್ಯ ಸಮೀಕ್ಷೆ

ಅಧ್ಯಾಯ – ೨

ಸಾಹಿತ್ಯ ಸಮೀಕ್ಷೆ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮುಖ್ಯ ಕೀರ್ತನೆಕಾರರು ಅಥವಾ ಭಕ್ತಿ ಕವಿ ಎಂದು ಪ್ರಸಿದ್ಧರಾದ ಕನಕದಾಸರ ಬಗ್ಗೆ ಸಾಕಷ್ಟು ಅಧ್ಯಯನಗಳಾಗಿವೆ. ಅವುಗಳು ಪ್ರಧಾನವಾಗಿ ಕನಕದಾಸರನ್ನು ಒಬ್ಬ ಭಕ್ತರಾಗಿ, ಅಧ್ಯಾತ್ಮ ಸಾಧಕರಾಗಿ, ಸಮಾಜ ವಿಮರ್ಶಕರಾಗಿ, ಸಮಾಜ ಸುಧಾರಕರಾಗಿ, – ಹೀಗೆ ವಿವಿಧ ನೆಲೆಗಳಿಂದ ವಿಶ್ಲೇಷಣೆಗೆ ಒಳಪಡಿಸಿದೆ.

ಸಂಶೋಧನೆಯ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಆದ ಅಧ್ಯಯನಗಳನ್ನು ಸಮೀಕ್ಷಿಸುವುದು ಈ ಅಧ್ಯಾಯದ ಉದ್ದೇಶ. ಈ ರೀತಿಯ ಸಾಹಿತ್ಯ ಸಮೀಕ್ಷೆಯ ಉದ್ದೇಶಗಳನ್ನು ಕೆ. ಶಿವರುದ್ರಪ್ಪನವರು ಈ ರೀತಿಯಾಗಿ ತಿಳಿಸಿದ್ದಾರೆ–

೧. ‘‘ಸಂಶೋಧನಾ ವಿಷಯ ಕುರಿತಂತೆ ಈ ಹಿಂದೆ ನಡೆದಿರುವ ಸಂಶೋಧನಾ ಬೆಳವಣಿಗೆಗಳನ್ನು /ಜ್ಞಾನವನ್ನು ತಿಳಿಯುವುದು.

೨. ಸಂಶೋಧನಾ ಪ್ರಮೇಯಕ್ಕೆ / ವಿಷಯಕ್ಕೆ ಸಂಬಂಧಿಸಿದಂತೆ ಪ್ರಮುಖವಾದ ಪರಿಭಾವನೆಗಳನ್ನು ಗುರುತಿಸುವುದು; ಅವುಗಳ ನಡುವಣ ಸಂಭಾವ್ಯ ಸಂಬಂಧಗಳನ್ನು ಗುರುತಿಸುವುದು; ನಂತರ ಸಂಶೋಧನೆಗೆ ಅರ್ಹವಾದ ಊಹೆಗಳನ್ನು ರೂಪಿಸುವುದು.

೩. ಸಂಶೋಧನಾ ಅಂತರಗಳನ್ನು / ಕೊರತೆಗಳನ್ನು ಗುರುತಿಸಿ ಹೊಸ ಸಂಶೋಧನೆಯ ವ್ಯಾಪ್ತಿ ಮತ್ತು ಸ್ವರೂಪವನ್ನು ನಿರ್ಧರಿಸುವುದು.

೪. ಸೂಕ್ತ ಸಂಶೋಧನಾ ವೈಧಾನಿಕತೆ, ಸಂಶೋಧನಾ ವಿನ್ಯಾಸ, ಮಾಪಕ, ಪರಿಭಾವನೆಗಳು ಮತ್ತು ವಿಶ್ಲೇಷಣೆಯ ತಂತ್ರಗಳನ್ನು ನಿರ್ಧರಿಸುವುದು.

೫. ಇತರೆ ಸಂಶೋಧಕರು ಬಳಸಿದ ಅಂಕಿ ಅಂಶಗಳ ಮೂಲಕ ಸಂಶೋಧನಾ ವಿನ್ಯಾಸವನ್ನು ನಿರೂಪಿಸಿದ ತೀರ್ಮಾನಗಳ ಸಮಂಜಸತೆಯನ್ನು ಪರಿಶೀಲಿಸುವುದು.

೬. ಇತರ ಸಂಶೋಧಕರು ತಮ್ಮ ಸಂಶೋಧನಾ ವರದಿಗಳ ಸ್ವರೂಪವನ್ನು ಹೇಗೆ ನಿರ್ಧರಿಸಿದ್ದಾರೆಂದು ತಿಳಿಯುವುದು. ’’ [೧]

ಈ ಹಿನ್ನೆಲೆಯಲ್ಲಿ ಕನಕದಾಸರ ಸಾಹಿತ್ಯದ ಕುರಿತಂತೆ ನಡೆದ ಅಧ್ಯಯನ, ಸಂಶೋಧನೆಗಳನ್ನು ಈ ಭಾಗದಲ್ಲಿ ಸಮೀಕ್ಷೆ ಮಾಡಲಾಗುವುದು. ಕನಕದಾಸರು ಕೀರ್ತನಕಾರರಷ್ಟೇ ಅಲ್ಲ , ಕನ್ನಡಿಗರು ಮೆಚ್ಚಿದಂತಹ ಕವಿಯೂ ಆಗಿದ್ದಾರೆ. ಕನಕದಾಸರ ಅನೇಕ ಕೀರ್ತನೆಗಳಲ್ಲಿ ಜೀವನ ಮೌಲ್ಯಗಳು ಕಂಡು ಬರುತ್ತವೆ. ಅವು ಸಮಾಜದ ವಾಸ್ತವದ ದರ್ಶನವನ್ನು ಮಾಡಿಸುತ್ತವೆ. ಜಾತಿ, ಕುಲಗಳು ಭಾರತೀಯ ಸಮಾಜದಲ್ಲಿ ಮಾನವ ಸಂಬಂಧಗಳ ನಡುವೆ ವಿನಾಕಾರಣವಾದ ಅಸಮಾನತೆಗಳನ್ನು ಸೃಷ್ಟಿಸಿದೆ. ಮಾನವ ಕಳಕಳಿಯ ಮನಸಂಪನ್ನತೆಯ ವ್ಯಕ್ತಿತ್ವಗಳನ್ನು ಗೌರವಿಸುವ ಅಧ್ಯಾತ್ಮಿಕ ನೆಲೆ ಕನಕದಾಸರದು. ಕುಲದ ಕಾರಣವಾಗಿಯೇ ಮತ್ತು ಅದನ್ನು ನೆಲೆಗೊಳಿಸಬೇಕೆಂದು ಕಾತರಿಸುವವರ ಬಗೆಗೆ ‘ಕುಲ ಕುಲ

ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ?' ಎಂದು ಪ್ರಶ್ನಿಸುತ್ತಲೇ ಮೌಲ್ಯಗಳನ್ನು ಆಧರಿಸಿದ ಅಧ್ಯಾತ್ಮಗಳನ್ನು ಎತ್ತಿ ಹಿಡಿಯುತ್ತಾರೆ.

ದಾಸ ಸಾಹಿತ್ಯಕ್ಕೆ ಕನಕದಾಸರ ಕೊಡುಗೆ ಅಪಾರ. ಮೋಹನ ತರಂಗಿಣಿ, ನಳಚರಿತ್ರೆ, ರಾಮಧಾನ್ಯ ಚರಿತ್ರೆ, ಹರಿಭಕ್ತಿಸಾರ, ನೃಸಿಂಹಸ್ತವ ಎಂಬ ಕೃತಿಗಳನ್ನು ರಚಿಸಿರುವುದೇ ಅಲ್ಲದೆ ಅಪಾರ ಸಂಖ್ಯೆಯ ಕೀರ್ತನೆಗಳು, ಮುಂಡಿಗೆಗಳು, ಸುಳಾದಿಗಳು, ಉದಯರಾಗಗಳು, ಉಗಾಭೋಗಗಳನ್ನು ರಚಿಸಿ ದಾಸ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ತಮ್ಮ ಕೃತಿಗಳಲ್ಲಿ ತುಂಬಿ ತುಳುಕುವ ಆಧ್ಯಾತ್ಮಿಕ, ಸಾಮಾಜಿಕ, ವೈಚಾರಿಕ ಪ್ರಜ್ಞೆಗಳಿಂದ ಹಾಗೂ ಮಾನವೀಯ ಮಿಡಿತಗಳಿಂದ ಕನಕದಾಸರು ಇಂದಿಗೂ ಜೀವಂತವಾಗಿದ್ದಾರೆ.

ಕನಕದಾಸರು ಮಾತ್ರ ಕರ್ನಾಟಕ ವಾಙ್ಮಯ ಕ್ಷೇತ್ರದಲ್ಲಿ ಎಲ್ಲ ದಾಸರಿಗಿಂತಲೂ ಹೆಚ್ಚಾಗಿ ದುಡಿದಿದ್ದಾರೆ. ಕನಕದಾಸರ ಕೃತಿಗಳಲ್ಲಿ ರಸಾಲಂಕಾರಗಳೂ ಮಾಧುರ್ಯಾದಿ ಗುಣಗಳೂ ತುಂಬಿದ್ದು, ಕನಕದಾಸರಿಗೆ ಕಾವ್ಯ ಕಲೆಯು ಹೇಗೆ ಒಲಿದಿತ್ತು ಎಂಬುದಕ್ಕೆ ಅವು ನಿದರ್ಶನಗಳಾಗಿವೆ.

ಕನಕದಾಸರು ಉತ್ತಮ ಸಾಹಿತಿಗಳಿದ್ದಂತೆಯೇ ಉತ್ತಮ ವಿಮರ್ಶಕರೂ ಆಗಿದ್ದಾರೆ. ಇವರ ಕೀರ್ತನೆಗಳು ವೈವಿಧ್ಯಪೂರ್ಣವಾಗಿವೆ, ಮಾಧುರ್ಯದಿಂದಲೂ ಕೂಡಿವೆ. ಇವರು ಭಕ್ತಿಯಲ್ಲಿ ಸೌಂದರ್ಯವನ್ನು ಕಾಣುತ್ತಾರೆ. "ಇವರ ಬಂದಿದೆ ದೂರು ಪಾಂಡವರಿಗೆ .... ಮುನ್ನಿನ ವೈರದಿ ಕಡು ಸ್ನೇಹವ ಮಾಡಿ ಉನ್ನಂತಲೆತ್ತ ಪಗಡೆಯಾಡಿಸಿ ತನ್ನ ಕುಹಕದಿಂದ ಕುರುಬಲವನೆ ಕೊಂದ ಘನ್ನಘಾತಕಿ ಶಕುನಿಯೋ ಪಾಂಡವರೋ' . ಎಂಬುದಾಗಿ ಮಹಾಭಾರತವನ್ನು ವಿಮರ್ಶಿಸಿ ಪಾಂಡವರ ದೋಷವನ್ನು ಶಕುನಿಯ ಮುಖಕ್ಕೆ ಬಳಿದಿದ್ದಾರೆ."[೨]

ಕನಕದಾಸರು ಮೂಢ ಸಂಪ್ರದಾಯವಾದಿಗಳ ವಿರೋಧಿಯಾಗಿದ್ದರೇ ಹೊರತು ಸಂಪ್ರದಾಯ ವಿರೋಧಿಯಾಗಿರಲಿಲ್ಲ. ಇವರು ಕಂದಾಚಾರಗಳ ವಿರೋಧಿಯಾಗಿದ್ದರು. ಆದರೆ ಆಚಾರ ವಿಚಾರಗಳ ವಿರೋಧಿಯಾಗಿರಲಿಲ್ಲ. "ವೈರಾಗ್ಯವಿಲ್ಲದೆ ಭಕ್ತಿ ಹುಟ್ಟುವುದಿಲ್ಲ. ನಾವು ನಂಬಿರುವ ಸಂಸಾರದ ಪ್ರಮುಖ ಅಂಗಗಳಾದ ಮನೆ, ಸಂಪತ್ತು, ಅಧಿಕಾರ , ಸತಿ–ಸುತರು ಸತ್ತ ನಂತರ ನಮ್ಮೊಡನೆ ಬರುವುದಿಲ್ಲ . ಅದನ್ನು ಅರಿತ ನಂತರ ಸಂಸಾರ ಕ್ಷಣಿಕವಾಗುತ್ತದೆ; ಆಗ ನಶ್ವರವಾದವನ್ನು ಅಪ್ಪಿಕೊಳ್ಳಲೇಬೇಕಾಗುತ್ತದೆಂದು ಬೋಧಿಸುತ್ತಾರೆ".[೩] ಎಂಬುವುದಾಗಿ ಚಂದ್ರಕಾಂತ ಬಿಜ್ಜರಗಿಯವರು ಹೇಳಿದ್ದಾರೆ.

ಕನಕದಾಸರು ಹುಟ್ಟಿನಿಂದ ಕೆಳಜಾತಿ ಎನ್ನಲಾಗಿದ್ದ ಜಾತಿಗೆ ಸೇರಿದವರಾದರೂ ತಮ್ಮ ವಿಶಿಷ್ಟ ಗುಣಗಳಿಂದ ಭಕ್ತಿ, ವೈರಾಗ್ಯಗಳಿಂದ ಕಾವ್ಯ ರಚನಾ ಪ್ರತಿಭೆ–ವ್ಯಾಸರಾಯರ ಪ್ರಿಯ ಶಿಷ್ಯರಲ್ಲಿ ಒಬ್ಬರಾಗುವ ಯೋಗ್ಯತೆಯನ್ನು ಗಳಿಸಿಕೊಂಡಿದ್ದರು. 'ಇವಗೆ ನಾಡೆಲ್ಲ ಹುಡುಕಿದರೂ ಈಡಾರ ಕಾಣೆ' ಎಂದು ವ್ಯಾಸತೀರ್ಥರೇ ಹೇಳುವ ಎತ್ತರಕ್ಕೆ ಬೆಳೆದರು. "ಹರಿದಾಸ ಕೃತಿಕಾರರಲ್ಲಿ ಅಶ್ವಿನೀ ದೇವತೆಗಳಂತೆ ಶೋಭಿಸುವವರು ಪುರಂದರದಾಸರು ಮತ್ತು ಕನಕದಾಸರು. ಕನಕದಾಸರು ದಾಸವರ್ಗದ ಕನಕ"[೪]

ಲೋಕ ಜೀವನದಲ್ಲಿ ಹಲವಾರು ಭೇದಗಳಿವೆ . ಇವುಗಳೆಲ್ಲ ಮನುಷ್ಯ ನಿರ್ಮಿತವೇ ಹೊರತು ದೈವ ನಿರ್ಮಿತವಲ್ಲ. ಈ ಅನಂತಾನಂತ ಭೇದಗಳಲ್ಲಿ ಜಾತಿಭೇದವೂ ಒಂದು. "ಕನಕದಾಸರು

ಹಲವಾರು ಪದಗಳಲ್ಲಿ ಭಗವಂತನು ಏಕಮೇವಾದ್ವಿತೀಯತೆಯನ್ನು ಸರ್ವವ್ಯಾಪಕತೆಯನ್ನು ಬಣ್ಣಿಸಿ, ದಿವ್ಯ ಸುಖಾನುಭವವನ್ನು ರಂಜಕವಾಗಿ ವಿವರಿಸಿ, ಈ ಸುಖಾನುಭಾವಕ್ಕೂ ಸಾಕ್ಷಾತ್ಕಾರಕ್ಕೂ ಜಾತಿ ಕುಲಗಳ ನಿರ್ಬಂಧವಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ.''[೫] ಕನಕದಾಸರ ಕೀರ್ತನೆಗಳು ಸಂಖ್ಯಾ ದೃಷ್ಟಿಯಿಂದ ಕಡಿಮೆಯೆನಿಸಿದರೂ ಗುಣದ ದೃಷ್ಟಿಯಿಂದ ಮಿಗಿಲಾಗಿವೆ.

ಕನಕದಾಸರ ಬಗ್ಗೆ ದೇ. ಜವರೇ ಗೌಡರು ಈ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. – ``ವರಕವಿಗಳೂ, ಕೀರ್ತನಕಾರರೂ , ಸಂತರೂ ಎನಿಸಿಕೊಂಡ ಕನಕದಾಸರು ಕರ್ನಾಟಕ ಹರಿದಾಸ ಸಾಹಿತ್ಯದ ಅಶ್ವಿನೀ ದೇವತೆಗಳಲ್ಲೊಬ್ಬರು. ದಾಸ ಸಾಹಿತ್ಯದ ಸುವರ್ಣಯುಗದ ಪ್ರವರ್ತಕರಲ್ಲೊಬ್ಬರಾಗಿ, ಯಾವ ಮತವನ್ನು ಬಿಡದೆ , ಯಾವ ಮತಕ್ಕೂ ಅಂಟಿಕೊಳ್ಳದೆ, ಸಕಲ ತತ್ವಗಳನ್ನೂ ಮೀರಿ ನಿರ್ದಿಗಂತವಾಗಿ ಬೆಳೆದು ವಿಶ್ವಮಾನವರಾಗಿ ವಿಜೃಂಭಿಸಿದ ಯೋಗ ಪುರುಷರವರು.'' [೬]

ಕನಕದಾಸರ ಹಿರಿಮೆ ಎಂತಹುದು ಎಂಬುದನ್ನು ಪುರಂದರದಾಸರ 'ಕನಕದಾಸರ ಮೇಲೆ ದಯೆ ಮಾಡಲು ವ್ಯಾಸಮುನಿ ಮಠದವರೆಲ್ಲ ದೂರಿಕೊಂಬುವರು '. ಎಂಬ ಕೀರ್ತನೆಯಲ್ಲಿ ಕಾಣಬಹುದು. ಇದರಲ್ಲಿ ಅವರ ಭಕ್ತಿಯ ಔನ್ನತ್ಯವನ್ನು ಸ್ವತಃ ಕನಕದಾಸರ ಗುರುಗಳಾದ ವ್ಯಾಸರಾಯರೇ ಮೆಚ್ಚಿಕೊಂಡ ವಿಚಾರವನ್ನು ತಿಳಿಯಬಹುದು.

`` ಕನಕದಾಸರು ಕನ್ನಡದಲ್ಲಿ ಸಾವಿರಾರು ಕೀರ್ತನೆಗಳನ್ನು ರಚಿಸಿ, ಶ್ರೀ ಹರಿಯ ಭಕ್ತಿಯನ್ನು ಮನೆಮನೆಗೂ ಬಿತ್ತಿ, ತಮ್ಮ ಉಪದೇಶಪರ ಕೀರ್ತನೆಗಳಿಂದ ಜನಸಾಮಾನ್ಯರನ್ನು ಸನ್ಮಾರ್ಗದತ್ತ ನಡೆಸುತ್ತ ಇಂದಿಗೂ ಜನಮನದಲ್ಲಿ ಜೀವಂತರಾಗಿದ್ದಾರೆ. ಕನಕದಾಸರು ಪುರಂದರದಾಸರಿಗಿಂತ ಒಂದು ಹೆಜ್ಜೆ ಮುಂದುವರೆದು ಹಲವಾರು ಕೃತಿಗಳನ್ನು ರಚಿಸಿ ' ದಾಸರಲ್ಲಿ ಕವಿ , ಕವಿಗಳಲ್ಲಿ ದಾಸ' ರೆನಿಸಿದ್ದಾರೆ. 'ಕವಿ' ಮತ್ತು 'ದಾಸ' ಇವೆರಡು ಅವರ ಸೃಜನಶೀಲ ವ್ಯಕ್ತಿತ್ವದ ಎರಡು ಮುಖಗಳು. ಅವು ಪರಸ್ಪರ ವಿರೋಧ ದಿಕ್ಕಿನಲ್ಲಿ ಹರಿಯದೆ ಒಂದಕ್ಕೊಂದು ಪೂರಕವಾಗಿ ವ್ಯಕ್ತಗೊಂಡಿವೆ. ಹೀಗಾಗಿ 'ಭಕ್ತಿ' ತತ್ವದ ನೆಲೆಯ ಮೇಲೆ ನಿಂತ ಅವರ ಸಾಹಿತ್ಯ ಸಾರ್ಥಕ ಜೀವನದ ಬಗೆಗಿನ ವಿವಿಧ ಕಲ್ಪನೆಗಳನ್ನು ಧಾರ್ಮಿಕಾಚರಣೆಯ ಸಾಧ್ಯತೆಗಳನ್ನು ಹಾಗೂ ಬಾಳಿನ ದೃಢ ನಂಬಿಕೆಯ ಭಾವವಿಲಾಸಗಳನ್ನು ಪ್ರಸ್ತುತಪಡಿಸುತ್ತದೆ. ಕನದಾಸರ ವ್ಯಕ್ತಿತ್ವ 'ಹಿಡಿದರೆ ಹಿಡಿ ತುಂಬ ಬಿಟ್ಟರೆ ಬ್ರಹ್ಮಾಂಡ ತುಂಬ' ಎನ್ನುವಂತೆ ಅವರನ್ನು ಯಾವುದೇ ದೃಷ್ಟಿಯಿಂದ ಅಳೆಯಲು ಸಾಧ್ಯವಿಲ್ಲ''[೭] ಎಂಬುದಾಗಿ ಡಾ. ಜಕಬಾಳ ಕನಕದಾಸರ ಬಗ್ಗೆ ಹೇಳಿದ್ದಾರೆ.

ಕನಕದಾಸರು ಅಗ್ರ ಪಂಕ್ತಿಗೆ ಸೇರಿದ ಕೀರ್ತನಕಾರರು ಮಾತ್ರವಲ್ಲ, ಪ್ರತಿಭಾ ಸಂಪನ್ನ ಶ್ರೇಷ್ಠ ಕವಿಗಳೂ ಹೌದು. ಕಾವ್ಯ ರಚನೆಯೂ ಅವರ ಆತ್ಮ ಸಾಕ್ಷಾತ್ಕಾರದ ಸಾಧನವಾಗುತ್ತದೆ ಎಂಬುದನ್ನು ನಾವು ಮರೆಯುವಂತಿಲ್ಲ. ಏಕಕಾಲದಲ್ಲಿ ಕೀರ್ತನಕಾರರೂ ಕವಿಗಳೂ ಆದ ದಾಸರೆಂದರೆ ಕನಕದಾಸರು ಮಾತ್ರ ಎಂದೇ ಹೇಳಬಹುದು.

ಕನಕದಾಸರ ಬಗ್ಗೆ ದೇ. ಜವರೇಗೌಡರು ತಮ್ಮ ಅಭಿಪ್ರಾಯವನ್ನು ಈ ರೀತಿಯಾಗಿ ವ್ಯಕ್ತಪಡಿಸಿದ್ದಾರೆ–`` ಕವಿ ಸಾಯುತ್ತಾನೆ. ನಿಜ ಕವಿ ಸಾಯುವುದಿಲ್ಲ. ತನ್ನ ಕೃತಿಗಳ ಮೂಲಕ ಅವನು

ಬದುಕಿರುತ್ತಾನೆ. ಯಾವ ಕವಿ ಕಂತೆಯನ್ನೊಗೆದ ನಂತರವೂ ಜನಮನದಲ್ಲಿ ನಿತ್ಯ ನೂತನವಾಗಿ ದೇದೀಪ್ಯಮಾನನಾಗಿ ರಾರಾಜಿಸುತ್ತಾನೆಯೋ ಯಾವ ಕವಿಯ ಕೃತಿಗಳು ಶತಶತಮಾನಗಳ ತನಕ ಜನತೆಯ ಬದುಕಿಗೆ ಬೆಳಕಾಗಿ, ಜೀವಸತ್ವವಾಗಿ, ಕಾಮಧೇನುವಾಗಿ, ಉಳಿಯುತ್ತಾನೆಯೋ ಅವನೇ ಅಮರ ಕವಿ. ಕನಕದಾಸರು ಅಂಥ ಕವಿಗಳ ಗುಂಪಿಗೆ ಸೇರಿದವರು. ಕನಕದಾಸರು ದಾಸಪಂಥದ ಕೀರ್ತನಕಾರರು ಮಾತ್ರವಲ್ಲ, ಎಲ್ಲ ಮತೀಯ ಬಂಧನಗಳಿಂದ ಪಾರಾಗಿ, ಸಾಮಾಜಿಕ ಕಟ್ಟುನಿಟ್ಟುಗಳಿಂದ ಮುಕ್ತರಾಗಿ ಅಧ್ಯಾತ್ಮ ಸಿದ್ಧಿಯ ಶಿಖರವನ್ನೇರಿದ ವಿಶ್ವ ಬಂಧು , ಸಂತ ಕವಿಗಳು".[೮]

ಕನಕದಾಸರ ಕೃತಿಗಳ ಬಗ್ಗೆ ರಾಮಚಂದ್ರ ರಾವ್ ಅವರು " ಕನಕದಾಸರ ಕೃತಿಗಳಲ್ಲಿ ಪ್ರಪತ್ತಿಯ ರಸವು ಉದಾರವಾಗಿ ಹರಿಯುತ್ತದೆ. . ಅನನ್ಯ ಶರಣ ಮನೋವೃತ್ತಿಯೇ ಇವರ ಸಾರಸ್ವತ ಸಂಪತ್ತಿನ ಮುಖ್ಯ ರಸವೆನ್ನಬಹುದು. ಇದನ್ನು ಬಿಟ್ಟರೆ ವೇದಾಂತದ ಪ್ರಕ್ರಿಯೆಗಳು ಅಷ್ಟಾಗಿ ಇವರ ಮಾತಿನಲ್ಲಿ ಮೂಡಿ ಬಂದಿಲ್ಲ. ಸಮಾಜದ ಅಂಕುಡೊಂಕುಗಳ ಮೇಲೆ ಇವರ ವಾಗ್ಬಾಣ ಬಿದ್ದಿದೆ. "ಮಾರಿ, ಮಸಣಿ, ಚೌಡಿ, ಮೈಲಾರಿ, ಇಂಥ ಮೊದಲಾದ ಠಕ್ಕು ದೈವದ ಗೊಡವೆ ಬೇಡ ಎಂಬ ಆಗ್ರಹ, ಕೊಳದವರ ಮಾತು ಕೇಳಿ ಖೂಳರೆಲ್ಲರು ಕೂಡಿಕೊಂಡು ಬಂದು ಹಾಳು ಮಾಡಿ ಕೈಯಲ್ಲಿದ್ದ ಹೊನ್ನ ಹಣಗಳ । ಬಾಳುತಿಪ್ಪ ಕೋಣ ಕುರಿಯ ಏಳಬೀಳ ಕೊರಳ ಕೊಯ್ದು । ಬೀಳಬೇಡಿ ನರಕಕ್ಕೆ" ಎಂಬ ನಿಷ್ಠುರೋಕ್ತಿ, ' ಕುಲ ಕುಲ ಕುಲವೆನ್ನುತಿಹರೇ ಕುಲವ್ಯಾವುದು ನೋಡಿ ಸತ್ಯ ಸಜ್ಜನರೆ. . . ಆತ್ಮಾಂತರಾತ್ಮ ನೆಲೆಯಾದಿಕೇಶವ ಪ್ರೀತನಾದ ಮೇಲೆ ಯಾತರ ಕುಲವೋ !" ಎಂಬ ವಿವೇಕ, ಲೌಕಿಕ ಜೀವನದ ನಿಃಸಾರತೆ, ಶುದ್ಧಾಂತಃಕರಣದ ಅಗತ್ಯ ಇವು ಕನಕದಾಸರ ಕೃತಿಗಳಲ್ಲಿ ವಿಶೇಷವಾಗಿ ಕಾಣುತ್ತವೆ"[೯] ಎಂಬುದಾಗಿ ಹೇಳಿದ್ದಾರೆ.

ಕನಕದಾಸರ ಸಾಹಿತ್ಯದಲ್ಲಿ ಅನೇಕ ಗ್ರಾಮ್ಯ ಪದಗಳು ದೊರೆಯುತ್ತವೆ. ಕಂಡಿ, ಕೊಂಪೆ, ಹೊಲ, ಬೀಜ, ನೇಗಿಲು, ಎತ್ತು, ಹಾಡು, ಹಗ್ಗ, ಗಿಡ, ಮರ, ಗೊಂಬೆ, ನಾಟಕ, ಬಾಡು, ನಂಟು, ಹೆಂಟೆ, ಮೂಡೆ, ವಾಡೆ, ಬೀಡು, ಹರಿ, ಬೀಡಿ, ರಾಗಿ, ಭತ್ತ, ತಾಯಿ, ತಂದೆ, ಅಣ್ಣ, ತಮ್ಮ, ಅಕ್ಕ, ತಂಗಿ, ಅತ್ತೆ , ಮಾವ, ಹೆಂಡ್ತಿ, ಮಕ್ಳು, ಎಳ್ಳು, ಹೊತ್ತಾರೆ, ರಾಗಿಕಲ್ಲು, ಉಂಡ, ಹಟ್ಟಿ, ಕೊಟ್ಟಿಗೆ, ಪೆಟ್ಟಿಗೆ, ಬಚ್ಚಲು, ಇತ್ಯಾದಿ ಅನೇಕ ಪದಗಳು ಕೀರ್ತನೆಯಲ್ಲಿ ಕಂಡು ಬರುತ್ತವೆ. ಹೀಗೆ ಕನಕದಾಸರು ತಮ್ಮ ಕೀರ್ತನೆಗಳಲ್ಲಿ ದಕ್ಷಿಣ ಕರ್ನಾಟಕದ ಅನೇಕ ಗ್ರಾಮ್ಯ ಪದಗಳನ್ನು ಬಳಸಿಕೊಂಡಿದ್ದಾರೆ. ಪುರೋಹಿತಶಾಹಿಯ ವಿರೋಧದ ಅನೇಕ ಪ್ರತಿಭಟನಾತ್ಮಕ ಕೀರ್ತನೆಗಳನ್ನು ಕನಕದಾಸರು ರಚಿಸಿದ್ದಾರೆ. " ಕನಕದಾಸರು ಕೆಲವು ಕೀರ್ತನೆಗಳಲ್ಲಿ ವೈಷ್ಣವೇತರವಾದ ಕೆಲವು ದೈವಗಳನ್ನು ಕುರಿತು ವಿಡಂಬನೆ ಮಾಡಿದ್ದಾರೆ. ಅವರು ಆ ದೈವಗಳನ್ನು ಬಣಗು ದೈವಗಳೆಂದೂ, ಠಕ್ಕುದೈವಗಳೆಂದೂ ಭಾವಿಸಿರುವರಷ್ಟೇ ಅಲ್ಲದೆ, ಆ ದೈವಗಳ ಭಕ್ತರುಗಳ ಕೆಲವು ಆಚರಣೆ ಸೇವೆಗಳನ್ನು 'ಹೀನವೃತ್ತಿ' ಗಳೆಂಬಂತೆ ಟೀಕಿಸಿದ್ದಾರೆ. ಅವರಿಂದ ಖಂಡನೆಗೊಳಗಾದ ದೈವಗಳೆಲ್ಲ ಎಕ್ಕನಾತಿ , ಎಲ್ಲಮ್ಮ, ಈ ದೇವತೆಗಳೂ ಸಹ ಸೇರಿವೆ. ಈ ಎಕ್ಕನಾತಿ, ಎಲ್ಲಮ್ಮ ಮುಂತಾದ ದೈವಗಳಿಗೆ ಜನರು ಸಲ್ಲಿಸುತ್ತಿದ್ದ ಬಲಿ, ಬೇವಿನುಡಿಗೆ, ಬತ್ತಲೆಸೇವೆ ಮುಂತಾದುವನ್ನು ತೀಕ್ಷ್ಣವಾಗಿ ಟೀಕಿಸಿದ್ದಾರೆ. ಈ ಟೀಕೆಯೊಂದಿಗೆ ಇಂಥ 'ಬಣಗು ದೈವ' ಗಳನ್ನು ಬಿಟ್ಟು 'ನಾರಾಯಣ'ನನ್ನು ನಂಬಿರೆಂದೂ ಇಂಥ

'ಹೀನವೃತ್ತಿ' ಗಳನ್ನು ಬಿಟ್ಟು ದಾನಧರ್ಮಗಳನ್ನು ಮಾಡಿರೆಂದೂ ಅವರು ಜನರಿಗೆ ಕರೆಯುತ್ತಿದ್ದಾರೆ".[೧೦] ಎಂಬುದಾಗಿ ರಾಜಶೇಖರಪ್ಪನವರು ಹೇಳಿದ್ದಾರೆ. ಇದೇ ಅಭಿಪ್ರಾಯವನ್ನು ಇತರ ವಿದ್ವಾಂಸರೂ ವ್ಯಕ್ತಪಡಿಸಿದ್ದಾರೆ.

ಕನಕದಾಸರು ಕೆಲವು ಕೀರ್ತನೆಗಳಲ್ಲಿ ಬೇರೆ ಬೇರೆ ಧರ್ಮಗಳಲ್ಲಿನ ನ್ಯೂನತೆಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿದ್ದಾರೆ. ಇಸ್ಲಾಮಿನ ಅಲ್ಲಾಹ್ ಬಗ್ಗೆಯೂ ಕನಕದಾಸರು ತೀವ್ರ ಕುತೂಹಲ ಮತ್ತು ಅರಿವನ್ನು ಹೊಂದಿದ್ದರು. ಎಂದು ಗೊತ್ತಾಗುತ್ತದೆ. ಅಲ್ಲಾ –ಖುದಾ ಬಗ್ಗೆ ಕನಕದಾಸರು ಹೇಳಿರುವ ಮಾತುಗಳನ್ನು ಅನೇಕ ಅಧ್ಯಯನಕಾರರು ಉಲ್ಲೇಖಿಸಿದ್ದಾರೆ.[೧೧]

ಕನಕದಾಸರ ಕೀರ್ತನೆಗಳಲ್ಲಿ ಹೆಚ್ಚು ಸಂಕೀರ್ಣವಾದ ಮನಸ್ಥಿತಿಯನ್ನು ಕಾಣುತ್ತೇವೆ. ಒಂದು ಕಡೆ ಅವರು ದೇವರನ್ನು ನಿರಾಕರಿಸಿದ ಪದ್ಯವಿದೆ. 'ಆರು ಬದುಕಿದರಯ್ಯ ಹರಿ ನಿನ್ನ ನಂಬಿ ತೋರು ಈ ಧರೆಯೊಳಗೆ ಒಬ್ಬರನು ಕಾಣೆ ಕೃಷ್ಣ' ಇದೊಂದು ಭಾವ ತೀವ್ರತೆಯ ಕೀರ್ತನೆ . "ಇದನ್ನು ಭಕ್ತಿ ಚಳುವಳಿಯ ಒಬ್ಬ ಪ್ರಮುಖ ವಕ್ತಾರ ಬರೆದದ್ದು ಎಂಬುದು ಭಕ್ತಿ ಚಳುವಳಿ ಎಂಥಾ ವೈರುಧ್ಯಗಳನ್ನು ತನ್ನಲ್ಲಿ ಒಳಗೊಂಡಿತ್ತು ಎಂಬುದಕ್ಕೆ ಸಾಕ್ಷಿಯಾಗಿದೆ. 'ಮೋಹನ ತರಂಗಿಣಿ'ಯಲ್ಲಿ ಕನಕದಾಸರು ಕೃಷ್ಣನಿಗೆ ಸಂಬಂಧಪಟ್ಟ ಯಾವುದನ್ನೂ ಪ್ರಶ್ನಿಸುವುದಿಲ್ಲ. ಆದರೆ ಇಲ್ಲಿ ಕೃಷ್ಣನ ಅವರು ಬಳಸುವ ಹೆಸರು ಹರಿ. ಪ್ರತಿಯೊಂದು ಕೆಲಸವೂ ಪ್ರಶ್ನಾರ್ಹವಾಗಿದೆ. ಇಡೀ ಕಾವ್ಯ ಹರಿಯನ್ನು ನಂಬಿ ಯಾರೂ ಬದುಕಿಲ್ಲ ಎಂದು ಹೇಳುತ್ತಾ ಕೊನೆಗೆ ನಿನ್ನ ಭಕ್ತರು ನಿನ್ನನ್ನು ನಂಬಿ ಬೇಡಿದರೆ ತಿರುಪೆ ಕೂಡಾ ಹುಟ್ಟುವುದಿಲ್ಲ ಎಂದು ಕೊನೆಯಾಗುತ್ತದೆ. ಭಕ್ತಿ ಪಂಥದ ಈ ಕವಿ ಭಕ್ತಿಯ ಮೂಲ ಆಧಾರವನ್ನು ಇಲ್ಲಿ ನಿರಾಕರಿಸುತ್ತಿದ್ದಾರೆ. ತಾನು ಕಟ್ಟಲು ಶ್ರಮಿಸಿದ ಚಳವಳಿಯನ್ನೇ ನಿರಾಕರಿಸುತ್ತಿದ್ದಾರೆ. ಆದ್ದರಿಂದಲೇ ಕನಕದಾಸರು ಕನ್ನಡದಲ್ಲಿ ಮೊದಲಿನಿಂದ ಇರುವ ಆಂತರಿಕ ವಿಮರ್ಶಕರ ಶ್ರೇಷ್ಠ ಪರಂಪರೆಗೆ ಸೇರುತ್ತಾರೆ. ಕೃಷ್ಣಪಂಥವನ್ನು, ಭಕ್ತಿ ಸಂಪ್ರದಾಯವನ್ನು ಬೆಳೆಸಿದ್ದರಲ್ಲಿ ಕನಕದಾಸರ ಕೊಡುಗೆ ಮಹತ್ವದ್ದಿದೆ. ಆದರೆ ಅವರ ಕೀರ್ತನೆಗಳಲ್ಲಿ ಮತ್ತು ರಾಗಿಯ ಬಗೆಗಿನ ಕಾವ್ಯದಲ್ಲಿ ವ್ಯಕ್ತವಾಗುವ ಧೋರಣೆ ವಿಮರ್ಶಾತ್ಮಕವಾದದ್ದು. ತಾವು ಬೆಳೆಸಿದ ಭಕ್ತಿ ಪಂಥದ ಬಗ್ಗೆ ಕನಕದಾಸರು ವಿಮರ್ಶಾತ್ಮಕ ಒಳಗಿನವರಾಗಿ, ಟೀಕೆ ಮಾಡುವುದನ್ನು ಮುಖ್ಯವಾಗಿ ಅವರ ಕೀರ್ತನೆಗಳಲ್ಲಿ ಕಾಣುತ್ತೇವೆ. ಕೀರ್ತನೆಗಳಲ್ಲಿ ಧಾರ್ಮಿಕ ಡಂಭಾಚಾರವನ್ನು ಟೀಕಿಸಿದಂತೆ ರಾಮಧಾನ್ಯ ಚರಿತೆಯಲ್ಲಿ ಶ್ರೀಮಂತಿಕೆಯ ಡಂಭಾಚಾರವನ್ನು ಟೀಕಿಸುತ್ತಿದ್ದಾರೆ". [೧೨]

ಕನಕದಾಸರು ಇತರ ದಾಸರಿಗಿಂತ ಭಿನ್ನವಾಗಿ ಕಂಡು ಬರುತ್ತಾರೆ. "ಕನಕದಾಸರದು ಸಾಹಿತ್ಯ ಸಂದೇಶವೆಂದರೆ ವಿಶ್ವ ಮಾನವ ಸಂದೇಶ. ಹಾಗಾಗಿ ಅವರು ಉಳಿದ ದಾಸರಿಗಿಂತ ಭಿನ್ನವಾಗಿ ಚಿಂತಿಸಿದರು. ಅವರ ಪಾಲಿಗೆ ದೇವರಿಲ್ಲದ ಗುಡಿಯು ಪಾಳು ಬಿದ್ದಂಗಡಿಯಾಗುತ್ತದೆ. ಭಾವವಿಲ್ಲದ ಭಕ್ತಿಯು ಕುಹಕ ಯುಕುತಿಯಾಗುತ್ತದೆ. ಕರ್ಮವಿಲ್ಲದ ಗಂಡು ಕರಿಯ ಒನಕೆಯ ತುಂಡಾಗಿ ಕಾಣುತ್ತಾರೆ. ಒಟ್ಟಿನಲ್ಲಿ ಅವರು ಮನುಷ್ಯತ್ವದ ಅಧಃಪತನಕ್ಕೆ ಮರುಗುತ್ತಾರೆ. ಚಿಂತಿಸುತ್ತಾರೆ. ಮತ್ತೆ ಬೋಧಿಸುತ್ತಾರೆ. ಅವರ ಸಾಹಿತ್ಯದಲ್ಲಿ ಸಿಗುವ ಶರಣಾಗತಿ, ವಿರಹವೇದನೆ, ಮತ್ತು ಗುರು

ಆರಾಧನೆಗಳು ಮಧ್ವ ತತ್ವಕ್ಕಿಂತಲೂ ಚೈತನ್ಯರ ಅಚಿಂತ್ಯ ತತ್ವಕ್ಕೆ ಹೆಚ್ಚು ಹತ್ತಿರವಾಗಿ ನಿಲ್ಲುತ್ತದೆ'' [೧೩] ಎಂಬುದಾಗಿ ಬಾಲಕೃಷ್ಣ ಭಾರದ್ವಾಜ್ ಹೇಳಿದ್ದಾರೆ.

ಕನಕದಾಸರ ಕೀರ್ತನೆಗಳು ಸಮಾಜಮುಖಿಯಾದ , ಸಾಮಾಜಿಕ ಅಗತ್ಯಗಳಿಗೆ ತೀವ್ರವಾಗಿ ಸ್ಪಂದಿಸುತ್ತವೆ. ಜೀವಪರವಾದ ಸಾಹಿತ್ಯವೂ ಆಗಿದೆ ಎನ್ನಬಹುದು. ವ್ಯಕ್ತಿಗತ ನೆಲೆಯಲ್ಲಿ ಆತ್ಮೋದ್ಧಾರದ ಮೂಲಕ ಸಮಾಜದ ಉದ್ದಾರವನ್ನು ಸಾಧಿಸಲು ಪ್ರಯತ್ನಿಸಿದ ಕೀರ್ತನೆಗಳಾಗಿ ಇವು ಮಹತ್ವ ಪಡೆದು ಕೊಂಡಿದೆ. ''ಕನಕದಾಸರ ಕೀರ್ತನೆಗಳ ತಾತ್ವಿಕ ನೆಲೆಗಟ್ಟು ಸರಳವಾಗಿದೆ. ಇದರ ಹಂದರವನ್ನು ಸ್ಥೂಲವಾಗಿ ವಿಷ್ಣು ಪಾರಮ್ಯ, ಮಧ್ವ ಸಿದ್ಧಾಂತದ ಮೇಲಣ ನಿಷ್ಠೆ, ಭಕ್ತಿ, ಜ್ಞಾನ–ಕರ್ಮಗಳ ಸಂತುಲನ, ಭಕ್ತಿಯ ವಿಭಿನ್ನ ನೆಲೆಗಳು, ಅನುಭಾವದ ನೆಲೆ ಹಾಗೂ ಸಾಕಾರ ಸಗುಣ ಭಗವಂತನ ಕಲ್ಪನೆಗಳಿಗೆ ಮಿತಗೊಳಿಸಿ ಅಭ್ಯಾಸ ಮಾಡಲು ಸಾಧ್ಯವಿದೆ'' [೧೪]. ಎಂಬುದಾಗಿ ತಾಳ್ತಜೆಯವರು ಅಭಿಪ್ರಾಯ ಪಟ್ಟಿದ್ದಾರೆ.

ಕನಕದಾಸರ ಕೀರ್ತನೆಗಳ ಬಗ್ಗೆ ರಾಜಾರಾಮ ಹೆಗಡೆಯವರು ಈ ರೀತಿಯಾಗಿ ಹೇಳುತ್ತಾರೆ ''ಕನಕದಾಸರ ಒಟ್ಟು ಕೃತಿಗಳನ್ನು ಪರಿಶೀಲಿಸಿದರೆ ಜಾತಿ ಭೇದವನ್ನು ಟೀಕಿಸುವ ಕೀರ್ತನೆಗಳು ಬೆರಳೆಣಿಕೆಯಷ್ಟಿವೆ. ಹಾಗೂ ನಮ್ಮ ಇಂದಿನ ಜಾತಿ ವ್ಯವಸ್ಥೆಯ ಪರಿಭಾಷೆಗಳನ್ನು ಹಾಗೂ ವಾದಗಳನ್ನು ಅವು ವ್ಯಕ್ತಪಡಿಸುವುದಿಲ್ಲ. ಇಂದಿನ ಜಾತಿ ವ್ಯವಸ್ಥೆಯ ಪರಿಭಾಷೆಗಳನ್ನು ಕನಕದಾಸರ ಕೀರ್ತನೆಗಳಲ್ಲಿ ಹುಡುಕುವಾಗ ನಾವು ಕೇವಲ ಕೆಲವು ಶಬ್ದಗಳನ್ನು ಆಧರಿಸುತ್ತೇವೆ. ಕುಲ, ಜಾತಿ , ಬ್ರಾಹ್ಮಣ, ಯಜ್ಞ, ಮಂತ್ರ, ವೇದ, ಪುರಾಣಗಳು, ಡಾಂಭಿಕ ಪೂಜೆ, ಇತ್ಯಾದಿಗಳ ಟೀಕೆ ನಡೆದಿದೆ ಎಂದಾಕ್ಷಣ ಜಾತಿ ವ್ಯವಸ್ಥೆಯ ಟೀಕೆಯ ಪರಿಭಾಷೆಗಳು ಅಲ್ಲಿ ಪ್ರಸ್ತುತವಾಗುತ್ತವೆ ಎಂಬುದಾಗಿ ಭಾವಿಸುವುದು ದುಡುಕುತನವಾಗುತ್ತದೆ.''[೧೫]

ಕನಕದಾಸರ ಬಗ್ಗೆ, ಅವರ ಕೃತಿಗಳ ಬಗ್ಗೆ , ಕೀರ್ತನೆಗಳ ಬಗ್ಗೆ ಅನೇಕ ವಿಮರ್ಶಕರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಡಾ. ಸುರೇಶ್ ನಾಗಲಮಡಿಕೆಯವರು ''ಕನಕನದು ವೈದಿಕೀಕರಣವಲ್ಲ. ಅವನು ವೈದಿಕದಿಂದ ಜನಪದದ ಮಡಿಲಿಗೆ ಹೋದವನು. ಕನಕದಾಸರ ಕೀರ್ತನೆಗಳನ್ನು ಹಾಗೂ ವ್ಯಕ್ತಿತ್ವವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅವರು ಕೆಳವರ್ಗದ ದೇವತೆಗಳನ್ನು , ಆಚರಣೆಗಳನ್ನು ಟೀಕಿಸುವುದು ನಿಜ''[೧೬] ಎಂಬುದಾಗಿ ಹೇಳಿದ್ದಾರೆ.

ರಂ ಶ್ರೀ ಮುಗಳಿಯವರು '' ಕನಕದಾಸನ ವ್ಯಕ್ತಿತ್ವದ ಜೀವಾಳವು ಅವನ ಕೀರ್ತನೆಗಳಲ್ಲಿ ಮೂಡಿರುತ್ತದೆ. ಅವನ ಭಕ್ತಿ ತರಂಗಿಣಿ ಅವುಗಳಲ್ಲಿ ಹೊರಸೂಸಿ ಹರಿದಿದ್ದಾಳೆ. ಅವನು ಮುಖ್ಯವಾಗಿ ಭಾಗವತ ಕವಿ. ಅಂದರೆ ಹರಿ ಭಕ್ತಿಯ ಸರ್ವಾರ್ಪಣದ ಮತ್ತು ವಿಶಾಲ ಮನೋಭಾವದ ಪ್ರತಿಪಾದಕ. ಮಧ್ವ, ರಾಮಾನುಜ, ಇವರ ಮತಸಾರವನ್ನು ಒಪ್ಪಿಯೂ ತಿರುತಿರುಗಿ ಯಾವುದಾದರೊಂದು ಮತದ ನಿರ್ದಿಷ್ಟ ಪ್ರಚಾರವನ್ನು ಮಾಡುವ ಗೊಡವೆಗೆ ಅವನು ಹೋದಂತಿಲ್ಲ. ಏಕಾಂತ ಭಕ್ತಿ, ನೀತಿ ಧರ್ಮ ಇವನ್ನು ಅವನು ಬೋಧಿಸಿದ್ದಾನೆ. ಡಂಭಾಚಾರ , ಸಂಕುಚಿತ ಮನೋವೃತ್ತಿಗಳನ್ನು ಖಂಡಿಸಿದ್ದಾನೆ. ಅವನ ಕಿರುನುಡಿಗಳು ಕೆಲವು ಸಲ ಕಿಡಿಯಂತೆ ಸಿಡಿಯುತ್ತವೆ.'' [೧೭] ಎಂಬುದಾಗಿ ಹೇಳಿದ್ದಾರೆ.

ಕನಕದಾಸರು ಕೀರ್ತನೆಗಳಲ್ಲಿ ಜಾತಿಸಂಘರ್ಷ ಮತ್ತು ವರ್ಗಸಂಘರ್ಷಗಳನ್ನು ಖಂಡಿಸಿದ್ದಾರೆ. ಅವರ ವರ್ಣ ಮತ್ತು ವರ್ಗ ಸಂಘರ್ಷ ಕುರಿತಾದ ಕೀರ್ತನೆಯ ಬಗ್ಗೆ ಕೆಲವು ವಿಮರ್ಶಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. " ಸರ್ವರಿಗೆ ಸಮಪಾಲು, ಸರ್ವರಿಗೆ ಸಮಬಾಳು ಎಂಬುದು ಕನಕದಾಸರ ನಿಲುವಾದರೆ, ತಾರತಮ್ಯ , ಭೇದಭಾವ, ಮಾನವತೆಗೆ ಮಾರಕ ಎಂಬುದು ಅವರ ಬಾಳಿನ ಮಂತ್ರ. ಸಮಾಜದಲ್ಲಿ ಬೇರು ಬಿಟ್ಟಿರುವ ಮೇಲು ಕೀಳು, ಬಡವ–ಬಲ್ಲಿದ, ಎಂಬ ವರ್ಗ ವರ್ಣ ತಾರತಮ್ಯ ಹೋಗಬೇಕು ಎಂಬುದೇ ಅವರ ಗುರಿ. ಅವರ ಈ ಎಲ್ಲಾ ನಿಲುವು – ಮಂತ್ರ– ಗುರಿಗಳನ್ನು ಅವರ ರಾಮಧಾನ್ಯ ಚರಿತೆಯಲ್ಲಿ, 'ಕುಲ ಕುಲ ಕುಲವೆನ್ನುತಿಹರು ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ' 'ಹೊಲೆಯ ಊರೊಳಗಿಲ್ಲವೇ' ಮೊದಲಾದ ಕೀರ್ತನೆಗಳಲ್ಲಿ ಕಾಣಬಹುದಾಗಿದೆ."[೧೮] ಎಂಬುದಾಗಿ ಗಂಗಾಧರ ಕೊಡ್ಲಿ ಯವರು ಹೇಳಿದ್ದಾರೆ.

ಅರವಿಂದ ಚೊಕ್ಕಾಡಿಯವರು " ಕನಕದಾಸರು ಜೈವಿಕ ಸತ್ಯಗಳನ್ನು ಹೇಳುತ್ತಾರೆ. ಕೆಸರು , ಮಾಂಸ, ಮೈಯನ್ನು ಕೀಳು ಎನ್ನುವುದಿಲ್ಲ. ಬದಲು ಕುಲದಲ್ಲಿ ಕೀಳನ್ನು ಗುರುತಿಸುವವರಿಗೆ ಸತ್ಯವನ್ನು ಮನವರಿಕೆ ಮಾಡಿಕೊಡಲು ಪ್ರಸ್ತಾಪಿಸುತ್ತಾರೆ. ಅವೆಲ್ಲವುಗಳ ಮೂಲ ಯಾವುದೇ ಆಗಿದ್ದರೂ ಆಯಾ ಅವಶ್ಯಕತೆಗಳ ಹಿನ್ನೆಲೆಯಲ್ಲಿ ಹೇಗೆ ಎಲ್ಲವೂ ಶ್ರೇಷ್ಠ ಆಗುತ್ತವೋ ಹಾಗೆಯೇ ಕುಲಗಳೂ ಸಮಾನವೆ ಎನ್ನುತ್ತಾರೆ. ' ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ' ಕೀರ್ತನೆಯಲ್ಲಿ ' ಗುಟ್ಟು ಕಾಣಿಸಬಂತು ಹಿರಿದೇನು ಕಿರಿದೇನು ನೆಟ್ಟನೆ ಸರ್ವಜ್ಞನ ನೆನೆಕಂಡ್ಯ ಮನುಜ' ಎನ್ನುವುದು ಸತ್ಯವನ್ನು ಆವರಿಸಿದ ಪೊರೆಯನ್ನು ತೆರದಾಗ ಎಲ್ಲಿಯೂ ಮೇಲು ಕೀಳುಗಳೇ ಇಲ್ಲ. ಎಂಬ ಸರ್ವ ಸಮಾನತೆಯ ಭಾವ ಕಾಣಿಸುತ್ತದೆ."[೧೯] ಎಂಬುದಾಗಿ ಹೇಳಿದ್ದಾರೆ.

ಡಾ. ಎಚ್. ಜೆ. ಲಕ್ಕಪ್ಪ ಗೌಡರು "'ಕುಲ ಕುಲ ಕುಲವೆನ್ನುತಿಹರು; ಕುಲ ಕುಲ ಕುಲವೆಂದು ಹೊಡೆದಾಡದಿರಿ' ಎಂಬ ಕೃತಿಗಳು ನಮ್ಮ ದೇಶದ ದೇಹಕ್ಕೆ ಅರ್ಬುದ ರೋಗವಾಗಿ ಕಾಡುತ್ತಿರುವ ಜಾತಿ ಸಮಸ್ಯೆಯನ್ನು ವಿಶ್ಲೇಷಿಸುವಂಥವು. ಸ್ವತಃ ಸಮಾಜದ ಕೆಳವರ್ಗದಿಂದ ಬಂದು, ತನ್ನ ಸಾಧನೆ ಸಿದ್ಧಿಗಳಿಂದಾಗಿ ಮಹೋನ್ನತಿಯನ್ನು ಸಾಧಿಸಿದರೂ ಕೊನೆಯವರೆಗೂ ಮೇಲು ಜಾತಿಗಳವರ ಅವಹೇಳನ ತಿರಸ್ಕಾರ ಅಪಹಾಸ್ಯಗಳಿಗೆ ತುತ್ತಾಗಿ ನೋವು ಸಂಕಟಗಳನ್ನು ಅನುಭವಿಸಿದ ಕನಕದಾಸರ ಈ ಕೀರ್ತನೆಗಳಲ್ಲಿ ಮನವಿರಿಯುವ ಯಾತನೆ ಖಾರ ತೀಕ್ಷ್ಣತೆ ವ್ಯಂಗ್ಯ ವಿಮರ್ಶೆಗಳು ಸತ್ವಶಾಲಿಯಾಗಿ ಎದ್ದು ನಿಂತಿವೆ. ಒಂದು ಕೀರ್ತನೆಯಲ್ಲಿ ಸತ್ಯಸುಜನರಿಗೆ ಕುಲವೆಂಬುದಿಲ್ಲ ಎಂದು ವಾದಿಸಿ, ಗುಣದಿಂದಲ್ಲದೆ ಹುಟ್ಟಿನಿಂದ ಕುಲವನ್ನು ಗಣಿಸುವುದು ಮೂರ್ಖತನವೆಂಬುದನ್ನು ತಾವರೆ, ಕ್ಷೀರ, ಪರಾಶರ, ವಸಿಷ್ಠ, ನಾರದ ಮೊದಲಾದ ನಿದರ್ಶನಗಳ ಮೂಲಕ ತರ್ಕಬದ್ಧವಾಗಿ ಸಾರಲು ಪ್ರಯತ್ನಿಸಿದರೆ, ಮತ್ತೊಂದರಲ್ಲಿ ' ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ ?' ಎಂದು ನೇರವಾಗಿ ಸವಾಲು ಎಸೆದು ಬುದ್ಧಿ ಹೇಳುತ್ತಾರೆ." ಎಂದು ಹೇಳಿದ್ದಾರೆ.

"ಲೋಕಜೀವನದಲ್ಲಿ ಹಲವಾರು ಭೇದಭಾವಗಳಿವೆ. ಇವುಗಳೆಲ್ಲ ಮನುಷ್ಯ ನಿರ್ಮಿತವೇ ಹೊರತು ದೈವ ನಿರ್ಮಿತವಲ್ಲ. ಈ ಅನಂತ ಭೇದಗಳಲ್ಲಿ ಜಾತಿ ಭೇದವೂ ಒಂದು. ಕುಲ ಜಾತಿಗಳ ನಿರ್ಣಯದಿಂದ ಫಲವೇನು? ಸತ್ಯ ಸಂಧರಿಗೆ, ಜ್ಞಾನ ಸಂಪನ್ನರಿಗೆ ಯಾವ ಕುಲವಾದರೇನು ? ಯಾವ ಜಾತಿಯಾದರೇನು? ಭಗವಂತನ ಒಲುಮೆಗೆ ಪಾತ್ರರಾದ ಮೇಲೆ ಯಾವ ಜಾತಿಯಾದರೇನು ಲಾಭ? ಯಾವ ಜಾತಿಯಾದರೇನು ನಷ್ಟ? ಹೀಗೆ ಕುಲ ಜಾತಿಗಳಿಗೆ ಮಿತಿಮೀರಿ ಮಹತ್ವ ನೀಡುವ ದುಶ್ಚಟವನ್ನು ಖಂಡಿಸಿದ್ದಾರೆ."[೨೦] ಎಂಬುದಾಗಿ ಕುಲದ ಬಗ್ಗೆ ಕನಕದಾಸರ ನಿಲುವು ಏನು ಎಂಬ ಬಗ್ಗೆ ಕೃಷ್ಣ ರಾವ್ ಮತ್ತು ಕೇಶವ ಭಟ್ಟ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಡಾ. ವರದರಾಜ ಚಂದ್ರಗಿರಿಯವರು ತಮ್ಮ ಅಭಿಪ್ರಾಯವನ್ನು "'ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ ?' ಎಂಬ ಕೀರ್ತನೆಯಲ್ಲಿ ಜಾತಿ ಪದ್ಧತಿ ಎಂಬ ಅರ್ಥಹೀನ ವ್ಯವಸ್ಥೆಯ ಬಗ್ಗೆ ಮಾರ್ಮಿಕವಾಗಿ ನುಡಿದಿದ್ದಾನೆ. ಹುಟ್ಟುವುದೆಲ್ಲ ಯೋನಿಯ ಮೂಲಕವೇ, ಮೆಟ್ಟುವುದೆಲ್ಲ ಒಂದೇ ನೆಲವನ್ನು, ತಿನ್ನುವ ವಸ್ತುಗಳೆಲ್ಲ ಒಂದೇ. ನೀರಿಗೆ ಜಾತಿ ಇಲ್ಲ. ಎಲ್ಲರೂ ಅದನ್ನು ಬಳಸುವುದು ಹಾಗೆ ಹೇಳ್ತಾ 'ಜಲದ ಬೊಬ್ಬುಳಿಯಂತೆ ಸ್ಥಿರವಲ್ಲವೀ ದೇಹ ನೆಲೆಯರಿತು ನೀ ನೆನೆಕಂಡ್ಯ ಮನುಜ' ಎಂದು ತಿಳಿ ಹೇಳುತ್ತಾರೆ. ದೇಹವೇ ಸ್ಥಿರವಲ್ಲ ಮತ್ತೆ ಜಾತಿಯನ್ನು ಯಾಕೆ ಶಾಶ್ವತ ಎಂದು ತಿಳಿಯುತ್ತೀರಿ ಎಂದು ಪಶ್ನಿಸುತ್ತಾನೆ. ಮಾನವನೇ ಸೃಷ್ಟಿಸಿಕೊಂಡ ಉಚ್ಛ ನೀಚ ಭಾವನೆಗಳು ತೊಲಗಬೇಕು ಎನ್ನುವುದು ಕನಕನ ಆಶಯ"[೨೧] ಎನ್ನುತ್ತಾರೆ.

ಡಾ. ಜಿ. ಭಾಸ್ಕರ ಮಯ್ಯ ಅವರು ಕನಕದಾಸರ ಕೀರ್ತನೆಗಳನ್ನು ಬೇರೆ ದೃಷ್ಟಿಕೋನದಿಂದ ವಿಮರ್ಶಿಸಿದ್ದಾರೆ. ಕನಕದಾಸರ 'ಕುಲಕುಲಕುಲವೆನ್ನುತಿಹರು' ಕೀರ್ತನೆಯಲ್ಲಿ ಜಾತಿ ವಿರೋಧಿ ಧೋರಣೆಯನ್ನು ತಳೆದಿದ್ದಾರೆಂಬುದನ್ನು ಅಲ್ಲಗಳೆದಿದ್ದಾರೆ. "ಕುಲ ವಂಶ ಎಂಬಲ್ಲಿ ಉಳ್ಳವರ ವರ್ಗದವರ ಕುರಿತಾಗಿ ಹೇಳುತ್ತಿರಬಹುದು. ಸತ್ಯ ಸುಖವುಳ್ಳ ಜನರಿಗೆ ವಂಶ, ಜಾತಿ ಯಾವುದೂ ಅನ್ವಯಿಸುವುದಿಲ್ಲ. ಏಕೆಂದರೆ ಅಂತವನಿಗೆ ಆದಿಕೇಶವ ಒಲಿದಿರುತ್ತಾನೆ. ' ಹಸುವಿನ ಮಾಂಸ' 'ಮೃಗಗಳ ಮೈ' ಇವೆಲ್ಲ ಹೀನವಂಶವನ್ನು ಸಂಕೇತಿಸುತ್ತವೆಯೆಂದುಕೊಂಡರೆ, ಅವುಗಳಲ್ಲಿ 'ಕ್ಷೀರ' ಹಾಗೂ 'ಕಸ್ತೂರಿ' ಹುಟ್ಟಿದರೆ ಅದನ್ನು ಉತ್ತಮ ವಂಶದವರು ಸಂತೋಷದಿಂದ ಸ್ವೀಕರಿಸುವ ಹಾಗೆ ಸತ್ಯ ಸುಖವನ್ನು ಪಡೆದ ಒಬ್ಬ ಅನುಭಾವಿಯು ಅಥವಾ ಆದಿಕೇಶವನು ಒಲಿದ ವ್ಯಕ್ತಿಯು ಮನ್ನಣೆಗೆ ಸನ್ಮಾನಕ್ಕೆ ಅರ್ಹನಾಗುತ್ತಾನೆ. ಆ ಅರ್ಹತೆ ಅವನು ಗಳಿಸದಿದ್ದರೆ ಅವನು 'ಕುಲಹೀನನೆ!' ಅಂತೆಯೇ ಆತ್ಮ ಪರಮಾತ್ಮ ವಿಷ್ಣು , ಶಿವ ಇವುಗಳೆಲ್ಲಾ ತರತಮ ಅಥವಾ ತಾರತಮ್ಯವನ್ನು ಮೀರಿದವರು. ಅವರು ವರ್ಗ ಮುಕ್ತರು ಅಥವಾ ಕುಲಮುಕ್ತರು. ಈ ರೀತಿ ಕನಕದಾಸರ ಈ ಕೀರ್ತನೆಯು ಪ್ರಚ್ಛನ್ನ 'ವರ್ಗಸಂಘರ್ಷ' ವನ್ನು ಸಾಂಕೇತಿಸಬಹುದೇ ಹೊರತು ಜಾತಿ ಸಂಘರ್ಷವನ್ನಲ್ಲ. ವಸ್ತು ಸ್ಥಿತಿಯಲ್ಲಿ ಇದು ಸಂಸಾರಿಗಳು ಮತ್ತು ಸಾಧಕರ ನಡುವಿನ ಅಂತರವನ್ನು ಹೇಳುತ್ತದೆ. ಆಧ್ಯಾತ್ಮಿಕ ಮೌಲ್ಯದ ಔನ್ನತ್ಯವನ್ನು ಹೇಳುತ್ತದೆ. 'ಕುಲಕುಲಕುಲವೆಂದು ಹೊಡೆದಾಡದಿರಿ' ಕೀರ್ತನೆಯಲ್ಲಿ ಜಗತ್ತಿನ ಬಗ್ಗೆ ಮನುಷ್ಯನ ಅರಿವು ಎಷ್ಟೊಂದು

'ಕಿರಿದು' ಎನ್ನುವುದನ್ನು ಹೇಳುತ್ತದೆ. ಮನುಷ್ಯನ ಜೀವನ ನೀರ ಮೇಲಣ ಗುಳ್ಳೆಯಂತೆ ನಶ್ವರ ಎಂದು ಹೇಳುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ 'ಹರಿಸರ್ವೋತ್ತಮ' ಎಂಬ ಮಧ್ವ ಸಿದ್ಧಾಂತವನ್ನು ಪ್ರತಿಪಾದಿಸುತ್ತದೆ. ಹೀಗಿರುವಾಗ ಇದು ಜಾತಿ ವ್ಯವಸ್ಥೆಯನ್ನು ಖಂಡಿಸುವ ಕೀರ್ತನೆ ಹೇಗಾಗುತ್ತದೆ? ಇದೊಂದು ವಿಶಿಷ್ಟ ದಾರ್ಶನಿಕ ಪರಂಪರೆಯನ್ನು ಒತ್ತಿ ಹೇಳುತ್ತದೆ''. [೨೨] ಹೀಗೆ ಕನಕದಾಸರ ಕೀರ್ತನೆಯು ಜಾತಿಯನ್ನು ಖಂಡಿಸುವ ಕೀರ್ತನೆ ಅಲ್ಲ ಎಂಬುದು ಭಾಸ್ಕರ ಮಯ್ಯರ ಅಭಿಪ್ರಾಯವಾಗಿದೆ.

ಕನಕದಾಸರು ಜಾತಿಭೇದ ಮಾತ್ರವಲ್ಲ ವೃತ್ತಿ ಭೇದವೂ ಸಲ್ಲ ಎಂಬುದನ್ನು 'ಎಲ್ಲರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಎಂಬ ಕೀರ್ತನೆಯಲ್ಲಿ ತಿಳಿಸಿದ್ದಾರೆ. ''ವೇದ ಶಾಸ್ತ್ರ ಓದಿ ಬೋಧಿಸುವುದು, ಭಟರಾಗಿ ವೈರಿಗಳನ್ನು ನಿಗ್ರಹಿಸುವುದು, ವ್ಯಾಪಾರ ಮಾಡುವುದು, ಕೃಷಿ ಮಾಡುವುದು, ತಾಳ ತಂಬೂರಿ ಹಿಡಿದು ಕುಣಿಯುವುದು. ಸನ್ಯಾಸಿ ಜಂಗಮ ಮುಂತಾದ ನಾನಾ ವೇಷ ಹಾಕುವುದು, ಅಂದಣ ಪಲ್ಲಕ್ಕಿ ಏರಿ ಚಂದದಿಂದ ಮೆರೆಯುವುದು, ಕಳ್ಳತನ ಮಾಡುವುದು ಎಲ್ಲವೂ ಹೊಟ್ಟೆಗಾಗಿ ಮಾಡುವ ಕಾಯಕವೆಂದಿದ್ದಾರೆ. ಕಳ್ಳನನ್ನು ತಂಬೂರಿ ಹಿಡಿದ ದಾಸರನ್ನು ಸಮಾನವಾಗಿ ಕಂಡಿದ್ದಾರೆ. ಭಕ್ತಿಯ ಡಾಂಭಿಕತೆಯನ್ನು ಲೇವಡಿ ಮಾಡಿದ್ದಾರೆ. ಎಲ್ಲವೂ ಮನುಷ್ಯರು ಹೊಟ್ಟೆಗಾಗಿ ಮಾಡುವ ವೃತ್ತಿಗಳೇ ಹೊರತು ಅವುಗಳಲ್ಲಿ ಮೇಲುಕೀಳು ಎಲ್ಲಿಂದ ಬಂತು? ಎಂಬುದಾಗಿ ಹೇಳಿದ್ದಾರೆ . ಈ ರೀತಿಯ ಸಮಾನತಾ ತತ್ವವನ್ನು ಯಾವ ದಾಸರೂ ಹಾಡಿಲ್ಲ . ಕೊನೆಗೆ ಆದಿಕೇಶನನ್ನು ಮನಮುಟ್ಟಿ ಭಜಿಸುವುದು ಮಾತ್ರ ಮುಕ್ತಿಗಾಗಿ, ಆನಂದಕ್ಕಾಗಿ ಎಂದು ಹೇಳಲು ಕನಕದಾಸರು ಮರೆಯುವುದಿಲ್ಲ''.[೨೩] ಎಂಬುದಾಗಿ ಬಿ.ಎಮ್. ರೋಹಿಣಿಯವರು ಹೇಳುತ್ತಾರೆ.

''ಸಮಾಜ ಮುಖಿ ಚಿಂತನೆಗಳನ್ನು ತಮ್ಮ ಸೃಜನ ಶೀಲತೆಯಲ್ಲಿ ವ್ಯಕ್ತಪಡಿಸುವ ಕನಕರು , ಮಾನವ ತನ್ನ ಬದುಕಿನ ಅನಿವಾರ್ಯತೆಗಾಗಿ ಹತ್ತಾರು ಮಾರ್ಗಗಳನ್ನು ಹಿಡಿಯುವ ಕುರಿತು ' ಎಲ್ಲರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಕೀರ್ತನೆಯಲ್ಲಿ ಹೇಳುತ್ತಾರೆ. ಸಾಧನೆಯ ಹಾದಿಯಲ್ಲಿ ಕನಕದಾಸರು ಹೇಳುವ ಈ ನಿತ್ಯಸತ್ಯ ಗಳು ಅತ್ಯಂತ ಪ್ರಮುಖವಾದುದು. ಅಂದರೆ ವೈದಿಕಶಾಹಿಯು ಸೃಷ್ಟಿಸಿದ ಸಾಮಾಜಿಕ ಗೊಂದಲಗಳಿಗೆ ಕನಕರು ಬಹು ಸ್ಪಷ್ಟವಾಗಿ ಇಲ್ಲಿ ವಿಮರ್ಶೆಗೆ ಒಡ್ಡುತ್ತಾರೆ. ನಾಲ್ಕು ವೇದ– ಪುರಾಣ ಶಾಸ್ತ್ರ, ಪಂಚಾಂಗ ಹೇಳಿಕೊಂಡು ಕಾಲ ಕಳೆಯುವುದೆಲ್ಲ ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ಎಂದು ತಿಳಿಸುವ 'ಕಾಲ ಕಳೆಯುವುದೆಲ್ಲ' ಎನ್ನುವ ಮಾತು ಅರ್ಥಗರ್ಭಿತವಾದುದು . ಮಾನವೀಯತೆಯನ್ನು ನಿರ್ಲಕ್ಷಿಸುವ ಈ ಕಾಲ ಕಳೆಯುವಿಕೆಯನ್ನು ಮೀರಬೇಕೆಂಬ ಅರ್ಥ ಧ್ವನಿ ಇಲ್ಲದೆ. ಮುಂದುವರೆದು ಅದೇ ಕೀರ್ತನೆಯಲ್ಲಿ ' ಉನ್ನತ ಕಾಗಿನೆಲೆ ಆದಿಕೇಶವನ ಅನುದಿನ ನೆನೆವುದು ಭಕ್ತಿಗಾಗಿ– ಪರಮ ಮುಕ್ತಿಗಾಗಿ'ಎಂದು ಹೇಳುವಲ್ಲಿ ಭಕ್ತಿ– ಪರಮ ಮುಕ್ತಿಯು ಕಾಲ ಕಳೆಯುವ ಹೊಟ್ಟೆ ಪಾಡಿನದಲ್ಲ. ಬದಲಿಗೆ ಅದಕ್ಕಿಂತಲೂ ಮಿಗಿಲಾದುದು ಮತ್ತು ಉನ್ನತ ವಾದುದು ಎನ್ನುವುದನ್ನು ಹೇಳುತ್ತಲೆ ಮಾನವರೇ ಸೃಷ್ಟಿಸಿಕೊಂಡಿರುವ ಉಚ್ಛ–ನೀಚ ಪರಿಕಲ್ಪನೆಯನ್ನು ಒಡೆದುಹಾಕುತ್ತಾರೆ. ಅಲ್ಲದೆ ಹೊಟ್ಟೆ ಪಾಡಿಗಾಗಿ ಸೃಷ್ಟಿಸಿಕೊಂಡಿರುವ ಮಿಥ್ಯಸೃಷ್ಟಿಗಳು

ತೊಲಗಬೇಕೆಂಬ ಆಶಯ ಗುಪ್ತವಾಗಿಯೇ ಇಲ್ಲಿ ವ್ಯಕ್ತವಾಗುತ್ತದೆ. ಭಕ್ತಿ ಎನ್ನುವುದು ಜಾತಿ ಕುಲಗಳನ್ನು ಮೀರಿದುದು ಮತ್ತು ಜೀವಪರವಾದುದು ಎಂದೇ ಕನಕರ ಅಭಿಪ್ರಾಯ''.[೨೪] ಎಂಬುದಾಗಿ ಯಸ್. ನರೇಂದ್ರಕುಮಾರ್ ತನ್ನ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ.

ಕರ್ನಾಟಕದ ಹರಿದಾಸ ಪರಂಪರೆಯ ಕೀರ್ತನಕಾರರಲ್ಲಿ ತಳ ಸಮುದಾಯದ ವ್ಯಕ್ತಿಯಾಗಿ ಕನಕದಾಸರೊಬ್ಬರ ಹೆಸರು ಮಾತ್ರವೇ ಗುರುತಿಸಲ್ಪಡುವುದು. ''೧೬ನೆಯ ಶತಮಾನದ ಈ ದಾಸ ಪರಂಪರೆಗೂ ಹಿಂದೆಯೇ ಅಂದರೆ ೧೨ನೇ ಶತಮಾನದ ವಚನ ಚಳವಳಿಯಲ್ಲಿ ಅನೇಕ ಶೂದ್ರ , ಅಸ್ಪೃಶ್ಯ ಮತ್ತು ಮಹಿಳಾ ಅಭಿವ್ಯಕ್ತಿಗಳು ದಾಖಲಾದುದನ್ನು ಹೊರತು ಪಡಿಸಿದರೆ ಈ ನಾಲ್ಕು ಶತಮಾನಗಳ ನಂತರ ಶೂದ್ರ ಸಮುದಾಯದಿಂದ ಬಂದು ಸಮಾನತೆಯನ್ನು ಸಾರಿದವರು ಸಂತ ಕನಕದಾಸರು . ಶತಮಾನಗಳ ಅಂತರದ ಶೂದ್ರರ ಮೌನದ ಹಿಂದೆ ಅಕ್ಷರ ವಂಚಿತ ಮತ್ತು ಸಾಮಾಜಿಕವಾಗಿ ಅವರನ್ನು ನಗಣ್ಯರಾಗಿಸಿದ ಇತಿಹಾಸವಿದೆ. ಕನಕದಾಸರು ಕೂಡಾ ತಾವು ಬದುಕಿನುದ್ದಕ್ಕೂ ತಮ್ಮ ಸಮಕಾಲೀನ ಕೀರ್ತನೆಕಾರರು ನೀಡಿದ ಕಷ್ಟ ಕೋಟಲೆಗಳ ನಡುವೆಯೂ ತಮ್ಮತನವನ್ನು ಕಾಯ್ದುಕೊಳ್ಳುತ್ತಾರೆ. ತಮ್ಮ ಆದಿಕೇಶವನನ್ನು ನೆಲಮುಖಿ ಆಶಯದ ದೈವವಾಗಿಯೇ ಚಿತ್ರಿಸುತ್ತಾರೆ. ಈ ಹಿನ್ನೆಲೆಯಲ್ಲಿ ಅವರದು ಆಧ್ಯಾತ್ಮಿಕದ ಜೊತೆಗೆ ಸಾಮಾಜಿಕ ಸಂಘರ್ಷದ ಮಾರ್ಗವಾಗಿ ಕಂಡು ಬರುತ್ತದೆ''.[೨೫] ಎಂಬುದಾಗಿ ಕನಕದಾಸರ ಕೀರ್ತನೆಗಳಲ್ಲಿ ವ್ಯಕ್ತಪಡಿಸುವ ಸಮಾಜ ಸಂಘರ್ಷದ ಬಗ್ಗೆ ಎಸ್. ನರೇಂದ್ರಕುಮಾರ್ ತಿಳಿಸಿದ್ದಾರೆ.

ಕನಕದಾಸರು ಜಾತಿ, ಕುಲ ಅಥವಾ ವರ್ಗಗಳ ಬಗ್ಗೆ ಹೇಳುವ ಬಹಳಷ್ಟು ಕೀರ್ತನೆಗಳು ಕೇವಲ ಜಾತಿ ಅಥವಾ ವರ್ಣವಷ್ಟೆ ದೃಷ್ಟಿಯಲ್ಲಿಟ್ಟುಕೊಳ್ಳದೆ ನಿಜವಾದ ಭಕ್ತನನ್ನೆ ಕುಲೀನ ಎಂದು ಸಾರುವಂತೆ ಕಾಣುತ್ತದೆ. ಜಾತಿಯ ಮತ್ತು ವರ್ಗಗಳ ನಡುವಿನ ತಾರತಮ್ಯವಾಗಿ ರಾಗಿ ಭತ್ತಗಳ ರೂಪಕಗಳ ಮೂಲಕ ರಾಮಧಾನ್ಯ ಚರಿತೆಯಲ್ಲಿ ತೋರಿದ ರೀತಿ ಯಾವುದೇ ಕೀರ್ತನೆಯಲ್ಲಿ ಕನಕದಾಸರು ತೋರಿದಂತೆ ಕಾಣಬರುವುದಿಲ್ಲ . ಕೀರ್ತನೆಗಳಲ್ಲಿ ಈ ಅಂಶವನ್ನು ಕೀರ್ತನೆಕಾರರು ಗುರುತಿಸಿಲ್ಲ. ಆದರೆ ಈ ವರೆಗಿನ ಅಧ್ಯಯನಗಳೆಲ್ಲಾ ಕನಕದಾಸರನ್ನು ಮುಖ್ಯವಾಗಿ ಸಾಮಾಜಿಕ ಸಮಾನತೆಯ ಆಶಯವನ್ನು ವ್ಯಕ್ತಪಡಿಸಿದ ಅಥವಾ ಸಮಾಜ ಸುಧಾರಣೆಗಾಗಿ ಪ್ರಯತ್ನಿಸಿದ ಒಬ್ಬ ಭಕ್ತನಾಗಿ ನೋಡುತ್ತವೆ. ಕನಕದಾಸರನ್ನು ಒಬ್ಬ ಕವಿಯಾಗಿ ಹಾಗೂ ಏನು ಸಾಧಿಸಿದ್ದಾರೆ ಎಂಬುದನ್ನು ಹಾಗೂ ತಮ್ಮ ಕೀರ್ತನೆಗಳಲ್ಲಿ ಕನಕದಾಸರು ಸಾಧಿಸಿದ ಕಾವ್ಯಾತ್ಮಕತೆಯನ್ನು ಅಧ್ಯಯನ ಮಾಡುವ ಅಗತ್ಯವಿದೆ.

ಟಿಪ್ಪಣಿಗಳು :

೧. ಶಿವರುದ್ರಪ್ಪ. ಕೆ, ಸಂಶೋಧನಾ ಸಮೀಕ್ಷೆ ಹಾಗೂ ವಿಶ್ಲೇಷಣೆ, ಪುಟ ೪೯

೨. ಶ್ರೀ ಪಿ.ಯನ್. ಬನ್ನಂಜೆ ರಾಮಾಚಾರ್ಯರು, ಕನಕದಾಸರು, ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ, ಪುಟ ೪೭

೩. ಚಂದ್ರಕಾಂತ ಬಿಜ್ಜರಗಿ, ದಾಸರ ಜೀವನ ದರ್ಶನ, ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ, ಪುಟ ೩೩೨

೪. ಹೊ.ರಾ. ಸತ್ಯನಾರಾಯಣರಾವ್ , ಮುನ್ನುಡಿ, ಕನಕದಾಸರ ಜನಪ್ರಿಯ ಕೀರ್ತನೆಗಳು

೫. ಕೃಷ್ಣರಾವ್ ಎಂ.ವಿ., ಕೇಶವ ಭಟ್ಟ ಎಂ., ಕನಕದಾಸರು, ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ, ಪುಟ.೧೫೭

೬. ದೇ.ಜವರೇಗೌಡ, ಸಂತಕವಿ ಕನಕದಾಸರು, ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ,,ಪುಟ ೧೮೬.

೭. ಡಾ. ಎಸ್.ಎಸ್.ಜಕಬಾಳ, ಜೀವನ ವಿಚಾರ, ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ ಪುಟ.೨೫೫

೮. ಡಾ. ದೇ. ಜವರೇಗೌಡ, ಸಂತಕವಿ ಕನಕದಾಸರು, ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ,,ಪುಟ ೧೯೪.

೯. ಎಸ್.ಕೆ.ರಾಮಚಂದ್ರ ರಾವ್, ಕಾಗಿನೆಲೆಯ ಕನಕ, ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ, ಪುಟ ೧೫೩.

೧೦. ಬಿ.ರಾಜಶೇಖರಪ್ಪ, ಕನಕದಾಸರು : ಹೊಸ ಚಾರಿತ್ರಿಕ ಸಂಗತಿಗಳು, ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ, ಪುಟ ೪೯೫ –೪೯೬.

೧೧. ಉದಾಹರಣೆಗೆ ನೋಡಿ: ಚಂದ್ರಕಾಂತ ಬಿಜ್ಜರಗಿ, ದಾಸರ ಜಾತಿ–ಮತ, ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ, ಪುಟ ೭೯೬.

೧೨. ರಾಮಚಂದ್ರ ದೇವ, ಕನಕದಾಸರು : ಕೆಲವು ಟಿಪ್ಪಣಿಗಳು, ಕನಕ ಚಿಂತನ ೨೦೦೯–೨೦೧೦ ಪುಟ ೧೫೭.

೧೩. 'ಅಷ್ಟಾವಧಾನಿ' ಕಬ್ಬಿನಾಲೆ ಬಾಲಕೃಷ್ಣ ಭಾರದ್ವಾಜ್, ನಾ ಕಂಡಂತೆ– ಕನಕ ಸಾಹಿತ್ಯ, ಕನಕ ಚಿಂತನ ೨೦೧೧ –೨೦೧೨, ಪುಟ ೧೫೭

೧೪. ಡಾ. ತಾಳ್ತಜೆ ವಸಂತ ಕುಮಾರ, ಕನಕದಾಸರ 'ನಳಚರಿತ್ರೆ', ಕನಕ ಚಿಂತನ ೨೦೧೧–೨೦೧೨, ಪುಟ ೧೪೪

೧೫. ಪ್ರೊ . ರಾಜಾರಾಮ ಹೆಗಡೆ, ಸಾಂಸ್ಕೃತಿಕ ಇತಿಹಾಸದ ಸ್ವೀಕೃತ ಮಾದರಿಗಳು, ಕನಕನ ಸುತ್ತಮುತ್ತ : ಸಂಕಥನಗಳ ಜಿಜ್ಞಾಸೆ , ಪುಟ ೨೭

೧೬. ಡಾ| ಸುರೇಶ್ ನಾಗಲ ಮಡಿಕೆ, ಕನಕದಾಸರ ಸುತ್ತಮುತ್ತ, ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ, ಪುಟ ೩೬೩

೧೭ ರಂ ಶ್ರೀ. ಮುಗಳಿ, ಕನಕದಾಸ, ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ, ಪುಟ ೯೧

೧೮ ಗಂಗಾಧರ ಕೊಡ್ಲಿಯವರ, ಸಂತಕವಿ ಕನಕದಾಸರು, ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ, ಪುಟ ೩೧೨

೧೯ ಅರವಿಂದ ಚೊಕ್ಕಾಡಿ, ಕನಕದಾಸರ ತಾತ್ವಿಕ ಪ್ರಾಮುಖ್ಯತೆ, ಕನಕ ಚಿಂತನ ೨೦೦೭–೨೦೦೮, ಪುಟ ೧೧೬

೨೦ ಡಾ. ಎಚ್. ಜೆ. ಲಕ್ಕಪ್ಪ ಗೌಡ, ಕನಕದಾಸರ ಕೀರ್ತನೆಗಳು : ಕಾವ್ಯ ಮೌಲ್ಯ, ಕನಕದಾಸರ ಒಂದು ಅಧ್ಯಯನ, ಪುಟ ೮೯

೨೧ ಕೃಷ್ಣ ರಾವ್ ಎಂ. ವಿ, ಕೇಶವ ಭಟ್ಟ ಎಂ,ಕನಕದಾಸರು, ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ, ಪುಟ ೧೫೭– ೧೫೮

೨೨ ಡಾ. ವರದರಾಜ ಚಂದ್ರಗಿರಿ,ಕನಕ ಸಾಹಿತ್ಯ ಚಿಂತನೆ, ಕನಕ ಚಿಂತನ ೨೦೦೭–೨೦೦೮,ಪುಟ೩೩

೨೩ ಡಾ. ಜಿ. ಭಾಸ್ಕರ ಮಯ್ಯ, ಕನಕದಾಸರೊಂದಿಗೆ ಮುಖಾಮುಖಿ, ಚಿಂತನ ಬಯಲು, ಸಂಪುಟ ೨, ಸಂಚಿಕೆ ೩, ಪುಟ ೨೩

೨೪ ಬಿ ಎಂ ರೋಹಿಣಿ, ಕನಕದಾಸರ ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆಗಳು, ಕನಕ ಚಿಂತನ ೨೦೦೭– ೨೦೦೮, ಪುಟ ೨೭

೨೫ ಎಸ್. ನರೇಂದ್ರ ಕುಮಾರ್, ಅರಿಯಬೇಕಾದ ಎಚ್ಚರ, ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ, ಪುಟ ೬೬೫ – ೬೬೬

೨೬ ಎಸ್. ನರೇಂದ್ರ ಕುಮಾರ್, ಅರಿಯಬೇಕಾದ ಎಚ್ಚರ, ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ, ಪುಟ ೬೬೫

ಅಧ್ಯಾಯ ೩

ಪ್ರತಿಮೆಗಳ ಕುರಿತಾದ ವ್ಯಾಖ್ಯಾನಗಳು

ಅಧ್ಯಾಯ – ೩

ಪ್ರತಿಮೆಗಳ ಕುರಿತಾದ ವ್ಯಾಖ್ಯಾನಗಳು

'ಪ್ರತಿಮೆ' ಎಂಬ ವಿಶಾಲ ಅರ್ಥದ ಪದವು ಸರಳಚಿತ್ರ ಉಪಮೆ, ರೂಪಕ, ಪ್ರತೀಕ ಎಲ್ಲವನ್ನು ಒಳಗೊಳ್ಳುತ್ತದೆ. "ಕಾವ್ಯದ ಉನ್ನತಿ ಇರುವುದೇ ಅದರ ಪ್ರತಿಮಾ ನಿರ್ಮಿತಿಯಲ್ಲಿ. ಅದೇ ಕಾವ್ಯದ ಜೀವಾಳ ಎನ್ನುವ ಡ್ರೈಡನ್ ಪ್ರತಿಮೆಯನ್ನು ಕಾವ್ಯದ ಹೃದಯವಾಗಿ ಕಂಡಿದ್ದಾನೆ. ಪ್ರತಿಮೆ ಎಲ್ಲ ಬಗೆಯ ಉಪಮೆ, ರೂಪಕಗಳನ್ನು ಒಳಗೊಳ್ಳುವ ಒಂದು ಪರಿಭಾಷಾ ಪದ. ಇಂದ್ರಿಯಾನುಭವಗಳ ಮೂಲಕವೇ ಅಲ್ಲದೆ ಚಿಂತನೆ, ಭಾವನೆಗಳ ಮೂಲಕ ಬಂದ ಯಾವುದೇ ಕಲ್ಪನಾ ಚಿತ್ರವೂ ಪ್ರತಿಮೆಯಾಗುತ್ತದೆ. ಇವು ಸಾದೃಶ್ಯ ರೂಪದ ಉಪಮೆ ರೂಪಕಗಳಾಗಿ ಕಾಣಿಸಿಕೊಂಡಿರುತ್ತವೆ. ಈ ಉಪಮೆ ರೂಪಕಗಳು ಪುಟ್ಟ ಶಬ್ದಚಿತ್ರಗಳಾಗಿದ್ದು, ತಮ್ಮ ಆಶಯವನ್ನು ಬೆಳಗಲು ನಿದರ್ಶಿಸಲು, ಅಲಂಕರಿಸಲು ಕವಿಯಿಂದ ಬಳಕೆಯಾಗಿರುತ್ತವೆ".[೧]

ಪ್ರತಿಮೆಯೆಂದರೆ ಕಣ್ಣಿಗೆ ಕಟ್ಟುವಂತಿರುವ ಶಬ್ದಚಿತ್ರಗಳು. ವಸ್ತು ಕ್ರಿಯೆ ಮತ್ತು ಅಮೂರ್ತ ಆಲೋಚನೆ, ಭಾವನೆಗಳನ್ನು ವಿವರಣಾತ್ಮಕವಾಗಿ, ಮೂರ್ತವಾಗಿ ಭಾಷೆಯಲ್ಲಿ ವಿವರಿಸುವುದು. ಅಮೂರ್ತವಾದದ್ದನ್ನು ಮೂರ್ತಗೊಳಿಸುವಷ್ಟರ ಮಟ್ಟಿಗೆ ಪ್ರತಿಮೆಗಳು ಕಾವ್ಯಕ್ಕೆ ಅನಿವಾರ್ಯ. ದಿನಬಳಕೆಯ ಭಾಷೆಯ ಮಿತಿಗಳನ್ನು ಮೀರಲು ಅವು ಸಹಾಯಕಗಳೂ ಆಗುತ್ತವೆ. "ಭೌತಿಕ ಪ್ರತಿಮೆಗಳ ಸೂಕ್ತ ಬಳಕೆ ಕಾವ್ಯಕ್ಕೆ ನಿರ್ದಿಷ್ಟತೆ ಸ್ಪಷ್ಟತೆಗಳನ್ನು ಒದಗಿಸಿ ಒಂದು ಸೂಕ್ತ ನಿರ್ದೇಶನಕ್ಕೊಳಪಟ್ಟಂತೆ ಓದುಗನ ಭಾವನೆಗಳನ್ನು ಉದ್ದೀಪಿಸುತ್ತವೆ. ಪ್ರತಿಮೆಗಳು ಬದುಕಿನ ನೇರ ಪ್ರತಿಫಲನಗಳಾದ್ದರಿಂದ ಕವಿಯು ಬದುಕಿನಿಂದ ಆಯ್ದ ಸಂಗತಿಗಳನ್ನು ಕಾವ್ಯದ ಚೌಕಟ್ಟಿನಲ್ಲಿ ಸಾಮಾನ್ಯೀಕರಣಗೊಳಿಸಿ ಅವುಗಳ ಸತ್ಯವನ್ನು ತೆರೆದಿಡುವಂಥವೂ ಆಗುತ್ತವೆ".[೨]

ಕುವೆಂಪು ಅವರ ಪ್ರಕಾರ ಪ್ರತಿಮೆಯು ಯಾವ ಒಬ್ಬ ವ್ಯಕ್ತಿಯ ಮನಸ್ಸಿನ ರಚನೆಯಲ್ಲ ಅದು ಒಂದು ಜನಾಂಗದ ಸಮಷ್ಟಿ ಮನಸ್ಸಿನ ಸಾಮೂಹಿಕ ಸೃಜನೆಯಾಗುತ್ತದೆ ಮತ್ತು ಕೆಲವು ಬಾರಿ ಇಡೀ ಕಾವ್ಯವೇ ಮಹತ್ತಾದ ದರ್ಶನ ಧ್ವನಿಗೆ ಬೃಹತ್ ಪ್ರತಿಮೆಯಾಗಿ ಹೊರಹೊಮ್ಮಬಹುದು.

'ಪ್ರತಿಮೆ' ಎನ್ನುವುದು ಖಚಿತವಾದ ವಿಶೇಷಾಭಿವ್ಯಕ್ತಿ. "ಲೆವಿಸ್ ಹೇಳುವಂತೆ ಕಾವ್ಯ ಪ್ರತಿಮೆ ಎಂದರೆ ಶಬ್ದಚಿತ್ರ ಎನ್ನುವುದು ಅದರ ಅತಿಸರಳ ನಿರೂಪಣೆ. ಉಪಮೆ ರೂಪಕಗಳಿಗೂ ಪ್ರತಿಮೆಗೂ ಇರುವ ವ್ಯತ್ಯಾಸಗಳನ್ನು ಗಮನಿಸುತ್ತಾ ಹೋದಂತೆ ಪ್ರತಿಮೆಯ ಸಂದರ್ಭದಲ್ಲಿ ಮೂಡುವ ಚಿತ್ರ ಕೇವಲ ಶಬ್ದಚಿತ್ರವಾಗಿರದೆ ಅದು ಮೂಡಿ ಬರುವ ಇಡೀ ಸಂದರ್ಭವನ್ನು ಭಾವದೀಪ್ತಗೊಳಿಸುವ

ಹಾಗೂ ಆ ಸಂದರ್ಭದ ಭಾವತೀವ್ರತೆಯನ್ನು ರೂಪಕಾತ್ಮಕವಾಗಿ ಕಟ್ಟಿಕೊಡುವಂಥದ್ದು ಎಂದು ವಿವರಣೆಗಳು ಮೂಡುತ್ತವೆ. ಎಜ್ರಾಫೌಂಡ್ ಹೇಳುವಂತೆ ಸಂದರ್ಭವೊಂದರ ಬೌದ್ಧಿಕ ಹಾಗೂ ಭಾವುಕ ಸಂಕೀರ್ಣತೆಯನ್ನು ಹಿಡಿದಿಡುವ ಕ್ರಮವಿದು. ಶಬ್ದಗಳ ಮೂಲಕ ಚಿತ್ರವೊಂದನ್ನು ಕಟ್ಟಿಕೊಟ್ಟು ಬದುಕಿನ ಕ್ಷಣವೊಂದರ ಭಾವಸಂಕೀರ್ಣತೆಯನ್ನು ಅನುಭವಕ್ಕೆ ತಂದುಕೊಡುವುದು ಪ್ರತಿಮೆ ಮಾಡುವ ಕೆಲಸ. ಅದು ಉಪಮೆ ರೂಪಕಗಳಿಗಿಂತ ವಿಶಿಷ್ಟವಾಗಿ ಬೇರೆಯೇ ಆಗಿರುವಂತೆ ತೋರಿದರೂ ಅವುಗಳ ಎಲ್ಲ ಅಂಶಗಳನ್ನು ಒಳಗೊಳ್ಳುವಂತಹ ಒಂದು ನಿರ್ಮಾಣ ಪ್ರಕ್ರಿಯೆ. ಐ.ಎ. ರಿಚರ್ಡ್ಸ್ ಹೇಳುವಂತೆ, ಪ್ರತಿಮೆ ಅಪೂರ್ವವಾದ ಇಂದ್ರಿಯ ಸಂಬಂಧ ಹೊಂದಿದ ಒಂದು ಮಾನಸಿಕ ಘಟನೆ. ಕವಿಯ ಅನುಭವದಲ್ಲಿ ಕಣ್ಣಿಗೆ ಕಂಡ ಅಥವಾ ಕೇಳಿದ ಅಥವಾ ಸ್ಪರ್ಶಿಸಿದ ಘಟನೆಯೊಂದು ಮನಸ್ಸಿನಲ್ಲಿ ಉಂಟುಮಾಡಿದ ಅಪೂರ್ವ ರೀತಿಯ ಪರಿಣಾಮ ಪ್ರತಿಮೆಯಲ್ಲಿ ಮೂಡಿಬರುತ್ತದೆ. ಕೋಲ್‌ರಿಜ್ ಪ್ರಕಾರ ಪ್ರತಿಮೆ ಕವಿಯ ಪ್ರಜ್ಞೆಯ ತಳಾತಳದಿಂದ ಬಂದುದೇ ಹೊರತು ಬುದ್ಧಿಪೂರ್ವಕವಾಗಿ ನಡೆದುದಲ್ಲ. ಅಂದರೆ ಇದು ಅಪ್ರಜ್ಞಾಪೂರ್ವಕವಾಗಿ ಮೂಡಿಬಂದದ್ದು ಅಥವಾ ಕವಿಯ ಸುಪ್ತ ಪ್ರಜ್ಞೆಯಲ್ಲಿ ಎಂದೋ ಎಲ್ಲಿಯೋ ಕಂಡು ಕೇಳಿದ ಘಟನೆಗಳ ಪರಿಣಾಮ ಗಟ್ಟಿಗೊಂಡು ಇದ್ದಕ್ಕಿದ್ದಂತೆ ಅಂಥದೇ ಮತ್ತೊಂದು ಸಂದರ್ಭದಲ್ಲಿ ಮೇಲೆ ತೇಲಿ ಬಂದದ್ದು ಎನ್ನಬಹುದು ಒಟ್ಟಿನಲ್ಲಿ ಇದು ಅಪ್ರಯತ್ನಪೂರ್ವಕವಾಗಿ ನಡೆದದ್ದು".[೩]

'ಪ್ರತಿಮೆ' ಎಂಬ ಪದ ಆಂಗ್ಲರ 'ಇಮೇಜ್' ಪದಕ್ಕೆ ಸಂವಾದಿಯಾಗಿ ಬಂದಿದೆ. 'ಇಮೇಜ್' ಎಂಬ ಪದಕ್ಕೆ ನಿಘಂಟುಗಳಲ್ಲಿ ಸಾಮಾನ್ಯವಾಗಿ ಎರಡು ಅರ್ಥಗಳು ದೊರೆಯುತ್ತವೆ. ಅನುಕರಣೆ, ಪ್ರತಿನಿಧಿರೂಪ, ಪ್ರತಿರೂಪ ಎನ್ನುವುದು ಒಂದು ಅರ್ಥ. ಎರಡನೆಯ ಅರ್ಥವೆಂದರೆ ವಸ್ತುವೊಂದರ ಚಾಕ್ಷುಷ ಪ್ರತಿರೂಪ ಎನ್ನುವುದು. ಇವೆರಡೂ ಪ್ರತಿಮೆ ಪದದ ಮೂಲಾರ್ಥಗಳು"[೪] ಎಂಬುದಾಗಿ ಲಕ್ಷ್ಮೀನಾರಾಯಣ ಭಟ್ಟರು ತಿಳಿಸಿದ್ದಾರೆ.

"ಒಂದು ಸ್ಮೃತಿಚಿತ್ರದಿಂದ ಕವಿಯು ತನ್ನ ಕಾವ್ಯ ನಿರ್ಮಿತಿಯನ್ನು ಪ್ರಾರಂಭಿಸುತ್ತಾನೆ. ಇದು ಅವರ ಅನುಭವದ ನದಿಯಲ್ಲಿದ್ದ ಒಂದು ಹನಿಯು; ಹನಿಯಿಂದಾದ ಸ್ಫಟಿಕವೇ ಪ್ರತಿಮೆ"[೫] ಎಂಬುದಾಗಿ ಜೀವಿ ಕುಲಕರ್ಣಿಯವರು ಹೇಳಿದ್ದಾರೆ.

ನವ್ಯ ಕವಿ ಗೋಪಾಲಕೃಷ್ಣ ಅಡಿಗರು ಪ್ರತಿಮೆಯನ್ನು ಕುರಿತು ಹೇಳಿರುವ ಮಾತುಗಳ ಸಾರವನ್ನು ಲಕ್ಷ್ಮೀನಾರಾಯಣ ಭಟ್ಟರು "ಉಪಮೆ, ರೂಪಕ ಅತಿಶಯೋಕ್ತಿ ಮೊದಲಾದ ಅಭಿವ್ಯಕ್ತಿ ಸಾಧನಗಳು ಪ್ರತಿಮೆ ಎನಿಸಿಕೊಳ್ಳುತ್ತವೆ ಕವಿಯ ಸಂವೇದನೆ ಭಾಷೆಯಲ್ಲಿ ಕಲಾತ್ಮಕವಾಗಿ ರೂಪುಗೊಂಡಾಗ ಕವಿತೆಯಲ್ಲಿ ಆ ಮೂಲ ಸಂವೇದನೆಯ ಪ್ರತಿಮೆ ದೊರೆಯುತ್ತದೆ. ಪ್ರತಿಮೆ ಮೂಲಭಾವದ ಛಾಯೆಯಾಗಲೀ ಅಲಂಕರಣವಾಗಲೀ ಅಲ್ಲ. ಮೂಲಭಾವದ ವಿಗ್ರಹ ಆದ್ದರಿಂದ ಅದಕ್ಕೆ ಮೂಲ ಭಾವಕ್ಕೂ ಸಾಮರ್ಥ್ಯದ ಸಂಬಂಧ ಇದೆ. ಸಂಕೇತ ಪ್ರತಿಮೆಯಿಂದ ಭಿನ್ನ. ಅದು ಮೂಲ ವಸ್ತುವಿನ ಪರವಾಗಿ ಬರುತ್ತದೆ. ಪ್ರತಿನಿಧಿಯಾಗಿ ಅಲ್ಲ. ಮೂಲ ಸಂವೇದನೆಗೂ ಸಂಕೇತಕ್ಕೂ, ಸಾಮರ್ಥ್ಯ ಇಲ್ಲ. ಆದ್ದರಿಂದ ಅದು ಮೂಲವನ್ನು ಸೂಚಿಸುತ್ತದೆ ಅಥವಾ ನಮ್ಮ ಮನಸ್ಸಿನಲ್ಲಿ ಆ ಸಂಬಂಧವಾದ ಕೆಲವು ಪ್ರತಿಕ್ರಿಯೆಗಳನ್ನು ಹುಟ್ಟಿಸುತ್ತದೆ"[೬] ಎಂಬುದಾಗಿ ಹೇಳಿದ್ದಾರೆ.

'ಪ್ರತಿಮೆ' ಎನ್ನುವುದು ಮಾನಸಶಾಸ್ತ್ರ ಹಾಗೂ ಸಾಹಿತ್ಯಕ್ಕೆ ಸಂಬಂಧಿಸಿದ ವಿಷಯವಾಗಿದೆ. ಮಾನಸಶಾಸ್ತ್ರದಲ್ಲಿ "ಪ್ರತಿಮೆಗಳೆಂದರೆ ಸ್ಮೃತಿಗಳು; ಭೂತಕಾಲದ ವಿಸ್ಮಯಜನಕ ಅಥವಾ ಶಾಶ್ವತ ಅನುಭವಗಳು. ಈ ಅನುಭವಗಳು ದೃಷ್ಟಿಗೋಚರವಾಗಬೇಕೆಂದಿಲ್ಲ".[೬] ಎಂಬುದಾಗಿ ಜೀವಿ ಕುಲಕರ್ಣಿಯವರು ಹೇಳಿದ್ದಾರೆ. ಹೀಗೆ 'ಪ್ರತಿಮೆ' ಎನ್ನುವುದು ಮನಶ್ಯಾಸ್ತ್ರದಲ್ಲಿ ಸಂವೇದನೆ ಮತ್ತು ಗ್ರಹಣಾತ್ಮಕ ಅನುಭವಗಳ ಮಾನಸಿಕ ಪುನರ್‌ನಿರ್ಮಾಣ ಎಂಬ ಅರ್ಥವನ್ನು ಕೊಡುತ್ತದೆ. ಇವು ದೃಶ್ಯಾತ್ಮಕವಾದವುಗಳೇ ಆಗಿರಬೇಕಾಗಿಲ್ಲ.ಆಸ್ವಾದನಾತ್ಮಕ, ಘ್ರಾಣಾತ್ಮಕವಾದವುಗಳೂ ಆಗಿರಬಹುದು. ಆದರೆ ಸಾಹಿತ್ಯದ ವಲಯದಲ್ಲಿ ಈ 'ಪ್ರತಿಮೆ' ಎನ್ನುವ ಮಾತು ಒಂದು ವಿಶಿಷ್ಟವಾದ ಅರ್ಥವ್ಯಾಪ್ತಿಯನ್ನು ಪಡೆಯಿತು. "ಇದು ಹೊರ ಜಗತ್ತಿನ ಅನುಭವಿಗಳಿಗೆ ಕವಿ ತೋರಿಸುವ ಕೇವಲ ಪ್ರತಿಕ್ರಿಯಾತ್ಮಕವಾದ ನಿರೂಪಣೆಯಲ್ಲ ; ಅಥವಾ ತನ್ನ ಹಿಂದಿನ ಅನುಭವಗಳ ಹೆಜ್ಜೆ ಗುರುತುಗಳೋ ಅವಶೇಷಗಳೋ ಅಲ್ಲ. ಇದು ಕವಿಯ ಸೂಕ್ಷ್ಮಗ್ರಾಹಿಯಾದ ಮನಸ್ಸು ಸಾದೃಶ್ಯ ಮತ್ತು ಹೋಲಿಕೆಗಳ ಪ್ರಪಂಚದಲ್ಲಿ ನಿಂತು ಕಂಡುಕೊಳ್ಳುವ ವಿನೂತನ ಸೃಷ್ಟಿ. ಅದು ಕೇವಲ ಹೊರಗಿನದನ್ನಷ್ಟೇ ಕಣ್ಣು, ಕಿವಿ, ಮೂಗು ರಸನೆ ಇವುಗಳಿಗೆ ವಿಷಯವಾಗುವಂತೆ ನಿರೂಪಿಸುವಷ್ಟರಲ್ಲಿಯೇ ಪರ್ಯವಸಾನವಾಗುವುದಿಲ್ಲ. ಕವಿಯ ಅನುಭವದ ಬೇರೆ ಬೇರೆ ಸ್ತರಗಳೂ ಅದನ್ನು ನಿಯಂತ್ರಿಸಿ ರೂಪಿಸುತ್ತವೆ. ಅದು ಕೇವಲ ದೃಶ್ಯ, ಶ್ರವ್ಯ ಅಥವಾ ರಚನಾತ್ಮಕವಾದ ನಿರೂಪಣೆಯಲ್ಲ. ಕವಿಯ ಸಂಕೀರ್ಣ ಅನುಭವದ ಅಭಿವ್ಯಕ್ತಿ"[೭] ಎಂಬುದಾಗಿ ತಿಪ್ಪೇರುದ್ರಸ್ವಾಮಿಯವರು ಹೇಳಿದ್ದಾರೆ.

ಅನುಭವದ ಗಾಢತೆಗೆ ತಕ್ಕಂತೆ ಪ್ರತಿಮೆಯೊಂದರ ಪ್ರಯೋಜನ ಓದುಗನಿಂದ ಓದುಗನಿಗೆ ಭಿನ್ನವಾಗಬಹುದು. ಆದರೆ ಚಿತ್ರಾತ್ಮಕವಾದ ಮಾತು ವಾಸ್ತವವಾಗಿ ಕಣ್ಣೆದುರಿಗಿಲ್ಲದ ದೃಶ್ಯವನ್ನು ನೋಡಿದ ಅಥವಾ ನೋಡಿದಂತೆ ಭಾಸಗೊಳಿಸುವ ಸಂವೇದನೆಗಳನ್ನು ಎಲ್ಲರಲ್ಲೂ ಸೃಷ್ಟಿಸುವುದಂತೂ ಸತ್ಯ. ಅಂತಹ ಸಂವೇದನೆ ಪ್ರತಿಮೆ ಎಂದು ಕರೆಸಿಕೊಳ್ಳುತ್ತದೆ. ಹೀಗೆಂದಾಗ ಪ್ರತಿಮೆ ದೃಶ್ಯಗುಣದಿಂದಲೇ ಕೂಡಿರಬೇಕೆಂದಲ್ಲ. "ದೃಶ್ಯೇಂದ್ರಿಯದ ಸಂವೇದನೆಗಳನ್ನು ಉದ್ದೀಪಿಸುವ ವರ್ಣನೆಗಳಂತೆಯೇ ಶ್ರವಣೇಂದ್ರಿಯ, ಘ್ರಾಣೇಂದ್ರಿಯ, ಸ್ಪರ್ಶೇಂದ್ರಿಯ, ಜಿಹ್ವೇಂದ್ರಿಯಗಳ ಅನುಭವಸ್ಮರಣೆಗಳನ್ನು ಜಾಗರಿಸಬಲ್ಲ ವರ್ಣನೆಗಳೂ ಉಂಟು. ಸ್ಫೋಟವೊಂದರ ಶಬ್ದದ ಕರಾರುವಕ್ಕಾದ ವರ್ಣನೆ ಕಿವಿಯ ಮೂಲಕ ಗ್ರಹಿಕೆಯಾಗಬಹುದು. ಹೂವಿನ ಪರಿಮಳದ ಶಕ್ತಿಯುತವಾದ ಚಿತ್ರಣ ಘ್ರಾಣೇಂದ್ರಿಯಕ್ಕೆ ವಿಷಯವಾಗುತ್ತದೆ. ಹೀಗೆ ಬೇರೆ ಬೇರೆ ಇಂದ್ರಿಯಗಳ ಅನುಭವ ಸ್ಮರಣೆಗಳನ್ನು ಉದ್ದೀಪಿಸುತ್ತಾ ಆ ಮೂಲಕ ಹೊಸ ಸಂವೇದನೆಯೊಂದನ್ನು ಓದುಗನಿಗೆ ದಾಟಿಸುವ ಇಂದ್ರಿಯ ದೀಪಕವಾದ ಯಾವುದೇ ಚಿತ್ರಣ ಪ್ರತಿಮೆಯೆನಿಸಿಕೊಳ್ಳುತ್ತದೆ. ಆದ್ದರಿಂದ ಪ್ರತಿಮೆ ಎಂದರೆ ನಿರ್ದಿಷ್ಟ ವಸ್ತುಗಳನ್ನೂ ಅವುಗಳ ಗುಣಗಳನ್ನೂ ಸೃಜನಾತ್ಮಕವಾಗಿ ಹಿಡಿಯಬಲ್ಲ, ವಾಸ್ತವ ಅನುಭವಕ್ಕೆ ಸದೃಶವೆನ್ನಿಸುವ, ಕಲ್ಪಿತ ಇಂದ್ರಿಯಾನುಭವಗಳನ್ನು ನಮ್ಮ ಮನಸ್ಸಿನಲ್ಲಿ ಉಕ್ಕಿಸಬಲ್ಲ ಪದ ಅಥವಾ ಪದ ಸಮೂಹವಾಗಿರುತ್ತದೆ".[೮]

ಡಾ. ತಿಪ್ಪೇರುದ್ರಸ್ವಾಮಿಯವರು ಕಾವ್ಯ ಪ್ರತಿಮೆಯ ಕುರಿತು, 'ಕಾವ್ಯ ಪ್ರತಿಮೆ'ಯನ್ನು ಒಂದು ಶಬ್ದಚಿತ್ರ ಎಂದು ಕರೆಯಬಹುದು. ಒಂದು ವಿಶೇಷಣ, ಒಂದು ರೂಪಕ ಅಥವಾ ಒಂದು ಉಪಮಾನ. ಇಂತಹ ಕಾವ್ಯ ಪ್ರತಿಮೆಯನ್ನು ಸೃಷ್ಟಿಸಬಹುದು ಅಥವಾ ಕೇವಲ ವರ್ಣನಾತ್ಮಕ ನಿರೂಪಣೆಯೂ ಕೆಲವು

[illegible]

ವೇಳೆ ವಾಸ್ತವ ವರದಿಗಿಂತ ಬೇರೆಯಾಗಿ ಒಂದು ಶಬ್ದ ಚಿತ್ರವನ್ನು ನಿರ್ಮಿಸುವುದರ ಮೂಲಕ ಪ್ರತಿಮೆಯಾಗಬಹುದು ಎಂಬುದಾಗಿ ಹೇಳಿದ್ದಾರೆ.[೧೦]

"ಉಪಮೆ-ರೂಪಕಗಳು ಅತ್ಯಂತ ಪ್ರಭಾವಶಾಲಿಯಾಗಿ ಅಭಿವ್ಯಕ್ತಗೊಂಡು ಕೇವಲ ಸಾದೃಶ್ಯಗಳೊಂದಿಗೆ ಕಡೆಯಾಗದೇ ಅದರ ಆಚೆಗಿನ ಅರ್ಥವನ್ನು ವ್ಯಾಪಕವಾಗಿ ಓದುಗನ ಮನಸ್ಸಿನಲ್ಲಿ ಮೂಡಿಸಿ, ಆ ಸಂದರ್ಭಕ್ಕೆ ವಿಶೇಷವಾದ ಶಬ್ದಚಿತ್ರವನ್ನು ಮನಸ್ಸಿನಲ್ಲಿ ಮೂಡಿಸಲು ಶಕ್ತವಾಗುವ ಎಷ್ಟು ಸಾಧ್ಯವೋ ಅಷ್ಟು ಕನಿಷ್ಠ ಶಬ್ದಗಳಿಂದ 'ಬಿಗಿ' ರಚನೆಯನ್ನು 'ಪ್ರತಿಮೆ'ಗಳೆಂದು ವಿವರಿಸಬಹುದು"೧೧ ಎಂಬುದಾಗಿ ಎ.ವಿ. ಪ್ರಸನ್ನರು ಹೇಳಿದ್ದಾರೆ. 'ಇಮೇಜ್' ಅಥವಾ 'ಪ್ರತಿಮೆ' ಎನ್ನುವುದು ಕಾವ್ಯಾಭಿವ್ಯಕ್ತಿಯ ಮೂಲ ತತ್ವ. ಕಾವ್ಯಾಭಿವ್ಯಕ್ತಿಯ ಒಂದು ವಿಶಿಷ್ಟ ವಿಧಾನವಾಗಿದೆ. ಕವಿ 'ಇಮೇಜ್'ಗಳ ಮೂಲಕ ತನ್ನನ್ನು ತಾನು ಅಭಿವ್ಯಕ್ತಿಪಡಿಸಿಕೊಳ್ಳುತ್ತಾನೆ. ಅನೇಕ ಇಮೇಜ್‌ಗಳು ಸೇರಿ ಒಂದು ಕವಿತೆಯಾಗುತ್ತದೆ. ಒಂದು ಇಡೀ ಕಾವ್ಯವೇ ಒಂದು ಇಮೇಜ್ ಆಗಬಹುದು ಇತ್ಯಾದಿ ಮಾತುಗಳೆಲ್ಲಾ ಹೊಸತು.[೧೨]

'ಪ್ರತಿಮೆ' ಎಂಬುದು ಆಂಗ್ಲರ 'image'ಗೆ ಸಂವಾದಿಯಾಗಿ ಬಂದ ಪದ. "ಕನ್ನಡಕ್ಕೆ ಆಂಗ್ಲ ಸಾಹಿತ್ಯದ ಪ್ರಭಾವದಿಂದ ಪ್ರತಿಮಾ ವಿಧಾನವು ಬಳಕೆಗೆ ಬಂತು ಎಂಬ ಅಭಿಪ್ರಾಯವಿದೆಯಾದರೂ ಈ ಮಾತು ಒಪ್ಪತಕ್ಕದ್ದಲ್ಲ. ಯಾಕೆಂದರೆ ನಮ್ಮ ಪ್ರಾಚೀನ ಕಾವ್ಯಗಳಲ್ಲಿ ವೇದೋಪನಿಷತ್ತುಗಳಲ್ಲಿ ಸಾಕಷ್ಟು ಪ್ರತಿಮೆಗಳನ್ನು ಕಾಣಬಹುದು. ಉದಾಹರಣೆಗಾಗಿ ಅಥರ್ವವೇದದ ಉಪವೇದವಾದ ಆಯುರ್ವೇದ ವೈದ್ಯಕೀಯ ಶಾಸ್ತ್ರದ ಆಕರ ಗ್ರಂಥವಾದ ಸುಶ್ರುತ ಸಂಹಿತೆಯ ಈ ಶ್ಲೋಕವನ್ನು ಗಮನಿಸಬಹುದು.

ಯಥಾ ಖರಶ್ಚಂದನ ಭಾರವಾಹೀ ಭಾರಸ್ಯವೇತ್ತಾ ನ ತು ಚಂದನಸ್ಯ
ಏವಂ ಹಿ ಶಾಸ್ತ್ರಾಣಿ ಬಹೂನ್ಯಧೀತ್ಯ ಚಾರ್ಥೇಷು ಮೂಢಾಃ ಖರವದ್ವಹಂತಿ ॥

(ಸುಶ್ರುತ ಸಂಹಿತೆ, ನಾಲ್ಕನೇ ಅಧ್ಯಾಯ)

ಶ್ರೀಗಂಧದ ಹೊರೆಯನ್ನು ಹೊತ್ತಿರುವ ಕತ್ತೆಗೆ ಶ್ರೀಗಂಧವು ಕೇವಲ ಭಾರವಾದ ವಸ್ತುವೆಂಬುದು ಮಾತ್ರ ಗೊತ್ತೇ ಹೊರತು ಪರಿಮಳವುಳ್ಳದ್ದೆಂಬ ಜ್ಞಾನವೇ ಇರುವುದಿಲ್ಲ. ಹೀಗೆಯೇ ಕೆಲವರು ಅನೇಕ ಶಾಸ್ತ್ರಗಳನ್ನು ಬಹಳ ಪರಿಶ್ರಮದಿಂದ ಅಭ್ಯಾಸ ಮಾಡಿ ಅರ್ಥಜ್ಞಾನವಿಲ್ಲದೆ ಕಷ್ಟಪಡುತ್ತಾರೆ".[೧೩]

ಇದಕ್ಕೆ ಪೂರಕವಾಗಿ ಮಂಡಕೋಪನಿಷತ್ತಿನ ಒಂದು ಸೂಕ್ತವನ್ನು ಉದಾಹರಣೆಯಾಗಿ ಗಮನಿಸಬಹುದು. ಡಾ.ಜಿ.ಯಸ್. ಶಿವರುದ್ರಪ್ಪನವರು ಆ ಸೂಕ್ತವನ್ನು ಹೀಗೆ ಅನುವಾದಿಸಿದ್ದಾರೆ.

ಸುಂದರ ಗರಿಗಳ ಹಕ್ಕಿಗಳೆರಡಿವೆ

ಒಂದೇ ಮರದಲ್ಲಿ

ಒಂದು ತಿನ್ನುವುದು ಹಣ್ಣುಗಳ, ಮ

ತ್ತೊಂದಿದೆ ತಿನ್ನದೆ ಮೌನದಲಿ ೧

ಇದೊಂದು ಮಾನವನ ಜೀವನವನ್ನು ಕುರಿತಾದ ಚಿತ್ರಮೇಲ್ನೋಟಕ್ಕೆ ಹಕ್ಕಿಗಳ ಚಿತ್ರ ಕಂಡರೂ ಇಲ್ಲಿರುವ ಮರ ಸಂಸಾರ ವೃಕ್ಷ ಜೀವಾತ್ಮ ಮತ್ತು ಪರಮಾತ್ಮ ಇಲ್ಲಿರುವ ಎರಡು ಹಕ್ಕಿಗಳು ಹಣ್ಣನ್ನು ತಿನ್ನುವ ಹಕ್ಕಿಯು ಜೀವಾತ್ಮವಾದರೆ, ಹಣ್ಣನ್ನು ತಿನ್ನದೆ ಸಾಕ್ಷೀಭೂತವಾಗಿರುವುದು ಪರಮಾತ್ಮ ಎಂದು ವ್ಯಾಖ್ಯಾನಿಸಲಾಗಿದೆ. ಈ ಮೇಲಿನ ಉದಾಹರಣೆಯನ್ನು ನಾವು 'ಪ್ರತಿಮೆ' ಯಾಗಿ ಗುರುತಿಸಬಹುದು. "ವೇದೋಪನಿಷತ್ತುಗಳಲ್ಲಿ ಇಂಥ ಎಷ್ಟೋ ಉಕ್ತಿಗಳಿವೆ. ವಾಸ್ತವದ ನಿಸರ್ಗದ ವಿವಿಧ ವ್ಯಾಪಾರಗಳಿಗೆ ಹೀಗೆ ಪ್ರತೀಕಗಳನ್ನು ಕಲ್ಪಿಸಿ ಹಾಡಿದ ಎಷ್ಟೋ ಗೀತೆಗಳಿವೆ. ಇಂದ್ರನು ತನ್ನ ರಥದಲ್ಲಿ ಕುಳಿತು ವಜ್ರಾಯುಧದಿಂದ ಬೆಟ್ಟದ ರೆಕ್ಕೆಗಳನ್ನು ಕತ್ತರಿಸುತ್ತಾನೆ ಎಂಬ ವರ್ಣನೆ, ವಾಸ್ತವವಾಗಿ ಮಳೆಗಾಲದ ಆಕಾಶದಲ್ಲಿ ಬೆಟ್ಟದಂತೆ ತೇಲುವ ಮೋಡಗಳನ್ನು, ಗುಡುಗು ಸಿಡಿಲುಗಳ ಅಬ್ಬರದಿಂದ ಆ ಮೋಡಗಳೇ ಮಳೆಯಾಗಿ ಕೆಳಗೆ ಸುರಿಯುವ ಕ್ರಿಯೆಯನ್ನು ಹೇಳುವ ಒಂದು ಉಕ್ತಿ ವಿಧಾನವಾಗಿದೆ. ನೀರಿನ ಭಾರದಿಂದ ಜೋಲುತ್ತಾ ಗಗನದಲ್ಲಿ ತೇಲುವ ಮೇಘಗಳನ್ನು ಕೊಡಗೆಚ್ಚಲ ಭಾರದಿಂದ, ಕೊಟ್ಟಿಗೆಗೆ ಧಾವಿಸುವ ಇಂದ್ರನ ಗೋವುಗಳೆಂದು ವರ್ಣಿಸಲಾಗಿದೆ. ನಮ್ಮ ಭರತೀಯ ಕಾವ್ಯ ಪರಂಪರೆ ಇಂಥ ಅನೇಕ ಪ್ರತೀಕ ಹಾಗೂ ಪ್ರತಿಮೆಗಳನ್ನು ಸಮೃದ್ಧವಾಗಿ ಸೃಷ್ಟಿಸಿದೆ"[೧೫]. ಹೀಗೆ ಪ್ರತಿಮೆಗಳು ಪುರಾಣದಲ್ಲಿ ವೇದೋಪನಿಷತ್ತುಗಳಲ್ಲಿ ಹೇರಳವಾಗಿ ಕಂಡುಬರುತ್ತವೆ. ಆದ್ದರಿಂದ ಪ್ರತಿಮೆ ಆಂಗ್ಲ ಸಾಹಿತ್ಯದಿಂದ ಬಂತೆನ್ನುವುದು ಅಷ್ಟು ಸಮಂಜಸವಾಗಲಾರದು.[೧೬]

'ಪ್ರತಿಮೆ' ಎಂದರೆ ಒಂದು ಶಬ್ದ ಚಿತ್ರ. ಪ್ರಾಚೀನ ಜನಪದ ಸಾಹಿತ್ಯದಲ್ಲಿ ಒಗಟುಗಳು ಅಥವಾ ಜಾಣ್ಮೆಯ ಉಕ್ತಿಗಳನ್ನು ಗುರುತಿಸಬಹುದು. "ನಮ್ಮ ಪ್ರಾಚೀನ 'ಪ್ರತಿಮೆ'ಯು ಕವಿಯ ಒಂದು ಚಮತ್ಕಾರ ಎಂದರೆ ತಪ್ಪಲ್ಲ. ಆದರೆ ಚಮತ್ಕಾರ, ಉಕ್ತಿ ವೈಚಿತ್ರ್ಯಗಳೆಲ್ಲ ಪ್ರತಿಮೆಗಳಾಗಲಾರವು. ಉದಾಹರಣೆಗೆ, ಕುಮಾರವ್ಯಾಸನ ಗದುಗಿನ ಭಾರತದ ಈ ಪದ್ಯವನ್ನು ಗಮನಿಸಬಹುದು.

ವೇದಪುರುಷನ ಸುತನ ಸುತನ ಸ

ಹೋದರನ ಹೆಮ್ಮಗನ ಮಗನ ತ

ಳೋದರಿಯ ಮಾತುಳನ ರೂಪನನತುಳ ಭುಜಬಲದಿ

ಕಾದಿಗೆಲಿದನನಣ್ಣನವ್ವೆಯ

ನಾದಿನಿಯ ಜಠರದಲಿ ಜನಿಸಿದ

ನಾದಿಮೂರುತಿ ಸಲಹೊ ಗದುಗಿನ ವೀರನಾರಾಯಣ

ಈ ಪದ್ಯದಲ್ಲಿ ಪದಗಳನ್ನು ಸರಿಯಾಗಿ ಬಿಡಿಸಿ ಅರ್ಥವನ್ನು ಹೇಳಿದರೆ ವೀರನಾರಾಯಣನ ಪರವಾದ ವಿವರಗಳು ವರ್ಣನಾತ್ಮಕವಾಗಿದ್ದು, ಇಲ್ಲಿರುವುದು ಕೇವಲ ಚಮತ್ಕಾರವಾಗಿದೆ. ಇಲ್ಲಿ ರೂಪಕಾತ್ಮಕ ಅಭಿವ್ಯಕ್ತಿ, ಪ್ರತೀಕಗಳು ಇರುವುದಿಲ್ಲ. ಆದ್ದರಿಂದ ಇದು ಪ್ರತಿಮೆಯಾಗಲಾರದು".[೧೭] ವಚನಗಳಲ್ಲಿನ ಪ್ರತೀಕಾತ್ಮಕ ಅಭಿವ್ಯಕ್ತಿಗಳನ್ನು ಡಾ. ಜಿ.ಯಸ್. ಶಿವರುದ್ರಪ್ಪನವರು 'ಬೆಡಗು' ಎಂಬುದಾಗಿ ಗುರುತಿಸಿದ್ದಾರೆ. "ಬೆಡಗು ಎಂದರೆ ಸೌಂದರ್ಯ ಎಂದೇ ಅರ್ಥ. ಬೆಡಗು ಎಂದರೆ ವಿಶೇಷವಾದದ್ದು. ವೈಖರಿಯಿಂದ ಕೂಡಿದ್ದು ಎಂಬ ಅರ್ಥಗಳ ಜೊತೆಗೆ 'ಬೆರಗು', ಆಶ್ಚರ್ಯ ಎಂದೂ ಅರ್ಥವಿದೆ. ಬೆಡಗು ಎಂಬ ಮಾತಿನ ಜತೆಗೆ ಬೆಗಡು ಎಂಬ ಪದವೂ ಇದೆ. ಹಾಗೆಂದರೆ ಚಕಿತಗೊಳಿಸು, ಹೆದರಿಸು ಎಂದು ಅರ್ಥವಾಗುತ್ತದೆ. ಒಟ್ಟಿನಲ್ಲಿ ಈ ಬೆಡಗಿನ ವಚನಗಳಲ್ಲಿ ಓದಿನೊಡನೆ ಆಶ್ಚರ್ಯಗೊಳಿಸುವ ಮತ್ತು ಅದರ ಅಸಂಬದ್ಧತೆಯಿಂದಾಗಿ ಸ್ವಲ್ಪಮಟ್ಟಿಗೆ ಹೆದರಿಸುವ ಅಂಶವೂ ಇದೆ.ಈ ಬಗೆಯ ಬೆಡಗಿನ ರಚನೆಗಳನ್ನು ಬರೆದವರು ಕೇವಲ ವಚನಕಾರರಲ್ಲಿ ಕೆಲವರು ಮಾತ್ರ ಅಲ್ಲ. ವಚನಕಾರ ಅನಂತರದ ಕೀರ್ತನೆ ಪರಂಪರೆಯ ಹರಿದಾಸರಲ್ಲಿಯೂ ಬೆಡಗಿನ ಅಂಶ ಸಾಕಷ್ಟಿದೆ".[೧೮]

ಪ್ರತಿಮೆಯು ಶಬ್ದಗಳ ಸಹಾಯದಿಂದ ಕಟ್ಟಿದ ಒಂದು ಚಿತ್ರ. ರೂಪಕ, ಗುಣನಾಮ ಇವು ಪ್ರತಿಮೆಗಳನ್ನು ಸೃಷ್ಟಿಸಬಲ್ಲವು. ನಮ್ಮ ಕಲ್ಪನೆಗೆ ಚಾಲನೆ ಕೊಡುವಂತಹ ಧ್ವನಿಪೂರ್ಣವಾಗಿರುವ ಯಾವುದೇ ಪದಗುಚ್ಛ ಅಥವಾ ವಾಕ್ಯಸರಣಿಯು ಪ್ರತಿಮೆಯಾಗಬಹುದು. ಆದ್ದರಿಂದ ಪ್ರತಿಯೊಂದು ಕಾವ್ಯ ಪ್ರತಿಮೆಯೂ ಒಂದು ರೀತಿಯಲ್ಲಿ ರೂಪಕಾತ್ಮವಾಗಿರುತ್ತದೆ. "ಒಟ್ಟು ಕವಿಯ ಯೋಗ್ಯತೆಯನ್ನು ಅಳೆಯಬೇಕಾದರೆ, ನಾವು ಅವರ ರೂಪಕಗಳ ಶಕ್ತಿ ಮತ್ತು ಅಂತಃಸತ್ವ ಇವುಗಳನ್ನು ಪರಿಶೀಲಿಸಬೇಕು" ಎಂದು ಹರ್ಬರ್ಟ್‌ರೀಡ್ ಎಂಬ ಆಂಗ್ಲ ಕವಿಯ ಅಭಿಪ್ರಾಯವನ್ನು ಗಮನಿಸಿದಾಗ ಪ್ರತಿಮೆಯ ಮಹತ್ವವನ್ನು ತಿಳಿಯಬಹುದು.

ಹೊಸದರ ಹುಡುಕಾಟ ಮನುಷ್ಯನ ಸಹಜಪ್ರವೃತ್ತಿಗಳಲ್ಲಿ ಒಂದು. ಈ ಹುಡುಕಾಟದಲ್ಲಿ ಕಾವ್ಯವೂ ಹೊರತಾಗಿಲ್ಲ. "ಪ್ರತಿಮೆ ಎಂಬುದು ಮೂಲತಃ ಕವಿ ಮನಸ್ಸಿನ ಸೃಜನೆ ಒಂದು ಮತ್ತೊಂದಕ್ಕೆ ದೂರದಲ್ಲಿರುವ ಮತ್ತು ಯಾವುದೇ ಸಂಬಂಧವಿದೆಯೆಂಬಂತೆ ತೋರದ, ಎರಡು ಅಥವಾ ಹೆಚ್ಚಿನ ವಸ್ತು ಸತ್ಯಗಳ ಹೋಲಿಕೆಯಿಂದ ಸಂಭವಿಸುವುದು ಅಲ್ಲ ಅದು; ಅದರ ಬದಲು, ದೂರ ದೂರದ ಆ ಎರಡು ವಸ್ತುಗಳಿಗಿರುವ ಯಾವುದೇ ಸಾದೃಶ್ಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ, ಅವೆರಡಕ್ಕಿರುವ ಒಳಸಂಬಂಧವನ್ನು ಕವಿಯ ಪ್ರಜ್ಞೆ ಮಾತ್ರ ಗ್ರಹಿಸಿ, ಅವುಗಳನ್ನು ಸಂಘಟಿಸಿದ್ದರಿಂದ ಅದುವರೆಗೂ ಮನೋಗೋಚರವಾಗದಿದ್ದ ಹೊಸತೊಂದು ಹುಟ್ಟಿಕೊಳ್ಳುತ್ತದೆ. ಇದೇ ಪ್ರತಿಮೆ ಹೀಗೆ ಗ್ರಹೀತವಾಗುವ ಪ್ರತಿಮೆ, ಗೊತ್ತಿರುವ ಎರಡು ವಸ್ತುಗಳ ಸಾದೃಶ್ಯವನ್ನು ಮೂಲಮಾನವನ್ನಾಗಿ ಉಳ್ಳ ರೂಪಕದಿಂದ ಭಿನ್ನವಾದುದು. ಪ್ರತಿಮೆ ಒಂದರ ಮೂಲಕ ಮತ್ತೊಂದನ್ನು ತೆರೆಯುವಂಥದ್ದು ಮತ್ತು ಅವೆರಡರ ಸಾಮ್ಯ, ಅಜ್ಞಾತವಾದುದನ್ನು ಜ್ಞಾತವನ್ನಾಗಿ ಮಾಡುತ್ತದೆ. ಮೇಲ್ನೋಟಕ್ಕೆ ಯಾವುದೇ ಸಾದೃಶ್ಯವಿಲ್ಲದಿದ್ದರೂ ಕಾವ್ಯದ ಅಂತರಾಳದ ಸಾದೃಶ್ಯವಿದ್ದರೆ ಅಲ್ಲಿ ಭಾವ ಸಂಚಾರವಾಗಿ ಹೊಸಭಾವ ಜಾಗೃತವಾಗುತ್ತದೆ"[೧೯].

ಕನಕದಾಸರ ಈ ಕೀರ್ತನೆಯಲ್ಲಿ ಎರಡು ವಸ್ತುಗಳ ಆಂತರಿಕ ಸಾಮ್ಯತೆಯನ್ನು ಗುರುತಿಸಬಹುದು.

ಅಡಿಗೆಯನು ಮಾಡಬೇಕಣ್ಣ ನಾನೀಗ ಸುಜ್ಞಾನದ

ಅಡಿಗೆಯನು ಮಾಡಬೇಕಣ್ಣ

ಇಲ್ಲಿ 'ಸುಜ್ಞಾನ' ಪದದೊಂದಿಗೆ 'ಸುಜ್ಞಾನ' ಪದಕ್ಕೆ ಸಂಬಂಧಿಸಿದ ಎಲ್ಲಾ ಬಗೆಯ ಸಂಕೀರ್ಣ ಭಾವನೆಗಳನ್ನು 'ಅಡಿಗೆ' ಪ್ರತಿಮೆಯಲ್ಲಿ ಕಾಣಬಹುದು. 'ಸುಜ್ಞಾನದ ಅಡಿಗೆಯನ್ನು' ಎಂಬ ಪದವು ಇಲ್ಲಿ ವಿಶೇಷ ಅರ್ಥವಂತಿಕೆಯನ್ನು ಪಡೆಯುತ್ತದೆ. ಕವಿ ಪ್ರಜ್ಞೆಯಲ್ಲಿ ಗೋಚರವಾಗುವ ಸತ್ಯಾಂಶ ಇಲ್ಲಿ ಓದುಗರಿಗೆ ನಿಜವೆನಿಸುವಂತೆ ಭಾವತೀವ್ರತೆಯನ್ನು ಪಡೆದಿದೆ. ಇಲ್ಲಿ 'ಅಡಿಗೆ' ವಾಚ್ಯಾರ್ಥವನ್ನು ಬಿಟ್ಟು ಸೂಚಿತವಾಗುವ ವ್ಯಂಗ್ಯಾರ್ಥವೇ ಪ್ರಧಾನವಾಗಿರುವ ಉಕ್ತಿ ವಿಶೇಷ. ವಾಚ್ಯವಾದ ಅರ್ಥವನ್ನು ಬಿಟ್ಟು ಹೀಗೆ ಸೂಚಿತವಾಗುವ ಅರ್ಥಗಳಿಗೆ ವ್ಯಂಗ್ಯಾರ್ಥವೆಂದು ಅಲಂಕಾರಿಕರು ಕರೆದಿದ್ದಾರೆ. ಧ್ವನಿಶಕ್ತಿ ಪಡೆದ ಒಂದು ಪದ, ಒಂದು ರೂಪಕ, ಒಂದು ವಾಕ್ಯ ವಾಕ್ಯಸಮುದಾಯ ಅಥವಾ ಇಡೀ ಕೃತಿಯೇ ಕೆಲವೊಮ್ಮ ಪ್ರತಿಮೆಯಾಗಬಹುದು. ಹೀಗೆ ಪ್ರತಿಮೆಯು ಕೃತಿಯ ಎಲ್ಲಾ ಅಂಶಗಳಿಗೂ ಅನ್ವಯವಾಗಬಹುದು.

ಸಾಹಿತ್ಯದಲ್ಲಿ ಪ್ರತಿಮೆಗಳು ಪ್ರತಿಮಾ ನಿರ್ಮಿತಿಯ ವಿಧಾನಕ್ಕೆ ಪ್ರೇರಕವಾದವು ಸಂಕೇತಗಳು ಒಂದು ವಸ್ತುವಿನ ಅಸ್ತಿತ್ವದ ಸೂಚನೆಯನ್ನು ಮಾತ್ರ ಕೊಟ್ಟರೆ ಪ್ರತೀಕವು ಆ ಘಟನೆ ಅಥವಾ ವಸ್ತುವಿನ ಸ್ವರೂಪವನ್ನು ಸಾಕ್ಷಾತ್ಕರಿಸುತ್ತದೆ. ಒಂದು ಪದವು ಧ್ವನಿಪೂರ್ಣವಾದಾಗ ಉಪಮೆ ಅಥವಾ ರೂಪಕವೂ ಪ್ರತಿಮೆಯಾಗಬಹುದು. ಉಪಮೆಯಲ್ಲಿ ಸಾದೃಶ್ಯ ಸಂಬಂಧಪಟ್ಟರೆ, ರೂಪಕದಲ್ಲಿ ಉಪಮಾನ ಉಪಮೇಯಗಳು ಅಭೇದವಾಗಿದ್ದು ಸಂಕ್ಷಿಪ್ತವಾಗಿ ಪ್ರಧಾನವಾಗಿರುತ್ತದೆ. "ಸಂಕ್ಷಿಪ್ತ ಗುಣ ಸಾಧನೆಯಿಂದ ರೂಪಕ ಒಂದು ವಿಶಿಷ್ಟ ಅಭಿವ್ಯಕ್ತಿ ಪ್ರಕಾರವಾಗುತ್ತದೆ. ಸಾಂಕೇತಿಕತೆಯನ್ನು ಕಂಡುಕೊಳ್ಳದ ಭಾವನೆಗಳಲ್ಲಿ ಸಂಕ್ಷಿಪ್ತತೆ ಸಾಧನೆಯಾಗದೆ ಪರಿಣಾಮ ಅಸ್ತವ್ಯಸ್ತವಾಗುತ್ತದೆ".[೨೦]

'ಪ್ರತಿಮೆ'ಯು ಕೇವಲ ಪ್ರತಿಮೆಗಾಗಿ ಅಲ್ಲ. ಅದು ಕಾವ್ಯದಲ್ಲಿ ಕವಿಯ ಅರಿವಿಗೆ ಬಾರದ ರೀತಿಯಲ್ಲಿ ನಿರ್ಮಾಣಗೊಳ್ಳುವುದರ ಮೂಲಕ ಕವಿಯ ಅಂತರಂಗದ ಭಾವದ ಅಭಿವ್ಯಕ್ತಿಯ ಮಾಧ್ಯಮವಾಗುತ್ತದೆ. ಕನಕದಾಸರಿಗೆ ಅಂತರಂಗದ ಅಭಿವ್ಯಕ್ತಿಯ ಮಾಧ್ಯಮವಾಗಿ ಕೀರ್ತನೆಗಳು ನೆರವಾಗಿವೆ.

ಕೀರ್ತನೆಗಳಲ್ಲಿ ಹೇಳಬೇಕಾದ ವಿಚಾರಗಳನ್ನು ಸುಲಭಗ್ರಾಹ್ಯವಾಗುವಂತೆ ಮನಮಟ್ಟುವಂತೆ ಹೇಳುವಲ್ಲಿ ಪ್ರತಿಮಾ ನಿರ್ಮಿತಿ ಬಹಳಷ್ಟು ಪರಿಣಾಮಕಾರಿಯಾಗಿ ದುಡಿಯುತ್ತವೆ. "ಅಮೂರ್ತ ವಿಚಾರಗಳನ್ನು ಜನಸಾಮಾನ್ಯರಿಗೆ ಅರ್ಥಮಾಡಿಕೊಳ್ಳುವುದು ಕಷ್ಟ. ಉದಾಹರಣೆಗೆ 'ದೇವರು' ಎಂದರೆ ಯಾರು? ದೇವರ ಗುಣಲಕ್ಷಣಗಳೇನು? ಆಕಾರವೇನು? ಇತ್ಯಾದಿ ವಿಚಾರಗಳ ಬಗ್ಗೆ ನಮಗೆ ಅನೇಕ ಸಂದೇಹಗಳು ಏರ್ಪಡುತ್ತವೆ. ದೇವರನ್ನು ಬೇರೆ ಬೇರೆ ಧರ್ಮದವರು ಬೇರೆ ಬೇರೆ ರೀತಿಯಲ್ಲಿ

ನೋಡುತ್ತಾರೆ, ಪೂಜಿಸುತ್ತಾರೆ. ಜನರು ತಮ್ಮ ತಮ್ಮ ಧರ್ಮದ ನೀತಿಗನುಸಾರವಾಗಿ, ಭಾವನೆಗಳಿಗನುಸಾರವಾಗಿ ದೇವರಿಗೊಂದು ಆಕಾರ ಕೊಟ್ಟು ಪೂಜಿಸುತ್ತಾರೆ. ಆಗ ಆ ಶಕ್ತಿ ಒಂದು ಮೂರ್ತರೂಪವನ್ನು ಪಡೆಯುತ್ತದೆ. ದೇವರ ಚಿತ್ರ, ಮಾತುಗಳಲ್ಲಿ ನಾವು ದೇವರನ್ನು ಕಾಣುವ ಪ್ರಯತ್ನವನ್ನು ಮಾಡುತ್ತೇವೆ. ಇಲ್ಲಿ ಅಮೂರ್ತ ವಿಚಾರಗಳಿಗೆ ಮೂರ್ತರೂಪ ಕೊಡುವ ಯತ್ನವಿದೆ".[೨೧] ಕಾವ್ಯದಲ್ಲಿ ಪ್ರತಿಮೆಯ ಅಗತ್ಯವೂ ಇದೇ ಆಗಿರುತ್ತದೆ. ಕಾವ್ಯದ ಅಂತರಾಳದ ಅರ್ಥ ನಮಗಾಗಲು ಪ್ರತಿಮಾ ನಿರ್ಮಿತಿ ಸಹಾಯಕವಾಗುತ್ತದೆ.

ಟಿಪ್ಪಣಿಗಳು:

೧. ಡಾ.ಎನ್.ಯಸ್. ಲಕ್ಷ್ಮೀನಾರಾಯಣ ಭಟ್ಟ, ಕಾವ್ಯ ಪ್ರತಿಮೆ, ಪುಟ ೬.
೨. ಓ.ಎಲ್. ನಾಗಭೂಷಣ ಸ್ವಾಮಿ, ವಿಮರ್ಶೆಯ ಪರಿಭಾಷೆ, ಪುಟ ೨೪೧
೩. ಉಷಾಕಿರಣ್, ಬಸವೇಶ್ವರ ಮತ್ತು ಪ್ರತಿಮಾ ನಿರ್ಮಿತಿ, ಪುಟ ೪೨
೪. ಡಾ. ಎನ್.ಯಸ್. ಲಕ್ಷ್ಮೀನಾರಾಯಣ ಭಟ್ಟ, ಕಾವ್ಯ ಪ್ರತಿಮೆ, ಪುಟ ೨೦.
೫. ಜೀವಿ ಕುಲಕರ್ಣಿ ಮತ್ತು ಎ.ವಿ. ಗೋಕಾಕ, ಕಾವ್ಯದಲ್ಲಿ ಪ್ರತಿಮಾ ಸಂವಿಧಾನ, ಪುಟ ೨೧.
೬. ಡಾ. ಎನ್.ಯಸ್. ಲಕ್ಷ್ಮೀನಾರಾಯಣ ಭಟ್ಟ, ಕಾವ್ಯ ಪ್ರತಿಮೆ, ಪುಟ ೬೮.
೭. ಜೀವಿ ಕುಲಕರ್ಣಿ ಮತ್ತು ಎ.ವಿ. ಗೋಕಾಕ, ಕಾವ್ಯದಲ್ಲಿ ಪ್ರತಿಮಾ ಸಂವಿಧಾನ, ಪುಟ ೯
೮. ಡಾ. ಯಚ್.ತಿಪ್ಪೇರುದ್ರಸ್ವಾಮಿ, ತೌಲನಿಕ ಕಾವ್ಯಮೀಮಾಂಸೆ, ಪುಟ ೧೭೭
೯. ಡಾ. ಎನ್.ಯಸ್. ಲಕ್ಷ್ಮೀನಾರಾಯಣ ಭಟ್ಟ, ಕಾವ್ಯ ಪ್ರತಿಮೆ, ಪುಟ ೬೮
೧೦. ಡಾ. ಯಚ್.ತಿಪ್ಪೇರುದ್ರಸ್ವಾಮಿ, ತೌಲನಿಕ ಕಾವ್ಯಮೀಮಾಂಸೆ, ಪುಟ ೧೮೦
೧೧. ಡಾ. ಎ.ವಿ. ಪ್ರಸನ್ನ, ಕುಮಾರವ್ಯಾಸನ ಕಾವ್ಯಚಿತ್ರಗಳು, ಪುಟ ೫೭೪.
೧೨. ಡಾ. ಜಿ.ಎಸ್. ಶಿವರುದ್ರಪ್ಪ, ಕಾವ್ಯಾರ್ಥ ಚಿಂತನ, ಪುಟ ೧೦೦.
೧೩. ಪ್ರವೀಣ ಪಿ, ಪುರಂದರದಾಸರ ಪ್ರತಿಮಾ ಜಗತ್ತು, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ., ಪುಟ ೫, ೬
೧೪. ಡಾ. ಜಿ.ಯಸ್. ಶಿವರುದ್ರಪ್ಪ, ಕನ್ನಡದಲ್ಲಿ ಬೆಡಗು, ಪುಟ ೧೧೦.
೧೫. ಡಾ. ಜಿ.ಯಸ್. ಶಿವರುದ್ರಪ್ಪ, ಕನ್ನಡದಲ್ಲಿ ಬೆಡಗು, ಪುಟ ೧೧೦.
೧೬. ಪ್ರವೀಣ ಪಿ, ಪುರಂದರದಾಸರ ಪ್ರತಿಮಾ ಜಗತ್ತು, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ., ಪುಟ ೭
೧೭. ಪ್ರವೀಣ ಪಿ, ಪುರಂದರದಾಸರ ಪ್ರತಿಮಾ ಜಗತ್ತು, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ, ಪುಟ ೭
೧೮. ಡಾ. ಜಿ.ಯಸ್. ಶಿವರುದ್ರಪ್ಪ, ಕನ್ನಡದಲ್ಲಿ ಬೆಡಗು, ಪುಟ ೧೧೦.
೧೯. ಡಾ. ಜಿ.ಯಸ್. ಶಿವರುದ್ರಪ್ಪ, ಕಾವ್ಯಾರ್ಥ ಚಿಂತನ, ಪುಟ ೧೦೬.
೨೦. ಉಷಾಕಿರಣ್, ಬಸವೇಶ್ವರ ಮತ್ತು ಪ್ರತಿಮಾ ನಿರ್ಮಿತಿ, ಪುಟ ೨೮
೨೧. ಪ್ರವೀಣ ಪಿ, ಪುರಂದರದಾಸರ ಪ್ರತಿಮಾ ಜಗತ್ತು, ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ., ಪುಟ ೧೦

ಅಧ್ಯಾಯ ೪

ಪ್ರತಿಮಾಜಗತ್ತು- ಸಾಮಾಜಿಕ ಅಂಶಗಳು

ಅಧ್ಯಾಯ – ೪

ಪ್ರತಿಮಾ ಜಗತ್ತು – ಸಾಮಾಜಿಕ ಅಂಶಗಳು

ಕನಕದಾಸರ ಪಾಂಡಿತ್ಯ, ಪ್ರತಿಮೆಗಳು ಜೀವನಾನುಭವದ ಆಳ ಅಗಾಧವಾಗಿದ್ದು, ಅವುಗಳನ್ನು ನಾವು ಅವರ ಕೀರ್ತನೆಗಳಲ್ಲಿ ಕಾಣಬಹುದು. ಕನಕದಾಸರು ಜನರ, ಸಮಾಜದ ತಿದ್ದುಪಡಿಗೆ, ಅಧ್ಯಾತ್ಮ ಸಾಧನೆಗೆ ಕೀರ್ತನೆಗಳನ್ನು ಮಾಧ್ಯಮವಾಗಿ ಮಾಡಿಕೊಂಡರು. ಜನರಿಗೆ ಅರ್ಥವಾಗುವ ರೀತಿಯಲ್ಲಿ ಜೋಡಿಸಿ ಪೋಣಿಸಿದ ಪದಪುಂಜಗಳು ಅವರ ಕೀರ್ತನೆಯ ಹಾರದ ಮಣಿಗಳಾವೆ. ಈ ಕೀರ್ತನೆಗಳಲ್ಲೆಲ್ಲಾ ಅನೇಕ ಪ್ರತಿಮೆಗಳಿದ್ದು ಅವುಗಳು ವಿವಿಧ ವಸ್ತು–ವಿಷಯಗಳನ್ನು ಒಳಗೊಂಡಿವೆ. ಇವುಗಳನ್ನು ಅಧ್ಯಯನದ ಅನುಕೂಲಕ್ಕೋಸ್ಕರ ಸಾಮಾಜಿಕ ಅಂಶಗಳು ಮತ್ತು ಆಧ್ಯಾತ್ಮಿಕ ಅಂಶಗಳು ಎಂಬುದಾಗಿ ಗುರುತಿಸಲಾಗಿದೆ.[1] ಸಾಮಾಜಿಕ ವಿಚಾರಗಳ ಮೂಲಕ ಅಧ್ಯಾತ್ಮವನ್ನೂ ಅಧ್ಯಾತ್ಮ ಮುಖೇನ ಸಾಮಾಜಿಕ ನಡವಳಿಕೆಯನ್ನೂ ನಿರೂಪಿಸುವುದು ಕನಕದಾಸರ ವಿಶೇಷತೆ. ಕೆಲವೆಡೆ ಸಾಮಾಜಿಕ ಮತ್ತು ಆಧ್ಯಾತ್ಮಿಕ ವಿಚಾರಗಳೆರಡೂ ಕಾಣಿಸುತ್ತವೆ. ಭಕ್ತಿಯು ಸಮಾಜವನ್ನು ತಿದ್ದುವ ಪ್ರಮುಖ ಸಾಧನ ಎಂದು ಕನಕದಾಸರು ನಂಬಿದ್ದರು.

ಅನ್ನ ವಸ್ತ್ರಗಳಿಂದ ಚೆನ್ನಾಗಿ ಬಾಳುವರ
ಭಿನ್ನ ತಂತ್ರವ ಮಾಡಿ ಕೆಡಿಸುತಿಹರು
ಗನ್ನಗತಕವ ಮಾಳ್ಪ ಗ್ರಾಮಣ್ಯಗಳ ಕಲಿತು
ಕುನ್ನಿಗಳು ಹೆಚ್ಚಿದರು ಕ್ರೂರ ಫಣಿಯಂತೆ (ಸಾ.ಕೀ. ೪೯೫)

ಇಲ್ಲಿ ಕುನ್ನಿ ಮಾನವನ ನೀಚತನಕ್ಕೆ ಪ್ರತಿಮೆಯಾಗಿದೆ. ಕ್ರೂರ ಫಣಿ ಮಾನವನ ದ್ವೇಷ ಬುದ್ಧಿಯನ್ನು ಸೂಚಿಸುತ್ತದೆ. ಒಬ್ಬನಿಗೆ ಹೊಟ್ಟೆಗೆ, ಬಟ್ಟೆಗೆ ಬೇಕಾಗುವಷ್ಟು ಚೆನ್ನಾಗಿ ಬದುಕವಂತಿದ್ದರೆ ಅವನ ಬದುಕನ್ನು ಕಂಡು ಮತ್ಸರಿಸಿ ಇನ್ನೊಬ್ಬ ಅವನ ಬದುಕನ್ನು ಹಾನಿಗೊಳಿಸಿ ಸಂತಸಪಡುತ್ತಾನೆ. ನಾಯಿ ಮರಿಗಳಂತೆ ಇರುವ ಜನರು ವಂಚನೆಯನ್ನು ಮಾಡಿ ವಿಷ ಸರ್ಪಗಳ ಹಾಗೆ ಹೆಚ್ಚಿಕೊಂಡಿದ್ದಾರೆ. ಇದು ಕಲಿಯುಗದ ದೌರ್ಭಾಗ್ಯ ಎಂದು ದಾಸರು ಹೇಳಿದ್ದಾರೆ. ಕಲಿಯುಗದ ವಿಶೇಷತೆಯನ್ನು ಕನಕದಾಸರು ಹೇಳುತ್ತಾ ಈ ಯುಗದಲ್ಲಿ ಏನೇನು ಸಂಭವಿಸುತ್ತದೆ ಎಂದು ಹೇಳಿದ್ದಾರೆ.

ಕಡ ಹಾಯಿಸೊ ಕಮಲೋಚನೆ ಎನ್ನ
ತಡಿಯ ಸೇರಿಸೊ ತರಣಿ ಶತಕೋಟಿ ತೇಜ
ಕಾಕು ಇಂದ್ರಿಯಗಳೆಂಬ ಕಟುಕರಿಗೆ ನಾ ಸಿಲುಕಿ

ಮೇಕೆಯಂದದಿ ಬಾಯಿ ಬಿಡುತಿಪ್ಪೆನು
ಸಾಕಾರ ರೂಪ ಸರ್ವೋತ್ತಮನೆ ನೀ ಕರು
ಣಾಕರನೆಂಬ ಪೆಂಪುಂಟಾದಡೀಗೆನ್ನ (ಸಾ.ಕೀ. ೪೯೩)

ಸಂಸಾರ ಸಾಗರದಲ್ಲಿ ದೋಣಿ ಏರಿದ ತನನ್ನು ದಡ ಸೇರಿಸುವಂತೆ ದಾಟಿಸಬೇಕೆಂದು ದಾಸರ ವಿನಂತಿ ಇಲ್ಲಿದೆ. ಕೆಟ್ಟ ಇಂದ್ರಿಯಗಳೆಂಬ ಕಟುಕರಿಗೆ ಸಿಲುಕುವ ಜೀವನ ಮೇಕೆಯ ಹಾಗೆ ಬಾಯಿಬಿಡುತ್ತಾ ಹಂಬಲಿಸುತ್ತಾನೆ. ಇದರಿಂದ ದಾಟಲು ದೇವರ ಅನುಗ್ರಹ ಬೇಕೆಂದು ಕರುಣಾಕರನಾದ ಹರಿಯಲ್ಲಿ ದಾಸರು ಬೇಡುತ್ತಾರೆ.

ಹಲವು ಜನ್ಮದ ಪಾಪವೆನಿಪ ಸೊಕ್ಕಾನೆ ಸೊಂ
ಡಿಲು ಸುತ್ತಿಬಂದು ಸೀವರಿಸುತಿದೆಕೊ
ಮಲೆವ ದುಷ್ಕೃತ್ಯವೆಂಬ ಗಜಕೆ ಕೇಸರಿಯೆಂಬ
ಛಲ ಬಿಡದು ತಾಳ್ದ ದೇವರ ದೇವ ನೀನೆನ್ನ (ಸಾ.ಕೀ. ೪೯೩)

ಜನ್ಮ ಜನ್ಮಾಂತರಗಳಲ್ಲೂ ಬಿಡದೆ ಕಾಡುವ ಜೀವನ ಪಾಪವು ಮನುಷ್ಯನನ್ನು ಹಲವು ಕಷ್ಟಗಳಿಗೆ ಗುರಿ ಮಾಡುತ್ತದೆ. ಗರ್ವ ಪಡುವ ಪಾಪಕೃತ್ಯವೆಂಬ ಆನೆಗೆ ಶತ್ರುವಾದ ಸಿಂಹದಂತೆ ದೇವರೇ ನೀನು ಕಡವನ್ನು ಹಾಯಿಸೆಂದು ಕನಕದಾಸರು ಕೇಳಿಕೊಳ್ಳುತ್ತಾರೆ.

ಬೇಯದಿರುವ ಹಸಿಯ ಬಿಂದಿಗೆ ತೋಯ ಹಿಂಗುವಂತೆ ಸಾಕ್ಷಿ
ಆಯುಷ್ಯವನರಿಯದಿರುವ ಕಾಯ ಸೌಖ್ಯದಿ
ಆಯಾಸಪಟ್ಟು ಗಳಿಸಿದರ್ಥ ಹೇಯವೆನದೆ ಭೋಗಿಸುತ್ತ
ಬಾಯಿಸವಿಯನುಂಡು ಕಡೆಗೆ ನಾಯ ಸಾವು ಸಾಯೊ ಬಾಳಿಗೆ (ಸಾ.ಕೀ. ೪೮೧)

ಹೊಸದಾದ ಮಣ್ಣಿನ ಮಡಕೆಯಲ್ಲಿ ನೀರನ್ನು ಹಾಕಿದರೆ ಅದು ಕೂಡಲೇ ಇಂಗಿ ಹೋಗುತ್ತದೆ. ಅದೇ ತರ ಮನುಷ್ಯನ ಆಯುಷ್ಯ ನಷ್ಟವಾಗುತ್ತಾ ಸಾಗುತ್ತದೆ. ಆಯುಷ್ಯವು ಕರಗಿ ಹೋಗುತ್ತಿರುವುದನ್ನು ತಿಳಿಯದೆ ಮನುಷ್ಯ ಬಹು ವಿಧದಿಂದ ಗಳಿಸಿಕೊಳ್ಳುವುದರಲ್ಲಿ ಆಯುಷ್ಯ ಕಳೆಯುತ್ತಾನೆ. ಇಲ್ಲಿ ನಾಯಿಯ ಪ್ರತಿಮೆಯ ಮೂಲಕ ಮನುಷ್ಯನ ಹೀನ ಸ್ಥಿತಿಯನ್ನು ದಾಸರು ಹೇಳಿದ್ದಾರೆ.

ಮನ್ನಿಸಿ ಗುರುಹಿರಿಯರುಕ್ತಿಯನ್ನು ಕೇಳದೆ ಕಿವುಡುಗೆಟ್ಟು
ಜೊನ್ನೆಯ ತುಪ್ಪ ಅನ್ನ ಒಲ್ಲದೆ ಎಲುವು ಮಾಂಸವನ್ನು ತಿಂದ
ಕುನ್ನಿಯಾದೆನಯ್ಯ ಕೃಷ್ಣ ನಿನ್ನ ಮಾಯದೊಳು ಸಿಲ್ಕಿದ
ಎನ್ನನುದ್ಧರಿಸೊ ಸುಪ್ರಸನ್ನ ಆದಿಕೇಶವರಾಯ (ಸಾ.ಕೀ. ೪೮೧)

ಗುರುಹಿರಿಯರ ಹಿತವಚನವು ಶ್ರೇಯಸ್ಸಿಗೆ ಮಾರ್ಗವನ್ನು ಸೂಚಿಸುತ್ತದೆ. ಹಿತ ನುಡಿಗೆ ಕಿವಿಯನ್ನು ಕಿವುಡಾಗಿಸಿದವನ ಸ್ಥಿತಿ ಶ್ರೇಷ್ಠವಾದ ಜೊನ್ನೆ, ತುಪ್ಪ, ಅನ್ನಗಳನ್ನು ಒಪ್ಪದೆ ಹೀನವಾದ ಎಲುಬು ಮಾಂಸಗಳನ್ನು ತಿನ್ನುವ ನಾಯಿಯಂತೆ ಮಾನವನ ಸ್ಥಿತಿ ಎಂದು ದಾಸರು ಹೇಳುತ್ತಾ ತಾವೂ ಹಿರಿಯರ ಮಾತನ್ನು ಪಾಲಿಸಲಿಲ್ಲವೆಂದು ಪಶ್ಚಾತ್ತಾಪ ಪಡುತ್ತಾರೆ.

ಹೆತ್ತ ತಾಯಿಗಿಂತ ಅತ್ಯಧಿಕ ಮಾಯವುಂಟೆ
ಉತ್ತಮ ಅಶ್ವವ ಕತ್ತೆ ಹೋಲುವುದುಂಟೆ (ಸಾ.ಕೀ. ೫೯)

ಶ್ರೇಷ್ಠ ಕನಿಷ್ಠ ಭೇದಗಳನ್ನು ಇಲ್ಲಿ ದಾಸರು ಪೃಥಕ್ಕರಿಸಿದ್ದಾರೆ. ಹೆತ್ತ ತಾಯಿಗಿಂದ ಅನ್ಯಳೊಬ್ಬಳು ಶ್ರೇಷ್ಠಳಾಗಲು ಸಾಧ್ಯವಿಲ್ಲ. ಕತ್ತೆಯು ಎಷ್ಟು ಚೆನ್ನಾಗಿದ್ದರೂ ಉತ್ತಮ ಅಶ್ವವಾಗಲಾರದು. ಸತ್ಯ, ಧರ್ಮ, ಭಕ್ತಿ ಮೊದಲಾದ ಸದ್ಗುಣಗಳಿಂದ ಯೋಗ್ಯತೆಯು ಒದಗಿ ಬರುತ್ತದೆಯಲ್ಲದೆ ಯೋಗ್ಯತೆ ಸುಮ್ಮನೆ ದೊರಕಲಾರದು. ಇಲ್ಲಿ ಕತ್ತೆ, ಅಶ್ವ, ಪ್ರತಿಮೆಯ ಮೂಲಕ ಶ್ರೇಷ್ಠ ಕನಿಷ್ಠಗಳನ್ನು ದಾಸರು ಹೇಳಿದ್ದಾರೆ.

ಹ್ಯಾಂಗೆ ನೀ ದಾಸನಾದೆ ಹೇ ಪ್ರಾಣಿ
ಹ್ಯಾಂಗೆ ನೀ ದಾಸನಾದೆ
ಹ್ಯಾಂಗೆ ನೀ ದಾಸನಾದೆ ಹೀಂಗೆ ಸಂಸಾರದೊಳು
ಮಂಗನಂತೆ ಭವಭಂಗವ ಪಡುವವನು (ಸಾ.ಕೀ. ೫೮)

ಸಂಸಾರದಲ್ಲಿ ಮಂಗನಂತೆ ಚಂಚಲತೆ, ಚೇಷ್ಟೆ ಮಾಡುವುದು, ಚಿತ್ತಚಾಂಚಲ್ಯಗುಣ, ಅಹಂಕಾರದಿಂದ ಅಲೆಯುವುದು ಇವೆಲ್ಲ ದಾಸರ ಲಕ್ಷಣವಲ್ಲ. ಇಲ್ಲಿ ದಾಸರು ಮನುಷ್ಯನ ಸ್ವಭಾವಗಳನ್ನು ವಿಡಂಬಿಸಿದ್ದಾರೆ.

ತಲೆ ಹುಳಿತ ನಾಯಂತೆ ಹಲವು ಬೀದಿಯ ತಿರುಗಿ
ಗೆಲುವಿನಿಂದಲಿ ಮೂಲ ಮಲವನಳಿಯದೆ (ಸಾ.ಕೀ. ೫೮)

ಬೀದಿನಾಯಿ, ಹುಚ್ಚುನಾಯಿಯಂತೆ ಹಲವು ಬೀದಿಗಳಲ್ಲಿ ತಿರುಗಾಡಿಕೊಂಡು ಸಂಸಾರದಲ್ಲಿ ಕಷ್ಟಪಡುವವನನ್ನು ಹೇಗೆ ದಾಸನಾದೆ ಎಂಬುದಾಗಿ ವಿಡಂಬಿಸಿದ್ದಾರೆ. ಉತ್ತಮ ಗುಣನಡತೆಗಳಿಂದ ದೈವಭಕ್ತನಾಗಿ ಬದುಕಿದರೆ ಅವನು ನಿಜವಾದ ಹರಿದಾಸ. ಹೀಗೆ ಹರಿದಾಸನಾಗಲು ಬೇಕಾಗುವ ಅರ್ಹತೆಗಳೇನು ಎಂಬುದನ್ನು ಈ ಕೀರ್ತನೆಯಲ್ಲಿ ತಿಳಿಸಿದ್ದಾರೆ. ಇಲ್ಲಿ ಸಾಂಸಾರಿಕ ಬದುಕಿನ ತಾಪತ್ರಯಗಳನ್ನು ಹೇಳುತ್ತಾ ಅಂತಹ ತಾಪತ್ರಯಗಳು ಭಕ್ತಿಯ ಹಾದಿಯಲ್ಲಿ ಹೇಗೆ ತೊಡಕುಂಟುಮಾಡುತ್ತವೆ ಎಂಬುದನ್ನು ಹೇಳಿದ್ದಾರೆ.

ಸಹವಾಸವು ವ್ಯಕ್ತಿತ್ವವನ್ನು ರೂಪಿಸುತ್ತದೆ, ಬದಲಾಯಿಸುತ್ತದೆ ಆದ್ದರಿಂದ ಕೇಶವನ ದಯೆಯೊದಗುವ ತನಕ ದಾಸರೊಡನೆ ಒಡನಾಟವನ್ನು ಇರಿಸಿಕೊಳ್ಳಬೇಕು ಎಂದು ದಾಸರು ಈ ಕೀರ್ತನೆಯ ಮೂಲಕ ಹೇಳಿದ್ದಾರೆ.

ಸತ್ಯ ಧರ್ಮಗಳ ನಿತ್ಯವು ಬೋಧಿಸೆ

ತತ್ವದ ಅರ್ಥವ ವಿಚಿತ್ರದಿ ಪೇಳೆ
ಕತ್ತೆಯ ಚಿತ್ತಕೆ ಹತ್ತೀತೆ
ಪುತ್ಥಳಿ ಬೊಂಬೆಯ ಚಿತ್ರದಿ ಬಣ್ಣಿಸಿ
ಮುತ್ತು ಕೊಟ್ಟರೆ ಮಾತನಾಡೀತೆ
ಕತ್ತುರಿ ತಿಲಕವನೊತ್ತಿ ಫಣಿಯೊಳಿಡೆ
ಅರ್ತಿಯ ತೋರದೆ ಇದ್ದೀತೆ (ಸಾ.ಕೀ. ೫೦೪)

ಇಲ್ಲಿ ತೊತ್ತು, ಪುತ್ಥಳಿ ಬೊಂಬೆ, ಮುತ್ತು, ಕತ್ತೆ, ಕಸ್ತೂರಿ ತಿಲಕ ಎಲ್ಲಾ ನಾನಾ ವಿಚಾರಗಳಿಗೆ ಪ್ರತಿಮೆಯಾಗಿ ಬಳಕೆಯಾಗಿವೆ. ಬುದ್ಧಿ, ವಿವೇಚನೆಯಿಲ್ಲದ ಜನರಿಗೆ ಒಳ್ಳೆಯದನ್ನು ಹೇಳಿದರೆ ಹಿಡಿಸಲಾರದು. ತತ್ವಾರ್ಥವನ್ನು ಸರಳಗೊಳಿಸಿ ಹೇಳಿದರೂ ತಿಳಿಯದು. ಪುತ್ಥಳಿಬೊಂಬೆ ಮಾತನಾಡದು. ಇವೆಲ್ಲವೂ ಕೇಶವನ ದಯೆಯಿದ್ದರೆ ಸಾಧ್ಯವೆಂಬ ಅಭಿಪ್ರಾಯ ದಾಸರದು.

ಮಂಗಳ ಮಹಿಮನ ಅಂಘ್ರಿಯ ಕಾಣದ
ಮಂಗಗೆ ಮುಕುತಿಯು ದೊರಕೀತೆ (ಸಾ.ಕೀ. ೫೦೪)

ಮಾನವರ ಮುಕ್ತಿಗಾಗಿ ಮಂಗಳಾತ್ಮಕನಾದ ಹರಿಯ ಪಾದವನ್ನು ಕಾಣಬೇಕು ಎಂದು ದಾಸರು ಹರಿಯ ಶರಣಾಗತಿಯ ಅವಶ್ಯಕತೆಯನ್ನು ಹೇಳಿದ್ದಾರೆ. ಇಲ್ಲಿ ಮಂಗ ಮಾನವನ ಚಂಚಲ ಸ್ವಾಭವಕ್ಕೆ ಸಂಕೇತವಾಗಿದೆ. ಏಕಾಗ್ರತೆಯಿಲ್ಲದೆ ಮಾಡುವ ಯಾವುದೇ ಕೆಲಸ ಯಶಸ್ಸು ಪಡೆಯಲು ಸಾಧ್ಯವಿಲ್ಲ. ಅಂತೆಯೇ ಮಾನವನು ಮುಕ್ತಿಗಾಗಿ ದೇವರ ಪಾದವನ್ನು ಕಾಣದೆ, ದೇವರನ್ನು ತ್ರಿಕರಣ ಪೂರ್ವಕವಾಗಿ ಭಜಿಸದಿದ್ದರೆ ಅದರಿಂದ ಯಾವುದೇ ಫಲವಿಲ್ಲ. ಮಾನವನಿಗೆ ಭವಬಂಧನದಿಂದ ಮುಕ್ತಿ ದೊರಕಬೇಕಿದ್ದರೆ ಏಕಾಗ್ರತೆಯ ಭಕ್ತಿ ಅಗತ್ಯ.

ಏನು ಮಾಡಲಯ್ಯ ಬಯಲಾಸೆ ಬಿಡದು
ಮಾನವ ಮೃಗೇಂದ್ರ ರಾಮಚಂದ್ರ ರಕ್ಷಿಸಯ್ಯ
ಜ್ಯೋತಿರ್ಮಯವಾದ ದೀಪದ ಬೆಳಕಿಗೆ
ಕಾತರಿಸಿ ಬೀಳ್ವ ಪತಂಗದಂದದಲಿ
ಧಾತುಗಳು ಬೆಳ್ಳಿ ಬಂಗಾರದಿಂದ ಮೆರವ
ಧೂರ್ತೆಯಿಂ ನೋಡುವೀ ಚಕ್ಷುರಿಂದ್ರಿಯಕೆ (ಸಾ.ಕೀ. ೪೮೫)

'ಬಯಲಾಸೆ' ಎಂಬುದು ಹುಸಿಯ ಬಗೆಗಿನ ತಿಳಿದೂ ತಿಳಿದೂ ಶಾಶ್ವತವಲ್ಲದುದರ ಬಗೆಗೆ ಇರಿಸಿಕೊಳ್ಳುವ ಆಸೆಯನ್ನು ಸಂಕೇತಿಸುತ್ತದೆ. ಜೀವನಿಗೆ ಎಷ್ಟು ಪ್ರಯತ್ನಿಸಿದರೂ ಅದರಿಂದ ಕಳಚಿಕೊಳ್ಳುವುದು ಸುಲಭ ಸಾಧ್ಯವಲ್ಲ. ದೀಪದ ಬೆಳಕಿನಿಂದ ಆಕರ್ಷಿತವಾಗಿ ಪತಂಗಗಳು ಬಂದು ಅದರ ಬೆಂಕಿಯಲ್ಲಿ ಬೀಳುತ್ತವೆ. ಅದೇ ರೀತಿ ಹೆಂಗಸರು ಆಭರಣಗಳ ಬಗೆಗಿನ ಅತಿ ವಿಮೋಹದಿಂದ ಅವುಗಳನ್ನು ಬಯಸಿ ತೊಟ್ಟು ಮೈಮರೆಯುತ್ತಾರೆ. ಇಂತಹವರನ್ನು ಕಾಣುವುದಕ್ಕೆ ಕಣ್ಣು ಹಂಬಲಿಸುತ್ತದೆ.

ಹೀಗೆ ಬಯಲಾಸೆಯೆಂದರೆ ನಶ್ವರವಾದುದರ ಬಗೆಗಿನ ಆಸೆ, ಸಿಗದುದರ ಬಗೆಗಿನ ಆಸೆ ತೊಲಗುವುದಿಲ್ಲ ಎಂದು ದಾಸರು ಹೇಳಿದ್ದಾರೆ.

ಜನ್ಮ ಸಾರ್ಥಕ್ಯವನ್ನು ಹೊಂದುವುದಕ್ಕೆ ಜನರಿಗೆ ಇರಬಹುದಾದ ಮಾರ್ಗಗಳಾವುವೆಂದು ಕನಕದಾಸರು ಈ ಕೀರ್ತನೆಯಲ್ಲಿ ಹೇಳಿದ್ದಾರೆ–

ಆಯಿತೊ ಹೋಯಿತೊ ಏನಾಯಿತೋ ಈ ದೇಹಕ್ಕೆ
ತಾಯಿ ಯಾರೊ ಇನ್ನು ತಂದೆ ಯಾರೊ
ಮಾಯದೊಳು ಸಿಲುಕಿ ಬಹುಕಾಲದಿಂದ ಶ್ರೀ ರಘು
ರಾಯನೆಂಬ ವಸ್ತುವಿನ ಸ್ಮರಣೆ ಬಿಟ್ಟು ಭವದಿ ಮಮತೆ ಇಟ್ಟು
ನಾಯ ಬಾಯ ಅರಿವೆಯಂತೆ ನಾನಾ ಕೋಟಲೆಯಲ್ಲಿ ಬಿದ್ದು
ಬಾಯಿ ಬಾಯಿ ಬಿಡುತಲಿ ಸಾವುದೇನೊ ನೀ ನೋವುದೇನೊ (ಕ.ಹಾ.೨೦)

ಮಾಯೆ ಎಂಬ ಭ್ರಮೆಗೆ ಒಳಗಾಗಿ ನಾವು ಲೌಕಿಕ ಜೀವನಕ್ಕೆ ಆಸೆಪಟ್ಟು ಕೊನೆಗೆ ಅನೇಕ ಕಷ್ಟಗಳಲ್ಲಿ ಸಿಲುಕಿಕೊಂಡು ನಮ್ಮ ಜೀವನವು ನಾಯಿಯ ಬಾಯಿಯಲ್ಲಿ ಸಿಕ್ಕಿದ ಬಟ್ಟೆಯ ಹಾಗೆ ಚೂರು ಚೂರಾಗಿ ಹೋಗುತ್ತದೆ. ಅದಕ್ಕಾಗಿ ಭಗವಂತನ ಧ್ಯಾನ ಮಾಡಿ ಪುಣ್ಯ ಕಟ್ಟಿಕೊ ಎಂಬುದಾಗಿ ದಾಸರು ಹೇಳಿದ್ದಾರೆ. ಇಲ್ಲಿ ನಾಯಿಯ ಪ್ರತಿಮೆಯ ಮೂಲಕ ಲೌಕಿಕ ಬದುಕಿನ ಸ್ಥಿತಿಗತಿಯನ್ನು ದಾಸರು ಹೇಳಿದ್ದಾರೆ.

ಸಾಕು ಸಾಕು ಮನುಜ ಸೇವೆಯು ರಂಗಯ್ಯ ಇನ್ನು
ಸ್ನಾನ ಮೌನ ನಿತ್ಯ ಸಂಧ್ಯಾ ನೇಮಗಳನೆ ತೊರೆದು
ಹೀನನಾಗಿ ಕೆಟ್ಟ ಜನರ ಮನೆಗಳನ್ನು ತಿರುಗಿ ತಿರುಗಿ
ಶ್ವಾನನಂತೆ ದಿನವ ಕಳೆವೆನೊ ದುರಾಸೆಯನ್ನು
ಮನದಲಿಟ್ಟುಕೊಂಡು ಕುದಿವೆನೊ ಕೊನೆಗೆ ಎಳ್ಳು ಕಾ
ಳಿನಷ್ಟು ಸುಖವ ಕಾಣೆನೋ ರಂಗಯ್ಯ ರಂಗ (ಸಾ.ಕೀ. ೫೮೭)

ಮನುಷ್ಯ ಸೇವೆಯನ್ನು ಮಾಡಿ ದಿನನಿತ್ಯದ ಬದುಕಿನ ಸುಖಕ್ಕಾಗಿ ಹೆಣಗಿ ಯಾವ ಸುಖ ಶಾಂತಿ ನೆಮ್ಮದಿಗಳೂ ಇಲ್ಲದೆ ತನ್ನ ಬಾಳು ವ್ಯರ್ಥವಾಯಿತು ಎಂಬ ಪಶ್ಚಾತ್ತಾಪ ವ್ಯಕ್ತವಾಗಿದೆ. ಸ್ನಾನ, ಸಂಧ್ಯಾವಂದನೆ ಮೊದಲಾದ ವ್ರತಗಳನ್ನು ತೊರೆದು ಹೀನನಾಗಿ ಕೆಟ್ಟ ಜನರ ಮನೆಗಳನ್ನು ನಾಯಿ ತಿರುಗಿದ ರೀತಿಯಲ್ಲಿ ದಿನವನ್ನು ಕಳೆಯುವುದು ದುರಾಸೆಯನ್ನು ಮನದಲ್ಲಿಟ್ಟುಕೊಂಡು ಪರಿತಪಿಸುವುದು ಕೊನೆಗೆ ಎಳ್ಳು ಕಾಳಿನಷ್ಟು ಸುಖವನ್ನು ಜೀವನದಲ್ಲಿ ಕಾಣದೇ ಇರುವಂತಹ ಸ್ಥಿತಿಯಾಗಿದೆ. ಇಲ್ಲಿ ನಾಯಿಯ ಪ್ರತಿಮೆಯ ಮೂಲಕ ಲೌಕಿಕ ಜೀವನವನ್ನು ಹೇಳುತ್ತಾರೆ. ಆಧ್ಯಾತ್ಮಿಕ ಸಾಮಾಜಿಕವೆಂಬ ಭೇದವನ್ನು ಕನಕದಾಸರು ಮಾಡುವುದಿಲ್ಲವೆಂದೇ ಹೇಳಬಹುದು. ಮಾನವನ ಸೇವೆ ಮಾಡುವುದರಿಂದ ಲೌಕಿಕವಾದ ಬದುಕಿನಲ್ಲೂ ಸುಖ ಸಿಗುವುದಿಲ್ಲವೆಂದು ದಾಸರು ಹೇಳುತ್ತಾರೆ. ಅದು ಮನುಷ್ಯ ಬದುಕಿನ ಅಥವಾ ಮನುಷ್ಯರ ನಡವಳಿಕೆಯ ಕುರಿತಾದ ದಾಸರ ನಿಲುವೂ ಆಗಿದೆ. ಆದರೂ ಕನಕದಾಸರ ಅಂತಿಮ ಗುರಿ ಅಧ್ಯಾತ್ಮ ಅಥವಾ ಭಕ್ತಿಯ ಸಾಧನೆಯೇ ಆಗಿದೆ.

ನಾನು ನೀನು ಎನ್ನದಿರೊ ಹೀನ ಮಾನವ
ಜ್ಞಾನದಿಂದ ನಿನ್ನ ನೀನೆ ತಿಳಿದು ನೋಡೆಲೊ ಪ್ರಾಣಿ
ಕಾಲಕರ್ಮ ಶೀಲ ನೇಮ ನಿನ್ನದೇನೆಲೊ
ಜಾಲ ವಿದ್ಯೆ ಬಯಲ ಮಾಯೆ ನಿನ್ನದೇನೆಲೊ
ಕೀಲು ಜಡಿದ ಮರದ ಬೊಂಬೆ ನಿನ್ನದೇನೆಲೊ
ಲೋಲ ಆದಿಕೇಶವನ ಭಕ್ತನಾಗೆಲೊ (ಸಾ.ಕೀ. ೫೩೨)

ಮಾನವ ನಾನು, ನೀನು ಎಂಬ ಮೋಹದಿಂದ, ಅತಿಯಾದ ಅಭಿಮಾನದಿಂದ ಮೆರೆಯುತ್ತಾನೆ. ಇದು ಸರಿಯಲ್ಲ. ಅದಕ್ಕಾಗಿ ನೀನು ಜ್ಞಾನದಿಂದ ನಿನ್ನನ್ನು ನೀನು ತಿಳಿ. ಅಂತರಂಗದಿಂದ ನಿನ್ನನ್ನು ಸರಿಯಾಗಿ ತಿಳಿದು ನೋಡು ಎಂಬುದಾಗಿ ಹೇಳಿದ್ದಾರೆ. ಕಾಲ, ಕರ್ಮ, ಶೀಲ ಎಲ್ಲವೂ ಅವನದಲ್ಲ. ಹೊನ್ನು, ಹೆಣ್ಣು, ಮಣ್ಣು ಎಲ್ಲ ಅವನದಲ್ಲ. ಮನುಷ್ಯನನ್ನು ಬಿಟ್ಟು ಹೋಗುವ ದೇಹ ಅವನದಲ್ಲ. ಮಾನವ ಕೇವಲ ಕೀಲು ಹಾಕಿದ ತೊಗಲಬೊಂಬೆ. ಇವನು ಭಗವಂತನಿಂದ ಆಡಿಸಲ್ಪಡುವವನು.ಭಗವಂತನೇ ಸೂತ್ರಧಾರ ಆದ್ದರಿಂದ ಅಹಂಕಾರಗಳನ್ನೆಲ್ಲ ತೊರೆದು ಭಗವಂತನ ಸ್ಮರಣೆ ಮಾಡು ಎಂಬುದಾಗಿ ಹೇಳಿದ್ದಾರೆ. 'ಹೀನಮಾನವ', 'ಪ್ರಾಣಿ' ಎಂಬುದಾಗಿ ಮನುಷ್ಯನನ್ನು ಕರೆದಿದ್ದಾರೆ. ಪ್ರಾಣ ಇರುವುದೆಲ್ಲವೂ 'ಪ್ರಾಣಿ'. ಹೀಗಿರುತ್ತ ಮಾನವನು ಇತರ ಜೀವಿಗಳಿಂದ ತಾನು ಶ್ರೇಷ್ಠನೆಂಬ ಭಾವವನ್ನು ಅಭಿಮಾನವನ್ನೂ ಉಳಿಸಿಕೊಂಡಿರುತ್ತಾನಾದರೂ ಅದಕ್ಕೆ ತಕ್ಕಂತೆ ಬದುಕುವ ಯತ್ನವನ್ನು ಮಾಡಲಿಲ್ಲ ಎಂಬ ನಿಜಸ್ಥಿತಿಯನ್ನು ಕಂಡು ಕನಿಕರ ಪಡುತ್ತಾರೆ. ಇಲ್ಲಿ ಮಾನವನು 'ಪ್ರಾಣಿ'ಯಾಗಿದ್ದಾನೆ.

ನಾನಾ ಜನ್ಮದಿ ಬಂದ ನಾಟಕದ ಬೊಂಬೆಯಿದು.
ಮಾನಕ್ಕೆ ಮೆಚ್ಚಿ ನೀ ಮರುಳಾಗದೆ
ಜಾಣತನದಿಂದ ಕಾಗಿನೆಲೆಯಾದಿಕೇಶವನ
ಮಾನಸದಿ ನೆನೆನೆನೆದು ಸುಖಿಯಾಗು ಮನವೆ (ಸಾ.ಕೀ. ೫೪೮)

ಸಂಸಾರ ಎನ್ನುವ ಸುಖಭೋಗಗಳಲ್ಲಿ ಜೀವನವನ್ನು ಹಾಳುಮಾಡಿಕೊಳ್ಳಬಾರದು. ಈ ಶರೀರ ಶಾಶ್ವತವಲ್ಲ. ಅದಕ್ಕಾಗಿ ಭಗವಂತನನ್ನು ಸ್ಮರಿಸಬೇಕು. ಬೀದಿಯಲ್ಲಿರುವ ಕ್ಷುದ್ರ ದೈವಗಳನ್ನು ಪ್ರೀತಿಸಬೇಡ. ಇವು ನಮ್ಮನ್ನು ಕಾಯಬಲ್ಲ ದೈವಗಳಲ್ಲ. ಜೀವನ ಒಂದು ನಾಟಕವಿದ್ದಂತೆ. ಇದೇ ದೇಹ ಒಂದು ಕೀಲುಬೊಂಬೆ. ಭಗವಂತ ಬೊಂಬೆಯನ್ನಾಡಿಸುವ ಸೂತ್ರಧಾರ. ಸ್ವಾರ್ಥಿಗಳು ಬೊಂಬೆಗೂ ಸನ್ಮಾನ ಮಾಡುತ್ತಾರೆ, ಮರುಳಾಗಬೇಡ, ಎಲ್ಲವನ್ನೂ ಭಗವಂತನಿಗೆ ಒಪ್ಪಿಸಿಬಿಡು. ಅಂತರಂಗದಲ್ಲಿ ಭಗವಂತನನ್ನು ನೆನೆದು ಸುಖದಿಂದ ಇರಬೇಕು ಎಂಬುದಾಗಿ ಈ ಕೀರ್ತನೆ ತಿಳಿಸುತ್ತದೆ.

ಎಂದಿದ್ದರೀ ಕೊಂಪೆ ಎನಗೆ ನಂಬಿಕೆಯಿಲ್ಲ.
ಮುಂದರಿತು ಹರಿಪಾದ ಹೊಂದುವುದು ಲೇಸು
ಎಲುವುಗಳು ತೊಲೆ ಜಂತೆ ನರಗಳವು ಬಿಗಿದಂತೆ

ಬಲಿದ ಚರ್ಮವು ಮೇಲು ಹೊದಿಕೆಯಂತೆ
ಗಳಗಳನೆ ನುಡಿವ ನಾಲಗೆ ಗಂಟೆಯುಲಿಯಂತೆ
ಕೆಲಕಾಲಕೇ ಕೊಂಪೆ ಕಡೆಗಾಹುದಂತೆ (ಸಾ.ಕೀ. ೪೭೬)

ಇಲ್ಲಿ ಬಿದ್ದು ಹೋಗುವ ಮಾನವನ ಶರೀರವನ್ನು ಕೊಂಪೆಗೆ ಹೋಲಿಸಲಾಗಿದೆ. ಎಲುಬುಗಳಿಂದ ಕೂಡಿದ ಶರೀರಕ್ಕೆ ಚರ್ಮವು ಮೇಲು ಹೊದಿಕೆಯಂತೆ ಇದೆ. ನಾಲಿಗೆಯಲ್ಲಿ ಬರುವ ಮಾತುಗಳು ಗಂಟೆಯ ಶಬ್ದದಂತೆ. ಕೊನೆಗೆ ಸ್ವಲ್ಪ ಕಾಲದಲ್ಲಿ ಈ ದೇಹ ಅಳಿದುಹೋಗುತ್ತದೆ. ಇಲ್ಲಿ ಕೊಂಪೆ ಪ್ರತಿಮೆಯ ಮೂಲಕ ಮಾನವನ ಅಳಿದು ಹೋಗುವ ದೇಹವನ್ನು ಹೇಳಿದ್ದಾರೆ.

ಕಂಡಿಗಳು ಒಂಬತ್ತು ಕಳಬಂಟರೈವರು
ಅಂಡಲೆವುದೊತ್ತಿನಲಿ ಷಡುವರ್ಗವು
ಮಂಡಲಕೆ ಹೊಸಪರಿಯು ಮನ್ಮಥನ ಠಾಣ್ಯವಿದು
ಮಂಡೆ ಹೋಗುವುದನ್ನು ಅರಿಯದೀ ಕೊಂಪೆ (ಸಾ.ಕೀ. ೪೭೬)

ಇಲ್ಲಿ 'ಕಂಡಿಗಳು ಒಂಬತ್ತು' ಎಂದರೆ ನವರಂಧ್ರಗಳು ಮತ್ತು ದುಷ್ಟರಾದ ಐದು ಜನ ಅಂದರೆ ಪಂಚೇದ್ರಿಯಗಳು ಮತ್ತು ಅರಿಷಡ್ವರ್ಗಗಳು ಪೀಡಿಸುತ್ತಾ ಇರುತ್ತವೆ. ಈ ಪ್ರಪಂಚದಲ್ಲಿ ಜನಿಸಿದ ಮಾನವನ ಶರೀರವು ನವರಂಧ್ರಗಳಿಂದ, ಪಂಚೇಂದ್ರಿಯಗಳಿಂದ ಕೂಡಿವೆ. ಆದರೆ ಅರಿವಿಲ್ಲದೆ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಮುಂತಾದ ಅರಿಷಡ್ವರ್ಗಗಳಿಂದಾಗಿ ಮನುಷ್ಯ ದುಃಖಕ್ಕೆ ಈಡಾಗಬಾರದು. ಕೊನೆಗೆ ಈ ದೇಹವೇ ಅಳಿದು ಹೋಗುತ್ತದೆ. ಆದ್ದರಿಂದ ಭಗವಂತನ ಸ್ಮರಣೆಯಿಂದ ಜೀವನವು ಸುಖಿಯಾಗಿರಲಿ ಎಂಬುಂದಾಗಿ ಹೇಳುತ್ತಾರೆ. ಇಲ್ಲಿ ಬದುಕನ್ನು ಸಾರ್ಥಕಗೊಳಿಸುವ ಬಗೆಯನ್ನು ಕನಕದಾಸರು ಹೇಳುತ್ತಾರೆ.

ನೀಮಾಯೆಯೊಳಗೊ ನಿನ್ನೊಳು ಮಾಯೆಯೊ
ನೀ ದೇಹದೊಳಗೊ ನಿನ್ನೊಳು ದೇಹವೊ ಹರಿಯೆ
ಬಯಲೊಳಗೆ ಆಲಯವೊ ಆಲಯದೊಳಗೆ ಬಯಲೊ
ಬಯಲು ಆಲಯವೆರಡು ನಯನದೊಳಗೊ
ನಯನ ಬುದ್ಧಿಯ ಒಳಗೊ ಬುದ್ಧಿ ನಯನದೊಳಗೊ
ನಯನ ಬುದ್ಧಿಗಳೆರಡು ನಿನ್ನೊಳಗೊ ಹರಿಯೆ (ಸಾ.ಕೀ. ೫೪೬)

ಇಲ್ಲಿ ಬ್ರಹ್ಮಾಂಡ ಮತ್ತು ಪಿಂಡಾಂಡಗಳೆರಡರ ಸ್ವರೂಪವನ್ನು ಕುರಿತು ಹೇಳಲಾಗಿದೆ. ಈ ಸೃಷ್ಟಿಯೆಲ್ಲಾ 'ಮಾಯೆ'. ಇಲ್ಲಿ ಸೃಷ್ಟಿಕರ್ತ ಮಾಯೆಯಲ್ಲಿದ್ದಾನೆಯೋ, ಮಾಯೆ ಸೃಷ್ಟಿಕರ್ತನಲ್ಲಿ ಇದೆಯೋ ಎಂಬ ದ್ವಂದ್ವತೆ ಕಾಡುತ್ತದೆ. ಬಯಲಿನಲ್ಲಿ ಮನೆಯಿದೆ. ಮನೆಯಲ್ಲಿ ಬಯಲೂ ಇದೆ. ಇವೆರಡೂ ಸತ್ಯವಾದದ್ದೇ, ಆದರೆ ಇದಕ್ಕಿಂತಲೂ ಹೆಚ್ಚಾಗಿ ಬಯಲು ಮತ್ತು ಆಲಯ ಎರಡೂ ನೋಡುವ

ಕಣ್ಣಿನಲ್ಲಿದೆ. ಆದರೆ ಕಣ್ಣು ಬುದ್ಧಿಯ ಕೈಯಲ್ಲಿದೆ. ಆ ಬುದ್ಧಿ ಕಣ್ಣಿನಿಂದಲೇ ನೋಡಬೇಕು. ಆದ್ದರಿಂದ ನಯನ ಬುದ್ಧಿಗಳೆರಡೂ ಭಗವಂತನಲ್ಲಿಯೇ ಇದೆ.

ಸವಿಯು ಸಕ್ಕರೆಯೊಳಗೊ ಸಕ್ಕರೆಯು ಸವಿಯೊಳಗೊ
ಸವಿಯು ಸಕ್ಕರೆಯೆರಡು ಜಿಹ್ವೆಯೊಳಗೊ
ಜಿಹ್ವೆ ಮನಸಿನ ಒಳಗೊ ಮನಸ್ಸು ಜಿಹ್ವೆಯ ಒಳಗೊ
ಜಿಹ್ವೆ ಮನಸುಗಳೆರಡು ನಿನ್ನೊಳಗೊ ಹರಿಯೆ (ಸಾ.ಕೀ. ೫೪೬)

ಸವಿಯು ಸಕ್ಕರೆಯೊಳಗಿದೆ. ಸಕ್ಕೆರೆಯು ಸವಿಯ ಒಳಗಿದೆ. ಆದರೆ ಅವರೆಡನ್ನೂ ಗ್ರಹಿಸುವುದು ನಮ್ಮ ನಾಲಿಗೆ. ಹಾಗೆಯೇ ಇರವಿಗೆ ಸಾರ್ಥಕ್ಯ ಅರಿವಿನಿಂದ. ಅರಿವೇ ಇರದಾಗ ವಸ್ತು ಇದ್ದರೂ ಒಂದೇ ಇಲ್ಲದಿದ್ದರೂ ಒಂದೇ. ಹೀಗೆ ಸಕ್ಕರೆ, ಸವಿ ಎರಡೂ ಇದ್ದು ನಾಲಿಗೆ ಇರದಿದ್ದರೆ ಸಕ್ಕರೆಯ ಇರವಿಗೆ ಅರ್ಥವೇ ಇಲ್ಲ.

ಕುಸುಮದಲಿ ಗಂಧವೊ ಗಂಧದಲಿ ಕುಸುಮವೊ
ಕುಸುಮ ಗಂಧಗಳೆರಡು ಆಘ್ರಾಣದೊಳಗೊ
ಅಸಮಭವ ಕಾಗಿನೆಲೆಯಾದಿ ಕೇಶವರಾಯ
ಉಸುರಲೆನ್ನಳವಲ್ಲ ಎಲ್ಲ ನಿನ್ನೊಳಗೊ ಹರಿಯೆ (ಸಾ.ಕೀ. ೫೪೬)

ಕುಸುಮ ಬೇರೆಯಲ್ಲ, ಗಂಧ ಬೇರೆಯಲ್ಲ. ಆದರೂ ಕುಸುಮದಲ್ಲಿ ಗಂಧವಿದೆ. ಆದರೆ ಇವೆರಡು ಇದೆಯೆಂದು ನಮ್ಮ ಮೂಗು ಹೇಳುತ್ತದೆ. ಗಂಧದ ಇರವಿನ ಅರಿವು ಮೂಗಿನಿಂದಲೇ. ಹಾಗಾಗಿ ಗಂಧ ಕುಸುಮಗಳೆರಡು ಆಘ್ರಾಣದಲ್ಲಿವೆ. ಆದರೆ ಎಲ್ಲಾ ಇಂದ್ರಿಯಗಳೂ ಕೆಲಸ ಮಾಡುವುದು ಉಸಿರಿದ್ದಾಗ ಮಾತ್ರ. ಇಲ್ಲಿ ಭಗವಂತನಲ್ಲಿ ಉಸಿರು ಎನ್ನಳವಲ್ಲ ಎಂದು ಹೇಳಿದ್ದಾರೆ. ಇಲ್ಲಿ ಎಲ್ಲವೂ ಒಂದನ್ನೊಂದು ಅವಲಂಬಿಸಿ ಬೆಳೆಯುವಂತಹುದು. ಇಲ್ಲಿ ಅದ್ವೈತ ತತ್ವ ಕಂಡುಬರುತ್ತದೆ. ಇಲ್ಲಿ ಬಯಲು ಆಲಯ ಮೊದಲಾದ ಪ್ರತಿಮೆಗಳ ಮೂಲಕ ಸೃಷ್ಟಿಕರ್ತನ ಸ್ವರೂಪವನ್ನು ಹೇಳಿದ್ದಾರೆ.

ಧರೆಯ ಭೋಗವನ್ನು ನಂಬಿ
ಹರಿಯ ಮುರಿದು ಕೆಡಲು ಬೇಡ
ಧರೆಯ ಭೋಗ ಕನಸಿನಂತೆ ಕೇಳು ಮಾನವ
ತಿರುಕನೋರ್ವನೂರ ಮುಂದೆ
ಮುರುಕು ಧರ್ಮ ಶಾಲೆಯಲ್ಲಿ
ಒರಗಿರುತ್ತಲೊಂದು ಕನಸು ಕಂಡನೆಂತೆನೆ
ಪುರದ ಅರಸು ಸತ್ತನವಗೆ
ವರ ಕುಮಾರರಿಲ್ಲದಿರಲು
ಕರಿಯ ಕೈಲಿ ಕುಸುಮ ಮಾಲೆಯಿತ್ತು ಪುರದೊಳು (ಸಾ.ಕೀ. ೫೨೮)

ಭೂಮಿಯಲ್ಲಿರುವ ಸಕಲ ವಸ್ತುಗಳನ್ನು ಕೂಡ ಮನುಷ್ಯನ ಉಪಭೋಗಕ್ಕೆ ದೊರಕುವುದು ಅವನಿರುವಷ್ಟು ಕಾಲ ದೇಹವು ನಾಶವಾದಾಗ ಜೀವನ ಎಲ್ಲವನ್ನು ಕಳಚಿಕೊಳ್ಳುತ್ತಾನೆ. ಹೀಗಿರಲು ಐಹಿಕ ಭೋಗದ ಚಿಂತೆ, ಆಸಕ್ತಿ ಬಿಟ್ಟು ಹರಿಯನ್ನು ನೆನೆಯಬೇಕು. ಕನಸಿನಲ್ಲಿ ಕಂಡದ್ದು ವಾಸ್ತವದಲ್ಲಿ ಇರುವುದಿಲ್ಲ. ವಾಸ್ತವದಲ್ಲಿ ಸತ್ಯವಾದುದು ಕನಸಿನಲ್ಲಿ ಸುಳ್ಳಾಗಬಲ್ಲುದು. ಹೀಗಿರಲು 'ಸತ್ಯ' ಎಂದರೆ ಪರಮಾತ್ಮ ಮಾತ್ರ. ಆದ್ದರಿಂದ ಹರಿಯನ್ನು ನೆನೆಯಬೇಕು ಎಂಬುದು ದಾಸರ ಅಭಿಮತ.

ಮನುಷ್ಯನು ಕನಸಿನಲ್ಲಿ ಮಾತ್ರವಲ್ಲದೆ ಎಚ್ಚರದಲ್ಲಿ 'ಕನಸು' ಕಾಣುತ್ತಿರುತ್ತಾನೆ. ಉಂಡು ಮಲಗಿದವನು ಹಸಿವಿನಿಂದ ತತ್ತರಿಸುತ್ತಿರುವಂತೆ ಕನಸು ಕಾಣುತ್ತಾನೆ. ಹಸಿವಿನಿಂದ ಒರಗಿರುವವನು ಹೊಟ್ಟೆ ತುಂಬಾ ಉಣ್ಣುವ ಕನಸು ಕಾಣುತ್ತಾನೆ. ಇದು ಕನಸಿನ ವೈರುಧ್ಯ. ಭಿಕ್ಷುಕನಾದರೂ ಕೋಟ್ಯಾಧೀಶನಾಗುವ ಕನಸನ್ನು ಕಾಣುತ್ತಾನೆ. ಅದು ಇಂದಿಗೂ ಪ್ರಸ್ತುತವಾದ ಸಂಗತಿ. ಕನಕದಾಸರು ಇಲ್ಲಿ ತಿರುಕನೊಬ್ಬ ರಾಜನಾಗುವ ಕನಸನ್ನು ಕಂಡುದನ್ನು ಹೇಳುತ್ತಾರೆ. ಮನುಷ್ಯ ತನ್ನ ಅರ್ಹತೆ, ಯೋಗ್ಯತೆಗೆ ಮೀರಿದುದನ್ನು ಬಯಸುತ್ತಾನೆ. ಗಾಳಿ ಗೋಪುರವನ್ನು ಕಟ್ಟತೊಡಗುತ್ತಾನೆ. ಇದನ್ನು ದಾಸರು ಇಲ್ಲಿ ವಿಡಂಬಿಸಿದ್ದಾರೆ. ಧರೆಯ ಭೋಗವನ್ನು ಲೌಕಿಕ ಸುಖವನ್ನು ಮತ್ತು ವಿಷಯ ಸುಖವನ್ನು ಕನಸಿಗೆ ಹೋಲಿಸಿದ್ದಾರೆ. ಇಹದ ಬದುಕಿನ ನಶ್ವರತೆಯ ಬಗ್ಗೆ ಜನರಿಗೆ ತಿಳಿವನ್ನು ಮೂಡಿಸುವುದು ಇಲ್ಲಿ ಕನಕದಾಸರ ಉದ್ದೇಶ.

ಲೋಕದಲ್ಲಿ ಜೀವನ ನಡೆಸುವಾತಗೆ ದುರಿತಗಳು ತಪ್ಪಿದ್ದಲ್ಲ. ಆದರೆ ಅವು ಬಂದಾಗ ಏನು ಮಾಡಬೇಕು ಎಂಬುದನ್ನು ದಾಸರು ಇಲ್ಲಿ ಹೇಳುತ್ತಾರೆ.

ಅಡಿದಾಸನೆಂಬೋ ಎನಗೊಂದು
ದೃಢ ಬುದ್ಧಿಯು ಇಲ್ಲದೆ
ಮಡದಿ ಮಕ್ಕಳೆಂಬ ಕಡಲೊಳು ಮುಳುಗಿದೆ
ಕಡಹಾಯಿಸೊ ಎನ್ನೊಡೆಯ ನೀನಾದಡೆ (ಸಾ.ಕೀ. ೪೯೯)

ಬುದ್ಧಿ ಚಂಚಲವಾಗಿದ್ದವನು ಏನನ್ನು ಸಾಧಿಸಲಾರ. ಅಲ್ಲದೆ ಸಂಸಾರದಲ್ಲಿ ಮುಳುಗಿಹೋದವನು ಹೆಂಡತಿ–ಮಕ್ಕಳೆಂದು ಪರಿಪಾಟ ಪಡುತ್ತಾನೆ. ಇದರಿಂದ ಕಡ ಹಾಯಿಸಲು ದೇವರನ್ನು ಕೋರುವುದನ್ನು ಪ್ರಸ್ತುತ ಕೀರ್ತನೆಯಲ್ಲಿ ಕಾಣಬಹುದಾಗಿದೆ.

ಈ ಕೀರ್ತನೆಯಲ್ಲಿ ಕನಕದಾಸರು ಮಾನವನೊಬ್ಬನ ಬದುಕು ಹೇಗಿರಬೇಕು ಎಂಬುದನ್ನು ಹೇಳಿದ್ದಾರೆ. ಆದರೆ ಅದು ಹೇಳಿಕೆಯಾಗದೆ ಕೇಳುಗನಿಗೆ ಸರಿಯೆಂದು ತೋರಿದರೆ ಮಾತ್ರ ಸ್ವೀಕರಿಸುವಂತೆ ಆಯ್ಕೆಯನ್ನು ನೀಡಿದೆ. ಕನಕದಾಸರ ಸಾಮಾಜಿಕ ಕಳಕಳಿ ಇಲ್ಲಿ ಪ್ರಕಟಗೊಂಡಿದೆ.

ಕರಿಕೆಯಿಲ್ಲದ ಬಾಳು ಕರಿವರದನ ದಯೆ ಕೇಳು

ಅರಿತವರಿರೆ ಮನೆಯೊಳು ಅದು ಸ್ವರ್ಗವು ಕೇಳು
ಕರಣಿಕರೊಳಗಣ ನಂಟು ಕಟ್ಟಿದ ಹಣವಿನ ಗಂಟು
ಗುರುವಿನ ವಾಕ್ಯದ ಭಕ್ತಿ ಇಹ–ಪರಕದು ಮುಕ್ತಿ (ಸಾ.ಕೀ. ೧೩೨)

ಜ್ಞಾನಿಗಳು ತುಂಬಿರುವ ಮನೆ ಸ್ವರ್ಗ ಸಮಾನ, ಶ್ರೀಮಂತರ ನಂಟು ಹೊಂದಿರುವುದರಿಂದ ಸಂಪತ್ತು ಗಳಿಸಬಹುದು ಆದರೆ ಗುರುವಿನ ದಾಸ್ಯದಲ್ಲಿರುವ ಭಕ್ತಿ ಇಹ–ಪರಗಳೆರಡರಲ್ಲೂ ಮುಕ್ತಿಯನ್ನು ನೀಡಬಲ್ಲುದು.

ಕುಲಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರೂ ಬಲ್ಲಿರಾ
ಜಲವೆ ಸಕಲ ಕುಲಕ್ಕೆ ತಾಯಿಯಿಲ್ಲವೆ ಆ
ಜಲದ ಕುಲವನೇನಾದರೂ ಬಲ್ಲಿರಾ
ಜಲದ ಬೊಬ್ಬುಳಿಯಂತೆ ಸ್ಥಿರವಲ್ಲ ಈ ದೇಹ
ನೆಲೆಯರಿತು ನೀ ಹರಿಯ ನೆನೆ ಮನುಜ (ಸಾ.ಕೀ. ೫೦೩)

ಈ ಕೀರ್ತನೆಯಲ್ಲಿ ಕನಕದಾಸರು ವರ್ಗ ಸಂಘರ್ಷ. ಜಾತಿ ಸಂಘರ್ಷದ ಬಗ್ಗೆ ಹೇಳುತ್ತಾರೆ. ನಮ್ಮ ದೇಶವೆಂಬ ದೇಹಕ್ಕೆ ಅರ್ಬುದ ರೋಗವಾಗಿ ಕಾಡುತ್ತಿರುವ ಜಾತಿ ಸಮಸ್ಯೆಯ ಬಗ್ಗೆ ಕನಕದಾಸರು ತಿಳಿಸುತ್ತಾರೆ.

ನೀರು ಗುಳ್ಳೆಯ ರೀತಿ ಮಾನವನ ದೇಹ ನಶ್ವರವಾದದ್ದು. ಎಲ್ಲ ಕುಲಕ್ಕೂ ನೀರು ತಾಯಿ. ನಾವೆಲ್ಲರೂ ಕುಡಿಯುವ ನೀರು ಒಂದೇ. ಈ ನೀರಿನ ಕುಲವನ್ನು ನೋಡಲು ಯಾರೂ ಹೋಗುವುದಿಲ್ಲ. ನಶ್ವರವಾದ ದೇಹವನ್ನು ಹೊತ್ತು ಅಸ್ಪೃಶ್ಯನಂತೆ ವರ್ತಿಸುವುದು. ಕುಲದ ಆಧಾರದ ಮೇಲೆ ವ್ಯವಹಾರ ನಡೆಸುವುದು, ಕನಕದಾಸರ ದೃಷ್ಟಿಗೆ ಅಸಹ್ಯವಾಗಿ ಅಮಾನುಷವಾಗಿ ತೋರುತ್ತದೆ. ಹೀಗೆ ಸಾಮಾಜಿಕ ಅಂಶಗಳ ಬಗ್ಗೆ ಕನಕದಾಸರು ತಿಳಿಸಿದ್ದಾರೆ. ಸರಿಯಾಗಿ ನೆಲೆಯುರಿತು ಮಾನವ ಕುಲವೆಂಬುದನ್ನು ಮರೆಯದಿರು ಎಂಬುದಾಗಿ ಕನಕದಾಸರು ಸಮಾಜದ ಜನರಿಗೆ ಬುದ್ಧಿ ಹೇಳುತ್ತಾರೆ.

ಬೆಟ್ಟದಾ ತುದಿಯಲ್ಲಿ ಹುಟ್ಟಿದ ವೃಕ್ಷಕ್ಕೆ
ಕಟ್ಟೆಯನು ಕಟ್ಟಿ ನೀರೆರೆದವರು ಯಾರೊ
ಪುಟ್ಟಿಸಿದ ಸ್ವಾಮಿ ತಾ ಹೊಣೆಗಾರನಾಗಿರಲು
ಗಟ್ಯಾಗಿ ಸಲಹುವನು ಇದಕೆ ಸಂಶಯವಿಲ್ಲ (ಸಾ.ಕೀ.೫೭೪)

ಬೆಟ್ಟದ ತುದಿಯಲ್ಲಿ ಹುಟ್ಟಿದ ವೃಕ್ಷಕ್ಕೆ ಕಟ್ಟೆಯನು ಕಟ್ಟಿ ನೀರು ಎರೆದವನು ಭಗವಂತನೇ ಹೊರತು ಬೇರೆ ಯಾರೂ ಅಲ್ಲ. ಹುಟ್ಟಿಸಿದ ದೇವನೇ ಹೊಣೆಗಾರನಾಗಿರುತ್ತಾನೆ. ಹಾಗಾಗಿ ಮನಸ್ಸಿಗೆ 'ತಾಳು'ಎಂಬ ಸಮಾಧಾನದ ಮಾತನ್ನು ಹೇಳುತ್ತಾನೆ. 'ತಾಳಿದವನು ಬಾಳಿಯಾನು' ಎಂಬ ಮಾತಿನಂತೆ

ಮನಸ್ಸಿಗೆ ತಾಳ್ಮೆಬೇಕು. ಯಾವ ಆತಂಕ ತಲ್ಲಣಗಳೂ ಬೇಕಾಗಿಲ್ಲ. ಭಗವಂತ ಎಲ್ಲರನ್ನು ಕಾಪಾಡುತ್ತಾನೆ. ಇದರಲ್ಲಿ ಸಂದೇಹವೇ ಇಲ್ಲ ಎಂಬುದಾಗಿ ದಾಸರು ಹೇಳಿದ್ದಾರೆ.

ಮುಟ್ಟಬಾರದವರ ಮನೆ ಪಾಯಸ ಕಜ್ಜಾಯವ
ಅಟ್ಟರೇನು ಅಡದಿದ್ದರೆ ಏನು
ನಿಚ್ಚಣಿಕೆ ದೋಟಿಗೆ ನಿಲುಕದ ಹಣ್ಣಿನ ವೃಕ್ಷ
ನಿಚ್ಚನಿಚ್ಚವು ಬಾಗಿ ಫಲವಾದರೇನು
ಔಚಿತ್ಯ ವಿದ್ಯೆಯನರಿಯದ ದೊರೆ ತಾನು
ಮೆಚ್ಚಿದರೇನು ಮೆಚ್ಚದಿದ್ದರೆ ಏನು (ಸಾ.ಕೀ೫೭೩)

ಅಸ್ಪೃಶ್ಯರ ಮನೆಯ ಪಾಯಸ ಕಜ್ಜಾಯಗಳನ್ನು ಉಣ್ಣುವುದು ನಿಷಿದ್ಧವೆಂದಾದ ಮೇಲೆ ಅಂತಹವರು ಅಡುಗೆ ಮಾಡಿದರೂ ಮಾಡದಿದ್ದರೂ ಅದರಿಂದ ಯಾವುದೇ ಪ್ರಯೋಜನವಿಲ್ಲ.

ಏಣಿಯಿಂದ ಏರಿದರೂ ಎಟಕದ ಕೊಕ್ಕೆಯಿಂದ ಕೊಯ್ಯಲಸಾಧ್ಯವಾದಷ್ಟು ಎತ್ತರದಲ್ಲಿ ಮರವು ಹಣ್ಣು ಬಿಟ್ಟರೆ ಅದರಿಂದ ಯಾರಿಗೂ ಪ್ರಯೋಜನವಿಲ್ಲ. ವಿವೇಕವಿಲ್ಲದ ದೊರೆಯೊಬ್ಬನು ಮೆಚ್ಚಿದರೂ ಅದರಿಂದ ಯಾವ ಪ್ರಯೋಜನವೂ ಇಲ್ಲ. ಇದರಿಂದ ಪರಮಾತ್ಮನ, ಸಜ್ಜನರ ಮೆಚ್ಚುಗೆಯನ್ನು ಪಡೆಯಬೇಕು. ಅನ್ಯರ ಮೆಚ್ಚುಗೆ ನಿಷ್ಪ್ರಯೋಜಕ. ಇದು ಕನಕದಾಸರ ಅಭಿಮತ.

ಹಲವು ದಾಸರ ಮನೆಯ ಹೊಲೆದಾಸನಾನಯ್ಯ
ಕುಲವಿಲ್ಲದ ದಾಸ ಕುರುಬದಾಸ
ಛಲದಿ ನಿನ್ನ ಭಜಿಸುವವರ ಮನೆಯ ಮಾದಿಗದಾಸ
ಸಲೆ ಮುಕ್ತಿ ಪಾಲೆಸೆನ್ನೊಡೆಯ ಆದಿಕೇಶವನೆ (ಸಾ.ಕೀ.೫೧೯)

ಇಲ್ಲಿ ಅಹಂಕಾರ ಖಂಡನೆಯ ಪರಾಕಾಷ್ಠೆಯನ್ನು ಕಾಣಬಹುದು. ಕನಕದಾಸರು ಕುರುಬದಾಸರು. ವಿಷ್ಣುಭಕ್ತಿಯೊಂದಿದ್ದರೆ ತಾನು ಯಾವ ಹೀನಕುಲದವನಾಗಲೂ ಸಿದ್ಧ ಎಂದು ಸಾರಲು ಅವರು ತನ್ನನ್ನು ಹೊಲೆಯದಾಸ, ಮಾದಿಗದಾಸ ಎಂದೆಲ್ಲ ಕರೆದುಕೊಳ್ಳುತ್ತಾರೆ. ತಾನೇನು ಉತ್ತಮ ಕುಲದಲ್ಲಿ ಹುಟ್ಟಿ ಬಂದವನಲ್ಲ. ತಾನೊಬ್ಬ ಕುಲವಿಲ್ಲದ ದಾಸ, 'ಕುರುಬದಾಸ' ಎಂಬುದಾಗಿ ಹೇಳಿದ್ದಾರೆ. ಇಲ್ಲಿ ಭಗವಂತನ ಎದುರು ಭಕ್ತ ಏನೂ ಅಲ್ಲ. ಭಗವಂತನೇ ಶ್ರೇಷ್ಠ ಎಂಬುದಾಗಿ ಹೇಳುತ್ತಾರೆ. ಇಲ್ಲಿ ಕನಕದಾಸರ ಆತ್ಮನಿವೇದನೆ ಕಂಡುಬರುತ್ತದೆ. ತನ್ನ ಭಕ್ತಿ ಏನೂ ಅಲ್ಲ ಎಂಬಂತೆ ಅವರ ಭಾವನೆ ಇರುವುದು ಸರಳತೆ–ಸಜ್ಜನಿಕೆಯ ದ್ಯೋತಕವಾಗಿದೆ. ಇಲ್ಲಿ ದಾಸತ್ವವೇ ಪ್ರತಿಮೆಯಾಗುತ್ತದೆ.

ದೇವರಿಲ್ಲದ ಗುಡಿಯು ಪಾಳು ಬಿದ್ದಂಗಡಿಯು
ಭಾವವಿಲ್ಲದ ಭಕುತಿ ಅದು ಕುಹಕ ಯುಕುತಿ

ಹೇವವಿಲ್ಲದ ಹೆಣ್ಣು ಗಜುಗ ಬೆಳೆದ ಕಣ್ಣು
ಸೇವೆಯರಿದ ಧಣಿಯು ಕಲ್ಲಿನಾ ಖಣಿಯು (ಸಾ.ಕೀ.೪೫೭)

ದೇವರಿಲ್ಲದ ಗುಡಿ ಎಂದರೆ ಅದು ಹಾಳು ಬಿದ್ದ ಅಂಗಡಿಗೆ ಸಮಾನ. ಭಕ್ತಿಯಲ್ಲಿ ಭಾವನೆ ಬೇಕು ಇಲ್ಲದಿದ್ದರೆ ಅದು ವ್ಯರ್ಥ.

ಧರ್ಮವಿಲ್ಲದ ಅರಸು ಮುರಿದ ಕಾಲಿನ ಗೊರಸು
ನಿರ್ಮಲಿಲ್ಲದ ಮನಸು ತಾ ಕೊಳಚೆ ಹೊಲಸು
ಕರ್ಮವಿಲ್ಲದ ಗಂಡು ಕರಿಯ ಒನಕೆಯ ತುಂಡು
ಮರ್ಮವಿಲ್ಲದ ಮಾತು ಒಡಕು ಮಡಕೆಯ ತೂತು (ಸಾ.ಕೀ.೪೫೭)

ಮನಸ್ಸು ಯಾವಾಗಲೂ ಪರಿಶುದ್ಧವಾಗಿರಬೇಕು. ಇಲ್ಲದಿದ್ದರೆ ಅದು ಕೊಳಚೆಗೇರಿಯ ಹೊಲಸಿಗೆ ಸಮಾನ. ಗಂಡು ಆದರೆ ಅವರಿಗೆ ಸರಿಯಾದ ಆಚಾರವಿರಬೇಕು. ಇಲ್ಲದಿದ್ದರೆ ಕರಿಯ ಒನಕೆಯ ತುಂಡಿನಂತೆ ಪ್ರಯೋಜನಕ್ಕೆ ಇಲ್ಲದ್ದು. ಹಾಗೆಯೇ ಮಾತಿನಲ್ಲಿ ಮರ್ಮವಿರಬೇಕು. ಇಲ್ಲದಿದ್ದರೆ ಅದು ತೂತಾದ ಮಡಕೆಯಂತೆ ಅದು ನಿಷ್ಪ್ರಯೋಜಕ.

ಮಕ್ಕಳಿಲ್ಲದ ತಾಯಿ ಕೊಳೆತ ತೆಂಗಿನಕಾಯಿ
ಸೌಖ್ಯವಿಲ್ಲದ ಊಟ ಅದು ಕಾಳಕೂಟ
ಒಕ್ಕಲಿಲ್ಲದ ಊರು ಕೊಳೆತು ನಾರುವ ನೀರು
ಸೊಕ್ಕಿ ನಡೆಯುವ ಭೃತ್ಯ ಅವ ಕ್ರೂರ ಕೃತ್ಯ (ಸಾ.ಕೀ.೪೫೭)

ತಾಯ್ತನ ಪೂರ್ಣವಾಗುವುದು ಮಕ್ಕಳಿದ್ದರೆ. ಆಗ ಹೆಣ್ಣಿನ ಜನ್ಮ ಸಾರ್ಥಕ. ಆದ್ದರಿಂದ ಮಕ್ಕಳಿಲ್ಲದ ತಾಯಿ ಕೊಳೆತ ತೆಂಗಿನಕಾಯಿಯಂತೆ ನಿಷ್ಪ್ರಯೋಜಕ. ಹೀಗೆ ಒಕ್ಕಲಿಲ್ಲದ ಊರು ಅದು ಕೊಳೆತು ನಾರುವ ನೀರಿಗೆ ಸಮಾನ.

ಕಂಡು ಕರೆಯದ ನಂಟ ಮೊನೆಯು ಕೆಟ್ಟಿಹ ಕಂಟ
ಉಂಡು ನಗದಿಹ ಮೋರೆ ಅದು ಕಹಿಯ ಸೋರೆ
ದಂಡಿಗಂಜುವ ಬಂಟ ಒಡಕು ಹರವಿಯ ಕಂಠ
ಗಂಡಗಂಜದ ನಾರಿ ಅವಳೆ ಹೆಮ್ಮಾರಿ (ಸಾ.ಕೀ.೪೫೭)

ಇಲ್ಲಿ ಕನಕದಾಸರು ಸಾಂಸಾರಿಕ ಬದುಕಿನಲ್ಲಿ ಮನುಷ್ಯ ನಡೆಯಬೇಕಾದ ಬಗೆಯನ್ನು ತಿಳಿಸಿದ್ದಾರೆ. ನಂಟನೆಂದು ಕರೆಸಿಕೊಂಡರೆ ನಂಟನಾಗಲಾರ, ಕಂಡೂ ಆತ್ಮೀಯತೆಯಿಂದ ಮಾತಾಡಿ ಮನೆಗೆ ಕರೆದು ಆತಿಥ್ಯ ನೀಡುವುದು ನಂಟನ ಹೊಣೆ. ಅನ್ನ ಹಾಕಿದವನ ಕುರಿತು ಕೃತಜ್ಞತೆಯಿರಬೇಕು.

ಅದನ್ನು ಹೊಂದಿರದವನು ನಿಷ್ಪ್ರಯೋಜಕ ವ್ಯಕ್ತಿ. ಪರಾಕ್ರಮಿಗೆ ಎದೆಗಾರಿಕೆಬೇಕು. ಒಳಗಿನಿಂದ ಧೈರ್ಯ ಇಲ್ಲದವನು ವೀರನಾಗಲಾರ ಎಂದು ಸಮಾಜದ ಜನರ ವ್ಯವಹಾರ ವಿಧಿಯನ್ನಿಲ್ಲಿ ಹೇಳಿದ್ದಾರೆ.

ಬಿಟ್ಟು ನಡೆಯುವ ಗೆಣೆಯು ಹರಕು ತೊಗಲಿನ ಮಿಣೆಯು
ಕೊಟ್ಟು ಕೇಳುವ ದಾತ ಅವ ಹೀನಜಾತ
ಸೃಷ್ಟಿಯೊಳು ಕಾಗಿನೆಲೆಯಾದಿ ಕೇಶವನಂಘ್ರಿ
ಮುಟ್ಟಿ ಭಜಿಸದ ನರನು ಅವನೆ ವಾನರನು (ಸಾ.ಕೀ.೪೫೬)

ದಾನ ಕೊಟ್ಟು ಪುನಃ ಕೇಳುವವ ಅವರು ಹೀನಕುಲದಲ್ಲಿ ಹುಟ್ಟಿದವನಿಗೆ ಸಮಾನ. ಹೀಗೆ ಸೃಷ್ಟಿಸಿದ ಆದಿಕೇಶವನ ಅಂಘ್ರಿಯನ್ನು ಮುಟ್ಟಿ ಭಜಿಸದ ನರನು ವಾನರನಿಗೆ ಸಮಾನ ಎಂದಿದ್ದಾರೆ. ಈ ಕೀರ್ತನೆಯಲ್ಲಿ ಮಾನವನು ಏನು ಮಾಡಬೇಕು. ಏನು ಮಾಡಬಾರದು ಎಂಬುದು ಸ್ಪಷ್ಟವಾಗಿ ನಿರೂಪಿತವಾಗಿದೆ.

ಬಂದೆವಯ್ಯ ಗೋವಿಂದ ಸೆಟ್ಟಿ
ಇಂದು ನಿಮ್ಮ ಹರಿವಾಣ ಪ್ರಸಾದವುಂಟೆನಲಾಗಿ
ಅಪ್ಪವು ಅತಿರಸ ತುಪ್ಪ ಕಜ್ಜಾಯವು
ಒಪ್ಪುವ ಯಾಲಕ್ಕಿ ಶುಂಠಿ ಮೆಣಸು
ಅಪರೂಪವಾದ ಕಜ್ಜಾಯ ರಾಶಿಗಳ
ಛಪ್ಪನ್ನದೇಶಕೆ ಮಾರುವ ಸೆಟ್ಟಿ (ಸಾ.ಕೀ.೫೮೮)

ಇಲ್ಲಿ ಗೋವಿಂದ ಸೆಟ್ಟಿ ಎಂದು ತಿರುಪತಿಯ ವೆಂಕಟರಮಣನನ್ನು ಪರಿಹಾಸ ಮಾಡಿದ್ದಾರೆ. ದೇವರನ್ನು ಛೇಡಿಸುವುದು, ಮೂದಲಿಸುವುದು ಅಂತರಂಗ ಸಾಧಕರಿಗೆ ಮಾತ್ರ ಸಾಧ್ಯ. ಸಲಿಗೆಯ ಸಖ್ಯದಿಂದ ಮಾತ್ರವೆ ಹೀಗೆ ಚುಡಾಯಿಸುವುದು ಸಾಧ್ಯ. ದೇವಾಲಯದ ಮಂದಿ ಮಾಡುವ ಅವ್ಯವಹಾರಗಳನ್ನೆಲ್ಲ ಕನಕದಾಸರು ಶ್ರೀನಿವಾಸನ ಮೇಲೆ ಹೊರಿಸಿ ಹಂಗಿಸುತ್ತಾರೆ.

ಅಪ್ಪ, ಅತಿರಸ, ತುಪ್ಪ, ಹಾಲು, ಯಾಲಕ್ಕಿ, ಕಜ್ಜಾಯ ಮೊದಲಾದವುಗಳನ್ನೆಲ್ಲ ಐವತ್ತಾರು ದೇಶಕ್ಕೆ ಮಾರುವಾಗಲೂ ನೀನು ಸುಮ್ಮನೆ ಕೂತಿದ್ದೀಯ? ಎಂಬುದಾಗಿ ಹೇಳಿದ್ದಾರೆ. ಇದು ನಿಂದಾಸ್ತುತಿಯಾಗಿದೆ. "ಈ ಕೀರ್ತನೆಯ ಬಗೆಗೆ ಒಂದು ಕಥೆ ಪ್ರಚಲಿತವಿದೆ. ದಾಸರು ತಿರುಪತಿಗೆ ಹೋದಾಗ ದೇವಾಲಯದ ಅಧಿಕಾರಿಗಳು ಇವರನ್ನು ಗುರುತಿಸದೆ ಅನಾದರ ಮಾಡಿದರಂತೆ. ಶ್ರೀನಿವಾಸ ಅವರ ದುಡ್ಡು ದೋಚುವ ದಂಧೆಗೆ ಮಾಧ್ಯಮವಾಗಿ ಮರವಟ್ಟು ನಿಂತಿದ್ದ. ಪ್ರಸಾದಕ್ಕೆ ದುಡ್ಡು, ತೀರ್ಥಕ್ಕೆ ದುಡ್ಡು, ಎದ್ದದ್ದಕ್ಕೆ ದುಡ್ಡು, ಕೂತದ್ದಕ್ಕೆ ದುಡ್ಡು. ದೇವಾಲಯದ ಮಂದಿಯ ಈ ವ್ಯಾಪಾರಿ ಬುದ್ಧಿಯನ್ನು

ಕಂಡು ನೊಂದ ದಾಸರು ಆ ತಪ್ಪನ್ನು ಶ್ರೀನಿವಾಸನ ಮೇಲೆ ಹೊರಿಸಿ ವಿನೋದವಾಗಿ ವ್ಯಂಗ್ಯ ನುಡಿಗಳಿಂದ ಅವನನ್ನು ನಗೆಯಾಡಿದರಂತೆ"[೨]

ವ್ಯಾಪಾರಿ ಎಂದ ಮೇಲೆ ಮೋಸ ಇದ್ದೇ ಇದೆ. ಲಾಭವಿಲ್ಲದೆ ಯಾರೂ ವ್ಯಾಪಾರ ಮಾಡುವುದಿಲ್ಲ. ಹೀಗೆ ವ್ಯಾಪಾರ ವೃತ್ತಿಯ ಅಪ್ರಾಮಾಣಿಕತೆಯನ್ನು ಟೀಕಿಸುತ್ತಲೇ ನಿಂದಾಸ್ತುತಿಯ ಮೂಲಕ ಗೋವಿಂದನನ್ನು ಎಚ್ಚರಿಸುತ್ತಾರೆ.

ಹೀಗೆ ಕನಕದಾಸರು ಕೀರ್ತನೆಗಳಲ್ಲಿ ಪ್ರಾಣಿ, ಪಕ್ಷಿ, ವೃಕ್ಷ, ಸಂಸಾರ ಮೊದಲಾದ ಪ್ರತಿಮೆಗಳ ಮೂಲಕ ಸಾಮಾಜಿಕ ಅಂಶಗಳನ್ನು ಪ್ರತಿಬಿಂಬಿಸಿದ್ದಾರೆ; ಅಲ್ಲದೆ ಸಾಮಾಜಿಕ ಚಿಂತನೆ, ಚಿಕಿತ್ಸಕ ಮನೋಭಾವ, ಸಮಾಜದ ಬಗೆಗಿನ ವಿಡಂಬನೆಗಳನ್ನು ಮಾಡಿದ್ದಾರೆ. ಸಾಮಾಜಿಕ ಭೇದ ಭಾವಗಳನ್ನು ಹೋಗಲಾಡಿಸುವ ಪ್ರಯತ್ನವನ್ನು ಮಾಡಿರುವುದು ಅವರ ಕೀರ್ತನೆಗಳ ಪ್ರತಿಮೆಗಳಲ್ಲಿ ಕಂಡುಬರುತ್ತದೆ.

ಟಿಪ್ಪಣಿಗಳು :

೧ . ಸಮಾಜದ ಓರೆಕೋರೆಗಳನ್ನು ತಿದ್ದುವುದು ಅಥವಾ ಸಮಾಜ ವಿಮರ್ಶೆ ಕನಕದಾಸರ ಉದ್ದೇಶವಾಗಿತ್ತು ಎಂಬುದಕ್ಕೆ ಉದಾಹರಣೆಯಾಗಿ ಸಾಕಷ್ಟು ಕೀರ್ತನೆಗಳನ್ನು ಹೆಸರಿಸಬಹುದು. ಉದಾಹರಣೆಗೆ

ಏನು ಇಲ್ಲದ ಎರಡು ದಿನದ ಸಂಸಾರ
ಜ್ಞಾನದಲಿ ದಾನ-ಧರ್ಮವ ಮಾಡಿರಯ್ಯ

ಸಂಸಾರ ಎನ್ನುವುದು ಶಾಶ್ವತವಲ್ಲ. ಅದನ್ನೆಲ್ಲಾ ಅರಿತು ದಾನ-ಧರ್ಮ ಮಾಡಬೇಕು ಎಂಬುದಾಗಿ ದಾಸರು ಹೇಳಿದ್ದಾರೆ.

ಹಸಿದು ಬಂದವರಿಂಗೆ ಅಶನವೀಯಲುಬೇಕು
ಶಿಶುವಿಂಗೆ ಪಾಲ್ಬೆಣ್ಣೆ ನಡೆಸಬೇಕು
ಹಸನಾದ ಭೂಮಿಯನು ಧಾರೆಯೆರೆಯಲುಬೇಕು
ಭಾಷೆ ಕೊಟ್ಟ ಬಳಿಕ ನಿಜವಿರಲುಬೇಕು.

ಹಸಿದು ಬಂದವರಿಗೆ ಅಶನ ಕೊಡಬೇಕು. ದಾನ-ಧರ್ಮ ಮಾಡಬೇಕು. ಭಾಷೆ ಕೊಟ್ಟ ಬಳಿಕ ಸತ್ಯದ ದಾರಿಯಲ್ಲಿ ನಡೆಯಬೇಕು.

ಕಳ್ಳತನಗಳ ಮಾಡಿ ಒಡಲು ಹೊರೆಯಲುಬೇಡ
ತಳ್ಳಿಗಾರನು ಆಗಿ ತಿರುಗಬೇಡ

ಕುಳ್ಳಿರ್ದ ಸಭೆಯೊಳಗೆ ತಿಳಿವ ನಡೆಸಲು ಬೇಡ
ಉಳ್ಳದನು ನಾನೆಂದು ಉಬ್ಬಬೇಡ

ಕಳ್ಳತನ ಮಾಡಿ ಹೊಟ್ಟೆ ಹೊರೆಯಬಾರದು. ಉದ್ಯೋಗ ಮಾಡದೆ ತಿರುಗಾಡಬಾರದು. ಅಹಂಕಾರ ಪ್ರದರ್ಶನ ಮಾಡಬಾರದು. ಸಮಾಜದಲ್ಲಿ ನಾನೇ ದೊಡ್ಡವ ಎಂಬ ಅಹಂಕಾರದಿಂದ ಮೆರೆಯಬಾರದು.

ದೊರೆತನವು ಬಂದಾಗ ಕೆಟ್ಟ ನುಡಿಯಲುಬೇಡ
ಸಿರಿ ಬಂದ ಕಾಲಕ್ಕೆ ಉರಿಯಬೇಡ
ಸಿರಿವಂತ ಶ್ರೀ ಕಾಗಿನೆಲೆಯಾದಿಕೇಶವನ ಚರಣ ಕಮಲವ ಸೇರಿ ಸುಖಿಯಾಗು ಮನುಜಾ

ಅಧಿಕಾರ ಸಿಕ್ಕಿದಾಗ ಈಗಿನ ರಾಜಕಾರಣಿಗಳಂತೆ ಕೆಟ್ಟ ಮಾತಾಡಬಾರದು. ಸಂಪತ್ತು ಇರುವಾಗ ಸೊಕ್ಕು ಇರಬಾರದು. ಹೀಗೆ ಸಂಸಾರದ ನಿಷ್ಪ್ರಯೋಜಕತೆಯನ್ನು ನಿಸ್ಸಾರತೆಯನ್ನು ಇಲ್ಲಿ ಹೇಳಲಾಗಿದೆ. ಸಂಸಾರ ಎನ್ನುವುದು ನಶ್ವರ. ದೇವರಲ್ಲಿ ಭಕ್ತಿಯುಳ್ಳವನಿಗೆ ನಿಜವಾದ ಸುಖ ದೊರೆಯುತ್ತದೆ. ಅದಕ್ಕಾಗಿ ಭಗವಂತನನ್ನು ನೆನೆದು ಸುಖಿಯಾಗು ಎಂದಿದ್ದಾರೆ.

೨. ಬನ್ನಂಜೆ ಗೋವಿಂದಾಚಾರ್ಯ, ಕನಕೋಪನಿಷತ್ತು, ಪುಟ ೧೬೦

ಅಧ್ಯಾಯ ೫

ಕನಕದಾಸರ ಪ್ರತಿಮೆಗಳು– ಆಧ್ಯಾತ್ಮಿಕ ಅಂಶಗಳು

ಅಧ್ಯಾಯ – ೫

ಕನಕದಾಸರ ಕೀರ್ತನೆಗಳಲ್ಲಿ ಪ್ರತಿಮೆಗಳು – ಆಧ್ಯಾತ್ಮಿಕ ಅಂಶಗಳು

ಪುರುಷಾರ್ಥಗಳಲ್ಲಿ ಕೊನೆಯದೆನಿಸಿದ ಮೋಕ್ಷವನ್ನು ಹೊಂದುವುದು ಮನುಷ್ಯನಿಗೆ ಕೊನೆಯ ಲಕ್ಷ್ಯ ಎಂಬುದಾಗಿ ದಾಸಶ್ರೇಷ್ಠರೆಲ್ಲರೂ ನಂಬಿಕೊಂಡಿದ್ದರು. ಈ ಮೋಕ್ಷವನ್ನು ಪಡೆಯುವುದಕ್ಕೆ ಕನಕದಾಸರು ಕಂಡುಕೊಂಡ ಮಾರ್ಗವೇ 'ಭಕ್ತಿ'. ಭಕ್ತಿಯ ಪರವಶತೆಯಲ್ಲಿ ದಾಸರು ದೇವರನ್ನು ನಿರಂತರ ಸ್ಮರಿಸಿದರು, ಹಾಡಿದರು, ಹೊಗಳಿದರು, ಕುಣಿದರು. ಇದರಿಂದ ತಮ್ಮ ಜೀವನ ಸಾರ್ಥಕಗೊಳಿಸಿದರು. ಅಲ್ಲದೆ ಸಮಾಜದ ಓರೆಕೋರೆಗಳನ್ನು ತಿದ್ದಲು ಪ್ರಯತ್ನಿಸಿದರು. ಭಕ್ತಿಯೇ ಪ್ರಧಾನ ಲಕ್ಷ್ಯವಾಗಿ ಅವರಿಂದ ರಚಿತವಾದ ಕೃತಿಗಳೇ ಕೀರ್ತನೆಗಳು. ಆದ್ದರಿಂದ ಕೀರ್ತನೆಗಳಲ್ಲಿ ಭಕ್ತಿಗೆ ಪ್ರಮುಖವಾದ ಸ್ಥಾನವಿದೆ. ಕನಕದಾಸರ ಆಧ್ಯಾತ್ಮಿಕ ಹಂಬಲವನ್ನು ಕೀರ್ತನೆಗಳ ಮೂಲಕ ವ್ಯಕ್ತಪಡಿಸಿದ್ದಾರೆ. ಅಂಥ ಕೀರ್ತನೆಗಳಿಗೆ ಕಲಾತ್ಮಕತೆಯನ್ನು ಮತ್ತು ಕಾವ್ಯಾತ್ಮಕತೆಯನ್ನು ತರಲು ಪ್ರತಿಮೆಗಳನ್ನು ಯಥೇಚ್ಛವಾಗಿ ಬಳಸಿದ್ದಾರೆ.

ನಾವು ಕುರುಬರು ನಮ್ಮ ದೇವರು ಬೀರಯ್ಯ
ಕಾವ ನಮ್ಮಜ್ಜ ನರಕುರಿಯ ಹಿಂಡುಗಳ
ಅಷ್ಟಮದಮತ್ಸರಗಳೆಂಬ ಟಗರುಗಳು
ದೃಷ್ಟಿ ಜೀವಾತ್ಮನೆಂಬೊ ಆಡು
ಸೃಷ್ಟಿ ಪ್ರಸಿದ್ಧವೆಂತೆಂಬುವಾ ಹೋತಗಳು
ಕಟ್ಟಿ ಕೋಲಿನಲಿ ಇರಿಯುತಿರುವ ನಮ್ಮಜ್ಜ **(ಸಾ.ಕೀ. ೫೩೮)**

ಈ ಕೀರ್ತನೆ ತನ್ನ ಕುಲಕಸುಬನ್ನು ಆಧ್ಯಾತ್ಮಿಕ ಸಾಧನೆಯ ನಿರಂತರ ಜಾಗೃತಿಗೆ ಸಂಕೇತವನ್ನಾಗಿ ಪರಿವರ್ತಿಸಿದ ರೀತಿಯಲ್ಲಿ ಕಂಡುಬರುತ್ತದೆ. ಇಲ್ಲಿ ಕುರಿ ಕಾಯುವ ಕಾರ್ಯ ಮಾತ್ರವಲ್ಲ. ನರಕುರಿ ಹಿಂಡುಗಳನ್ನು ಕಾಯುವ ಕಾಯಕ. ಈ ದೇಹದಲ್ಲಿಯೇ ಅನೇಕ ಟಗರುಗಳು, ಆಡುಗಳೂ ಇವೆ.

ವೇದಶಾಸ್ತ್ರ ಪುರಾಣವೆಂತೆಂಬ ಶ್ವಾನಗಳು
ಕಾದಿದ್ದು ನಮ್ಮಜ್ಜನ ಹಿಂಡಿನೊಳಗೆ
ಹಾದಿಗಾಣದೆ ಕೂಗಿ ಬಾಯಾರಿ ಕಾಲ್ಗೆಡಲು
ಆದರಿಸಿ ಅಂಬಲಿಯನೆರೆವ ನಮ್ಮಜ್ಜ **(ಸಾ.ಕೀ. ೫೩೮)**

ಟಗರು, ಹೋತ, ಆಡು ಇತ್ಯಾದಿಗಳನ್ನು ಕಾಯುವುದಕ್ಕೆ ವೇದಶಾಸ್ತ್ರ ಪುರಾಣಾದಿಗಳು ಸಹಾಯವಾಗುತ್ತವೆ. ಕಾವಲಿನಲ್ಲಿ ನಾಯಿಗಳು ನೆರವಾಗುವಂತೆ ಇಲ್ಲಿ ವೇದಶಾಸ್ತ್ರ ಪುರಾಣಗಳು ನೆರವಾಗುತ್ತವೆ.

ಅರುಹೆಂಬ ಮರಿಗಳು ಹಿಂಡಿನೊಳಗೆ ಬರಲು
ಮರವೆಯಲಿ ಯಮನೆಂಬ ತೋಳಹೊಕ್ಕು
ತರುಬಿ ಹಿಂಜಾವದಲಿ ಕುರಿಯ ಮುರಿವುದ ಕಂಡು
ಅರಿತು ಅರಿಯದ ಹಾಗೆ ಇರುವ ನಮ್ಮಜ್ಜ (ಸಾ.ಕೀ. ೫೩೮)

ಕುರಿಹಿಂಡನ್ನು ನುಗ್ಗಿ ಅವುಗಳನ್ನು ನಾಶಗೊಳಿಸುವ ಶತ್ರುಗಳು ಹೆಚ್ಚು. ಮರೆಯದಂತೆ ಅವುಗಳನ್ನು ರಕ್ಷಿಸದಿದ್ದರೆ ಶತ್ರುಗಳ ಬಾಯಿಗೆ ಅವು ತುತ್ತಾಗುತ್ತವೆ. ಕುರಿಗಳು ಸಾಯುವುದು ಸಹಜ. ಆದರೆ ಬದುಕಿರುವಾಗ ಚೆನ್ನಾಗಿರುವಂತೆ ನೋಡಿಕೊಳ್ಳಬೇಕು. ಅವುಗಳಿಗೆ ಅಗತ್ಯವಾದ ಆಹಾರವನ್ನು ಹೊತ್ತುಹೊತ್ತಿಗೆ ಕೊಡಬೇಕು.

ಕಲಿಯುಗಕೆ ಗೌಡನಿವ ಸಂಗಾತಿ ಮಂತ್ರಿಸುತ
ಕಲಿಯುಗಂಗಳನೆಲ್ಲ ಮೊರೆವಾತನೀತ
ಜಲಜಾಕ್ಷಿ ಕಾಗಿನೆಲೆಯಾದಿಕೇಶವನ ಮನ
ವೊಲಿಸಿ ಭಜಿಸದವನು ಹುಚ್ಚು ಕುರುಬ (ಸಾ.ಕೀ. ೫೩೮)

ಕಲಿಯುಗಕ್ಕೆ ಸಂಗಾತಿಯಾಗಿದ್ದ, ಕಲಿಯುಗವನ್ನು ಮೀರಿ ನಿಲ್ಲುವ ಸಾಧನೆಯ ರಹಸ್ಯವನ್ನು ಸಾಂಕೇತಿಕ ನಿರೂಪಣೆ ಪ್ರತಿಬಿಂಬಿಸಿದೆ. ಆದಿಕೇಶವನನ್ನು ಸ್ಮರಿಸದವನು 'ಹುಚ್ಚು ಕುರುಬ' ಎಂಬುದಾಗಿ ದಾಸರು ಕರೆದಿದ್ದಾರೆ.

ಆನೆಯ ನೋಡಿರಯ್ಯ ನೀವೆಲ್ಲರು
ಆನಂದ ಪಡೆಯಿರಯ್ಯ
ತಾನು ತನ್ನವರೆಂಬ ಮಾನವರ ಸಲಹಿದ (ಸಾ.ಕೀ.೧೫೭)

ಇಲ್ಲಿ 'ಆನೆ' ಎಂಬ ಪ್ರತಿಮೆಯ ಮೂಲಕ ಕೃಷ್ಣನ ಮಹಿಮೆಯನ್ನು ಕೊಂಡಾಡಿದ್ದಾರೆ. 'ಆನೆ' ಎಂಬುದು ಶೌರ್ಯಕ್ಕೆ ಸಂಕೇತ. ಹಾಗೆಯೇ ಕೃಷ್ಣನ ಶೌರ್ಯವನ್ನು ಆನೆಗೆ ಹೋಲಿಸಿ ದಾಸರು ಹೇಳಿದ್ದಾರೆ. ಎಲ್ಲರೂ ಆನಂದ ಪಡೆಯಿರಿ. ಎಲ್ಲರನ್ನೂ ಸಲಹಿದಂಥ ಹರಿಯ ಗುಣಗಾನವನ್ನು ಮಾಡಿದ್ದಾರೆ. ಇದೇ ರೀತಿಯ ಇನ್ನೊಂದು ಕೀರ್ತನೆಯಲ್ಲಿ ಕೃಷ್ಣನ ಮಹಿಮೆಯನ್ನು ಬಣ್ಣಿಸಿದ್ದಾರೆ.

ಆನೆ ಬಂದಿದೆ ಇದಿಗೊ ಮದ್ದಾನೆ
ಜ್ಞಾನಿಗಳೊಳಾಡುವ ಮದ್ದಾನೆ (ಸಾ.ಕೀ.೪೫೭)

ಇಲ್ಲಿ 'ಆನೆ' ಪ್ರತಿಮೆಯ ಮೂಲಕ ಕೃಷ್ಣನ ವರ್ಣನೆಯನ್ನು ಮಾಡಲಾಗಿದೆ. ಜ್ಞಾನಿಗಳಲ್ಲಿ ಆಡುವ ಆನೆ ಎಂಬುದಾಗಿ ಹೇಳಿದ್ದಾರೆ. ಇಲ್ಲಿ ಜ್ಞಾನ ಎಂದರೆ ಅಂತರಂಗದ ತಿಳಿವಳಿಕೆ. ಹೀಗೆಯೇ ಇಲ್ಲಿ ಹರಿಯನ್ನು ಅಂತರಂಗದಲ್ಲಿ ನೆನೆಯಬೇಕು ಎಂಬುದಾಗಿ ತಿಳಿಸಿದ್ದಾರೆ. ಶ್ರೀ ಕೃಷ್ಣನ ಶೌರ್ಯವನ್ನು ವರ್ಣಿಸಿದ್ದಾರೆ. ಇಲ್ಲಿಯೂ ಆನೆಯ ಪ್ರತಿಮೆಯ ಮೂಲಕ ಕೃಷ್ಣನ ಶೌರ್ಯವನ್ನು ವರ್ಣಿಸಿದ್ದಾರೆ.

ಗಾಣದೆತ್ತಿನಂತೆ ಕಣ್ಣ ಮುಚ್ಚಿ ಪ್ರದಕ್ಷಿಣೆ ಮಾಡಿ
ಕಾಣದೆ ತಿರುಗುವೆನೆಂದು ಕಣ್ಣಿದ್ದು ನಾನು
ಮಾಣಿಕ್ಯದ ರಾಶಿಯಲ್ಲಿ ಅಂಧಕರೈವರು ಕೂಡಿ
ಆಣಿ ಮುತ್ತು ಹಿಡಿದು ಹಿಡಿದು ಬಿಡುವ ಭ್ರಮಿತ ನಾನಯ್ಯ (ಕ.ಹಾ. ೧೨)

ಇಲ್ಲಿ ಗಾಣದೆತ್ತು ಶ್ರಮದಾಯಕ ದುಡಿಮೆಗೆ ಸಂಕೇತವಾಗಿದೆ. ಗಾಣದೆತ್ತು ಕಣ್ಣು ಮುಚ್ಚಿ ಪ್ರದಕ್ಷಿಣೆ ಮಾಡಿದಂತೆ ಮನುಷ್ಯ ಎರಡು ಕಣ್ಣಿದ್ದೂ ಕಾಣದಂತೆ ವಿವೇಚನೆ ಇಲ್ಲದೆ ಕೆಲಸ ಮಾಡುತ್ತಾನೆ. ಅಜ್ಞಾನದಿಂದ ಕೂಡಿದ ಪಂಚೇಂದ್ರಿಯಗಳನ್ನು ಹೊಂದಿದಾತನು ಒಳ್ಳೆಯದನ್ನು ಶಾಶ್ವತವಾದುದನ್ನು ತಿಳಿಯದೆ ಭ್ರಮಿತನಾಗುತ್ತಾನೆ. ಇಲ್ಲಿ ಕೇವಲ ಅಜ್ಞಾನವೇ ಇಂಥ ನಡೆನುಡಿಗೆ ಕಾರಣ. ಆದ್ದರಿಂದ ಭಗವಂತನನ್ನೇ ಮರೆಹೋಗಬೇಕು. ಭಕ್ತರನ್ನು ದೇವರೇ ಕಾಪಾಡಬೇಕು ಎಂಬುದಾಗಿ ಹೇಳಿದ್ದಾರೆ. ಇಲ್ಲಿ ಆತ್ಮಶೋಧನೆ ಮಾಡಿದ್ದಾರೆ.

ಎಳ್ಳುಕಾಳಿನಷ್ಟು ಭಕುತಿಯೆನ್ನೊಳಗಿಲ್ಲ
ಕಳ್ಳರಿಗೆ ಕಳ್ಳನಂತೆ ಬೆಳ್ಳಕ್ಕಿಯಂದದಿ ಡಂಬ (ಕ.ಹಾ.೧೨)

ಇಲ್ಲಿ ಭಕ್ತಿಯ ಪ್ರಮಾಣವನ್ನು ಎಳ್ಳು ಕಾಳಿನ ಪ್ರತಿಮೆಯಲ್ಲಿ ಹೇಳಿದ್ದಾರೆ. ಸ್ವಲ್ಪವೂ ಭಕ್ತಿಯಿಲ್ಲ. ಬೆಳ್ಳಕ್ಕಿಯ ರೀತಿಯಲ್ಲಿ ಹೊರಗಿನಿಂದ ನೋಡಲು ಸುಂದರ. ಒಳಗಿನಿಂದ ಕುಹಕ. ಒಳಗೊಂದು ಹೊರಗೊಂದು. ಇಂತಹ ನಟನೆಯ ಭಕ್ತರನ್ನು ಇಲ್ಲಿ ವಿಡಂಬಿಸಲಾಗಿದೆ.

ಗುಂಡುಮುಣುಗಿನ ಹಕ್ಕಿಯಂತೆ ಕಂಡ ಕಂಡ ನೀರ ಮುಳುಗಿ
ಮಂಡೆಶೂಲೆ ಬಾಹುದೈಸೆ ಗತಿಯ ಕಾಣೆನೊ
ಮಂಡುಕನಂದದಿ ಕೆರೆಯ ದಂಡೆಯಲ್ಲಿ ಕುಳಿತುಕೊಂಡು
ಮಂಡೆಮುಸುಕನಿಟ್ಟು ಮೂಗ ಹಿಡಿವ ಭ್ರಮಿತ ನಾನಯ್ಯ (ಕ.ಹಾ.೧೨)

ನೀರು ಕಂಡಲ್ಲಿ ಹೋಗಿ ಮುಳುಗಿದರೆ ಶುಚಿಯಾಗುವುದಿಲ್ಲ. ತಲೆನೋವು ಉಂಟಾದೀತು. ಕಪ್ಪೆಯ ಹಾಗೆ ಕೆರೆಯ ದಡದಲ್ಲಿ ಕುಳಿತುಕೊಂಡು ಧ್ಯಾನಕ್ಕೆಂದು ಕುಳಿತು ಭ್ರಮೆಯಿಂದ ಮುಕ್ತನಾಗಲಿಲ್ಲ ಎಂಬಲ್ಲಿ ದಾಸರಿಗೆ ತಮ್ಮ ಭಕ್ತಿಯ ಬಗೆಗೆ ಗೊಂದಲವಿರುವುದು ತಿಳಿಯುತ್ತದೆ. ಇಲ್ಲಿ ಗುಂಡುಮುಣುಗು ಹಕ್ಕಿಯು ಮಾನವನ ಅಂಧಶ್ರದ್ಧೆಗೆ, ಕಪ್ಪೆ ಅಜ್ಞಾನಕ್ಕೆ ಸಂಕೇತವಾಗಿದೆ.

ಥೀ ನಿನ್ನ ಮೋರೆ ಮೇಲೆ ರೊಣ್ಯ
ಥೀ ನಿನ್ನ ಮೋರೆ ಮೇಲೆ
ಮಾನವನ ಜನ್ಮಕೆ ಬಂದು ಪುಣ್ಯ ಮತ್ತೇನೂ ಮಾಡದೆ ಹೋದೆ
ದಾನವಾಂತ ಸತ್ಪಾತ್ರರಿಗೆ ನೀ ದೀನತ್ವವ ಪಡೆದೆ
ಜ್ಞಾನ ಶೂನ್ಯಮದವೇರಿದ ಸೊಕ್ಕಿದ ಕೋಣಕೆ ಹುಟ್ಟಿದ್ದೆ
ದೀನ ರಕ್ಷಕಾದಿಕೇಶವ ವಿಠಲಂಗೆ ನೀನತಿ ದೂರಾದೆ ರೊಣ್ಯ (ಸಾ.ಕೀ.೫೧೦)

ಅನುದಿನವೂ ವ್ಯರ್ಥ ಕರ್ಮಗಳಲ್ಲಿ ಆಯುಷ್ಯವನ್ನು ಕಳೆವವರು ಹಲವಾರು ಮಂದಿ ಸಂಪತ್ತಿನ ಮದ, ಪರಸ್ತ್ರೀಯರ ಮೇಲಿನ ಬಯಕೆ, ದ್ಯೂತ, ಚದುರಂಗದಂತಹ ಆಟಗಳು ಇವೆಲ್ಲವನ್ನು ಸಾಧಿಸಲಾರದೆ ಕಾಲಹರಣ ಮಾಡಲು ಪ್ರೇರಕ. ಇವುಗಳಲ್ಲಿ ತೊಡಗಿಕೊಂಡವನಿಗೆ ರೊಣೆಯಬೇಕೆಂದು ದಾಸರು ಹೇಳಿದ್ದಾರೆ.

ಚಿನ್ಮಯನಾದ ಭಗವಂತನನರಿಯದೆ ಲಿಂಗದ ಪೂಜೆ ಮಾಡುವುದು, ಮುಲ್ಲಾ ಶಾಸ್ತ್ರವನ್ನು ತಿಳಿಯದೆ ಕೂಗುವುದು. ಇವೆಲ್ಲ ವಂಚನೆಯ ಬೇರೆ ಬೇರೆ ರೂಪಗಳು. ಇವು ಯಾವ ಪ್ರಯೋಜನವನ್ನು ಕೊಡಲಾರವಾದುದರಿಂದ ಭಕ್ತಿಯಿಂದ ಕೇಶವನ ಧ್ಯಾನ ಮಾಡಬೇಕೆಂದು ದಾಸರು ಹೇಳುತ್ತಾರೆ.

ಆರಿಗಾರಿಲ್ಲ ಆಪತ್ಕಾಲದೊಳಗೆ
ವಾರಿಜಾಕ್ಷನ ನಾಮ ನೆನೆ ಕಂಡ್ಯ ಮನವೆ
ಪಂಥದಲಿರುವಾಗ ಪದವಿ ತಪ್ಪಿರುವಾಗ
ದಂತಿ ಮದವೇರಿ ಬೆನ್ನತ್ತಿದಾಗ
ಕಂತುಪಿತ ಕಾಗಿನೆಲೆಯಾದಿಕೇಶವ ನಿ
ಶ್ಚಿಂತೆಯಲಿ ನೀನು ನೆನೆ ಕಂಡ್ಯ ಮನವೆ. (ಸಾ.ಕೀ.೪೫೮)

ಕಷ್ಟ ಬಂದಾಗ ಯಾರಿಗೆ ಯಾರೂ ಇಲ್ಲ. ಆದ ಕಾರಣ ಭಗವಂತನನ್ನು ಸ್ಮರಣೆ ಮಾಡಬೇಕು ಎಂಬುದಾಗಿ ಹೇಳಿದ್ದಾರೆ.

ಮನುಷ್ಯನಿಗೆ ದೇವರ ನೆನಪಾಗುವುದೇ ಕಷ್ಟ ಬಂದಾಗ. ನಿಜವಾದ ಆಪ್ತರು ನಿಜವಾದ ಬಂಧುಗಳು ಯಾರೆಂಬುದು ತಿಳಿಯುವುದು. ಇಂತಹ ಸಂದರ್ಭದಲ್ಲಿ ದಾಸರು ಇಂತಹ ಅಪಾಯದ ಸ್ಥಿತಿಯಲ್ಲಿ ಭಗವಂತನ ಆತಂಕ ಇಲ್ಲಿ ಮನುಷ್ಯನಿಗೆ ಆಕಸ್ಮಿಕವಾಗಿ ಒದಗಬಹುದಾದ ದುರಂತಗಳೇನೆಂದೂ ಆಗ ಏನು ಮಾಡಬೇಕೆಂದು ದಾಸರು ಇಲ್ಲಿ ಹೇಳುತ್ತಾರೆ. ಇಲ್ಲಿ ಆನೆಗೆ ಮದಬಂದು ಬೆನ್ನತ್ತಿ ಬಂದ ರೀತಿಯಲ್ಲಿ ಮನುಷ್ಯನಿಗೆ ದುರಂತಗಳು ಎದುರಾಗುತ್ತವೆ ಎಂಬುದಾಗಿ ಹೇಳಿದ್ದಾರೆ.

ಒಡಲಿನಾಸೆಗಾಗಿ ನೊಣವು ತುಡುಕಿ ಬಿದ್ದು ಜೇನಿನೊಳಗೆ
ಮಿಡುಕುವಂತೆ ಬಾಯ ಬಿಡುವೆ ಬಿಸರುಹಾಕ್ಷನೆ
ಬಿಡಿಸೊ ಎನ್ನ ಬಂಧಪಾಶವಾ ಕಾಗಿನೆಲೆಯಾದಿಕೇಶವಾ
ಕೊಡಿಸೊ ನಿನ್ನ ಭಕ್ತರ ಸಂಗವ
ಒಡೆಯ ವೆಂಕಟಾದ್ರಿ ಮಾಧವ ರಂಗಯ್ಯ ರಂಗ (ಸಾ.ಕಿ.೫೮೬)

ಜೇನನ್ನು ತಿನ್ನುವ ಆಸೆಗಾಗಿ ನೊಣವು ಬಿದ್ದು ಒದ್ದಾಡುವಂತೆ ಈ ಸಂಸಾರದಲ್ಲಿಯೂ ಮನುಷ್ಯ ತನ್ನ ಆಸೆಗಾಗಿ ಹಾತೊರೆಯುವುದನ್ನು ಇಲ್ಲಿ ಹೇಳಲಾಗಿದೆ. ಅದಕ್ಕಾಗಿ ಈ ಇಹದ ಬಂಧನವನ್ನು ಬಿಡಿಸಿ ತನಗೆ ಭಕ್ತರ ಸಂಗವನ್ನು ಕರುಣಿಸು, ಭಗವಂತನ ಪಾದಭಜನೆಯನ್ನು ಕರುಣಿಸು ಎಂಬುದಾಗಿ ಈ ಕೀರ್ತನೆಯಲ್ಲಿ ತಿಳಿಸಿದ್ದಾರೆ. ಬದುಕಿನ ಪರಮ ಲಕ್ಷ್ಯವು ಮೋಕ್ಷ ಪ್ರಾಪ್ತಿಯೆಂದು ತಿಳಿಯದ ಜನರ ಜಂಜಡದ ಬಗೆಗೆ ಕನಕದಾಸರಿಗಿರುವ ಅನುಕಂಪವು ಇಲ್ಲಿ ಪ್ರಕಟಗೊಂಡಿದೆ. ಕನಕದಾಸರ ಸಾಮಾಜಿಕ ಕಳಕಳಿಯು ಇಲ್ಲಿ ಕಾಣಿಸುತ್ತದೆ.

ಹುಲಿಯ ಮೀಸೆಯ ಪಾಶವಿಡಿದು ಗೋವತ್ಸಗಳು
ನಲಿದು ಉಯ್ಯಾಲೆಯನಾಡುವವೆ ಹೇಳಾ
ಕಲಿಬಾಡದಾದಿ ಕೇಶವರಾಯ ಚಕ್ರದಲಿ
ತಲೆಗಳನು ಚೆಂಡಾಡಿಸುವ ಕಾಣೊ ಬೇಡ (ಸಾ.ಕೀ.೫೬೪)

ಹುಲಿಯನ್ನು ಕೆರಳಿಸಿ ಗೋವುಗಳು ನಲಿದಾಡಲು ಸಾಧ್ಯವಿಲ್ಲ. ಅದೇ ತೆರನಾಗಿ ಚಕ್ರಿಯಾದ ಆದಿಕೇಶವರಾಯ ತನ್ನ ಚಕ್ರದಿಂದ ತೊಡರುಗಳನ್ನು ತಾನೇ ನಿವಾರಿಸಿಕೊಳ್ಳಬಲ್ಲ. ಆದ್ದರಿಂದ ತಮ್ಮ ತಂಟೆಗೆ ದುರಿತಗಳು ಬರದಿರಲಿ ಎಂದು ಕನಕದಾಸರು ಎಚ್ಚರಿಕೆಯನ್ನಿತ್ತಿದ್ದಾರೆ. ಹರಿಭಕ್ತರು ಎಷ್ಟು ಸುರಕ್ಷಿತರು. ಆತನನ್ನು ಶರಣು ಹೋಗುವುದರ ಪ್ರಯೋಜನವೇನೆಂಬುದನ್ನು ಇಲ್ಲಿ ಕನಕದಾಸರು ಹೇಳಿದ್ದಾರೆ.

ಜೀವನಿಗೆ ಬುದ್ಧಿಗೆ ಮಂಕು ಕವಿದಾಗ ಅವನ ಮನಸ್ಸು ಏನೆಲ್ಲವನ್ನು ಹಂಬಲಿಸುತ್ತದೆ. ಇಂತಹ ಮಂಕು ಜೀವವನ್ನು ಕನಕದಾಸರು ಪ್ರಶ್ನಿಸುತ್ತಾ ಅಧ್ಯಾತ್ಮ ದೃಷ್ಟಿಯಿಂದ ಉತ್ತರವನ್ನು ಕಂಡುಕೊಳ್ಳುತ್ತಾ ಹೋಗುತ್ತಾರೆ.

ಎಂಟೆರಡು ಮಾರುತರು ಎಡೆಯೆಡೆಗೆ ಬರುತಿರಲು
ನಂಟರೈವರು ಕೂಡಿ ಆಕ್ರಮಿಸುತಿಹರು
ದಾಂಟುವುದು ಅಸದಳವೊ ಎರಡೊಂದು ಬಲೆಗಳಲಿ
ಕಂಟಕದಿ ಬಲು ತಾಪದಿಂದ ಬಳಲುವರು (ಕ.ಹಾ.೧೩೬)

ಜೀವನಿಗೆ ಕಾಡುವ ನಾನಾ ಬಗೆಯ ಬಾಧೆಗಳನ್ನು ಕನಕದಾಸರು ಬಾಹ್ಯವಾದ ಭೌತಿಕ ತೊಡಕುಗಳಿಗೆ ಸಮೀಕರಿಸಿ ಹೇಳಿದ್ದಾರೆ. ಅಧ್ಯಾತ್ಮ ಸಾಧನೆಯ ಮಾರ್ಗದಲ್ಲಿ ಬರಬಹುದಾದ ತೊಡಕುಗಳನ್ನು ದಾಸರು ಹೇಳಿದ್ದಾರೆ.

ಆರೆರಡು ದಂತಿಗಳು ದಾರಿಯೊಳು ನಿಂತಿಹವು
ಆರು ಮೂರು ತುರಗಗಳು ದಾರಿಯನು ಕೊಡವು
ಮೂರೆರಡನೀಡಾಡಿ ತೋರುವುದು ಎನ್ನಾಣೆ
ಸಾರಿ ಏನೇನಹುದು ಎಂಬುದನು ನೋಡು (ಕ.ಹಾ.೧೩೭)

ಇಲ್ಲಿ ದಾಸರು ಅಷ್ಟಮದಗಳನ್ನು, ನವರಂಧ್ರಗಳನ್ನು, ಪಂಚೇದ್ರಿಯಗಳನ್ನು ದಂತಿ ತುರಗ ಮುಂತಾಗಿ ಕರೆದಿದ್ದಾರೆ. ದಂತಿ, ತುರಗ ಮುಂತಾದವುಗಳ ಮೂಲಕ ಮನುಷ್ಯನಿಗೆ ಕಾಡುವ ತೊಂದರೆಗಳನ್ನು ಹೇಳಿದ್ದಾರೆ. ಮನುಷ್ಯನ ಸಾಧನೆಗೆ ಆಗುವ ತೊಡಕುಗಳನ್ನು ಹೇಳಿದ್ದಾರೆ.

ಆತ್ಮನ ಮೂಲಸ್ಥಿತಿ ಜೀವ ತಳೆದು ಬಂದ ಮೇಲಿನ ಸ್ಥಿತಿಗಳನ್ನು ಕನಕದಾಸರು ಈ ರೀತಿಯಾಗಿ ಹೇಳುತ್ತಾರೆ.

ಬಸಿರ ಹಳ್ಳಿಗೆ ಬಂದು ಮಾಸನೂರಲಿ ನಿಂದು
ಗುಸುಗಾಡಿ ನುಡಿದು ನೆಲಬಟ್ಟೆವಿಡಿದು
ಕಿಸುಕದರಿವೆಯ ಪೊದ್ದು ಮಲಮೂತ್ರದಲಿ ಬಿದ್ದು
ವಸುಧೆಯಲಿ ದಿನಗಳೆದೆಯೊ – ಆತ್ಮಾ (ಕ.ಹಾ.೧೯)

ಆತ್ಮವನ್ನು ಮುಂದಿಟ್ಟುಕೊಂಡು ಪ್ರಶ್ನಿಸುತ್ತಾ ಹೋಗುತ್ತಾರೆ. ಅವಿನಾಶಿಯಾದ ಆತ್ಮ ಒಂದು ದೇಹವನ್ನು ಕಳೆದು ಇನ್ನೊಂದು ದೇಹವನ್ನು ಪ್ರವೇಶಿಸುತ್ತದೆ. ಈ ಮಧ್ಯೆ ಹೊಂದುವ ನಾನಾ ಅವಸ್ಥೆಗಳನ್ನು ಕನಕದಾಸರು ಹೇಳುತ್ತಾರೆ. ಹೊಟ್ಟೆಯೆಂಬ ಹಳ್ಳಿಗೆ ಬಂದು ಒಂಬತ್ತು ತಿಂಗಳೆಂಬ ಊರಿನಲ್ಲಿ ನಿಂತುಕೊಂಡು ನೆಲ ಎಂಬ ಬಟ್ಟೆಯನ್ನು ಹಿಡಿದು ಮಲ–ಮೂತ್ರಗಳ ಕಲ್ಮಶತೆಯನ್ನು ಒಳಗೊಳ್ಳುವುದು ಆತ್ಮಕ್ಕೆ ಅನಿವಾರ್ಯವಾಗುವ ಸ್ಥಿತಿ. ಇದರಿಂದ ಮುಕ್ತಗೊಳ್ಳುವ ಚಿಂತನೆ ಅಸಾಧ್ಯವಾದದ್ದು ಎಂಬುದಾಗಿ ಮನದಟ್ಟು ಮಾಡುವುದು ಕನಕದಾಸರ ಉದ್ದೇಶ.

ಕಷ್ಟಪಟ್ಟರು ಇಲ್ಲ ಕಳವಳಿಸಿದರಿಲ್ಲ
ಭ್ರಷ್ಟ ಮಾನವ ನಿನ್ನ ಹಣೆಯ ಬರಹವಲ್ಲದೆ ಇಲ್ಲ
ಸಿರಿವಂತನ ಸ್ನೇಹ ಮಾಡಿ ನಡೆದರಿಲ್ಲ
ಪರಿಪರಿಯಲಿ ವಿದ್ಯೆ ಕಲಿತವರಿಲ್ಲ
ನರಿಯ ಬುದ್ಧಿಯಲಿ ನಡೆದುಕೊಂಡರು ಇಲ್ಲ.
ಅರಿಯದೆ ಹಲವ ಹಂಬಲಿಸಿದವರಿಲ್ಲ. (ಸಾ.ಕೀ.೪೯೭)

ಕೀರ್ತನೆಯು ಉದ್ದಕ್ಕೂ 'ಇಲ್ಲ' ಎಂಬ ನಶ್ವರತೆಯನ್ನು ತೆರೆದಿಡುತ್ತದೆ. ಕಷ್ಟ ಪಟ್ಟು ಗಳಿಸಿದವರೂ, ಚಿಂತೆಮಾಡಿ ಆಯುಷ್ಯ ಕಳೆದವರೂ ಸಂಪತ್ತನ್ನು ಸಂಚಯಿಸಿಕೊಂಡವರು, ವಿದ್ಯೆಗಳಿಸಿಕೊಂಡವರು, ಕಡುಜಾಣರಾಗಿ ಹುಟ್ಟಿದವರೂ, ಬೆಟ್ಟಕ್ಕೆತ್ತಿಟ್ಟವರು. ಹೀಗೆ ಅನನ್ಯ ಸಾಧನೆಯನ್ನು ಗೈದ ಮಹಾನುಭಾವರೂ ಇಂದು ಇಲ್ಲವಾಗಿದ್ದಾರೆ. ಆದರೂ ಮನುಷ್ಯ ಅದನ್ನು ತಿಳಿದುಕೊಳ್ಳದೆ ವ್ಯರ್ಥವಾಗಿ ಬದುಕನ್ನು ಸವೆಸುತ್ತಾನೆ.

ಮುತ್ತು ಬಂದಿದೆ ಕೇರಿಗೆ ಜನರು ಕೇಳಿ
ಭಕ್ತಿಯುಳ್ಳವರೆಲ್ಲ ಕಟ್ಟಿಕೊಳ್ಳಿ ಸೆರಗಿನಲ್ಲಿ (ಸಾ.ಕೀ.೫೭೫)

ಇದು 'ಮುತ್ತು' ಎಂಬ ಪ್ರತಿಮೆಯ ಮೂಲಕ ಶ್ರೀ ಕೃಷ್ಣನ ಮಹಿಮೆಯನ್ನು ಕೊಂಡಾಡುವ ಕೀರ್ತನೆಯಾಗಿದೆ. ಶ್ರೀ ಹರಿಯನ್ನು ಮುತ್ತಿಗೆ ಹೋಲಿಸಿ ಆ ಮುತ್ತನ್ನು ಭಕ್ತಿಯುಳ್ಳವರೆಲ್ಲ ಸೆರಗಿನಲ್ಲಿ ಕಟ್ಟಿಕೊಳ್ಳಬೇಕೆಂದು ಸಾರುವ ಮೂಲಕ ಹರಿಯ ಮಹತ್ವವನ್ನು ಕೊಂಡಾಡಿದ್ದಾರೆ. ಇಲ್ಲಿ ಅಂತರಂಗದ ಮುತ್ತನ್ನು ಸಾಧಕರ ಸೆರಗಿಗೆ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ.

ಥಳಥಳಿಸುವ ಮುತ್ತು ಕಮಲನೇತ್ರದ ಮುತ್ತು
ಕಲುಷ ಪರ್ವತಕ್ಕೆಳಿದು ಕುಲಿಶವಾಗಿಹ ಮುತ್ತು
ಹಲಧರ ನಾಮವೆಂಬ ಪವಿತ್ರ ನಾಮದ ಮುತ್ತು
ಒಲಿದು ಭಜಿಪರ ಭವವ ತರಿದು ಕಾಯುವ ಮುತ್ತು (ಸಾ.ಕೀ.೫೭೫)

ಮುತ್ತಿನ ಪರಿಶುದ್ಧತೆ ಹೊಳಪು ಅದರ ನಿರ್ಮಲತೆಯ ಮೌಲ್ಯ, ಬಿಳುಪು ಮತ್ತು ಅದನ್ನು ಧರಿಸುವುದರಿಂದ ಉಂಟಾಗುವ ಸೌಂದರ್ಯ, ಸಂತೋಷಗಳು ಹರಿಯನ್ನು ಒಲಿಸಿಕೊಳ್ಳುವುದರಿಂದ ಆಗುವ ಅನನ್ಯ ಲಾಭವನ್ನು ಸಂಕೇತಿಸುತ್ತದೆ.

'ಸಂಜೀವರಾಯರ ಹೃದಯದೊಳಗಿಹ ಮುತ್ತು' ಎಂಬುದಾಗಿ ಅಂತರಂಗದ ಭಕ್ತಿಯನ್ನು ಪ್ರತಿಪಾದಿಸುತ್ತಾರೆ.

ಜ್ಞಾನವೆಂಬೊ ದಾರದಲ್ಲಿ ಪೋಣಿಸಿ ನೋಡುವ ಮುತ್ತು
ಜ್ಞಾನಿಗಳ ಮನದಲ್ಲಿ ಮೆರೆವ ಮುತ್ತು
ಆನಂದ ತೀರ್ಥರ ಮನದಲೊಪ್ಪುವ ಮುತ್ತು
ಶ್ರೀನಿಧಿ ಆದಿಕೇಶವನೆಂಬ ಆಣಿಮುತ್ತು (ಸಾ.ಕೀ.೫೭೫)

ಇದರಲ್ಲಿ ಜ್ಞಾನಮಾರ್ಗದಿಂದ ದೈವಸಾಕ್ಷಾತ್ಕಾರವನ್ನು ಪಡೆಯುವ ಸಾಧ್ಯತೆಯನ್ನು ಸ್ಪಷ್ಟಪಡಿಸುತ್ತದೆ. ಹೀಗೆ ಮುತ್ತಿನ ಪ್ರತಿಮೆಯ ಮೂಲಕ ಕನಕದಾಸರು ಅಂತರಂಗದ ಭಕ್ತಿಯನ್ನು ಸಾರಿದ್ದಾರೆ.

ನನ್ನವ್ವ ಕಲ್ಲ ಬಿಡೆ ಈ ಧೋತ್ರವ
ಚೆನ್ನಾಗಿ ಒಗೆಯಬೇಕು
ಮುನ್ನ ಮಾಡಿದ ಪಾಪಕರ್ಮ ಹೋಗುವ ಹಾಗೆ
ಚೆನ್ನಕೇಶವನ ಪ್ರಸಾದಕ್ಕೊದಗಬೇಕು. (ಸಾ.ಕೀ.೫೨೯)

ಇಲ್ಲಿ ಧೋತ್ರವನ್ನು ಚೆನ್ನಾಗಿ ಒಗೆಯಬೇಕು ಎಂದಿದ್ದಾರೆ. ಇದು ದೇಹವೆಂಬ ಧೋತ್ರ. ಇದು ಶುದ್ಧವಾಗಬೇಕು. ಅದಕ್ಕಾಗಿ ಕಲ್ಲಿನಲ್ಲಿ ಒಗೆಯಬೇಕು. ಚೆನ್ನಾಗಿ ಒಗೆಯದಿದ್ದರೆ ಮೈಯ ಕೊಳೆ ಹೋದರೂ ಮನಸ್ಸಿನ ಕೊಳೆ ಹೋಗದೆ ಧೋತ್ರ ಹೊಲಸಾಗಿಯೇ ಇರುತ್ತದೆ. ಅಂತರಂಗದ ನಿರಂತರ ಚಿಂತನೆಯೇ ಒಗೆಯುವ ಕ್ರಿಯೆ. ಮೊದಲು ಮಾಡಿದ ಪಾಪಕರ್ಮ ಹೋಗುವ ಹಾಗೆ ಅದನ್ನು ಮಡಿ ಮಾಡಬೇಕು.

ಉಟ್ಟಧೋತ್ರವು ಮಾಸಿತು ಮನದೊಳಗಿದ್ದ
ದುಷ್ಟರೈವರುಗಳಿಂದ ಕಷ್ಟದುರಿತಗಳು
ಬಿಟ್ಟು ಹೋಗುವ ಹಾಗೆ ಮುಟ್ಟಿ ಜಲದೊಳು
ಗಟ್ಯಾಗಿ ಒಗೆಯಬೇಕು. (ಸಾ.ಕೀ.೫೨೯)

ಉಟ್ಟಧೋತ್ರ ಕೊಳೆಯಾದದ್ದು ದುಷ್ಟರಾದ ಪಂಚೇಂದ್ರಿಯಗಳಿಂದ ಈ ದುರಿತಗಳು ಹೋಗುವ ಹಾಗೆ ವಿವೇಕದ ತಿಳಿನೀರಿನಲ್ಲಿ ಅದ್ದಿ ಚೆನ್ನಾಗಿ ಒಗೆಯಬೇಕು. ವೇದವನ್ನೇರಿ, ಮಥನ ಮಾಡಿ ಮನದಲ್ಲಿದ್ದ ಗೊಂದಲಗಳ ದ್ವಂದ್ವವನ್ನು ಅಳಿಸಬೇಕು. ಕಾಮಕ್ರೋಧಗಳನ್ನು ತೊರೆಯಬೇಕು. ಕರ್ಮ ಬಂಧನದಿಂದ ಕಳಚಿಕೊಳ್ಳಬೇಕು. ಅದಕ್ಕಾಗಿ ಆಲಸ್ಯ ಮಾಡದೆ ಭಗವಂತನ ಸೇವೆಗೆ ಕೋಲು ಹಿಡಿದು ಬಾಗಿಲ ಕಾಯಬೇಕು. ಅದಕ್ಕಾಗಿ ನನ್ನವ್ವ ಕಲ್ಲಬಿಡೆ ಎಂಬುದಾಗಿ ಈ ಕೀರ್ತನೆಯಲ್ಲಿ ಧೋತ್ರದ ಪ್ರತಿಮೆಯ ಮೂಲಕ ಅಧ್ಯಾತ್ಮದ ಸಾಧನೆಯನ್ನು ಹೇಳಿದ್ದಾರೆ.

ಎಂಟು–ಏಳನು ಕಳೆದುದರಿಂದೆ
ಬಂಟರೈವರ ತುಳಿದುದರಿಂದೆ
ತುಂಟಕನೊಬ್ಬನ ತರೆದುದರಿಂದೆ
ಬಂಟನಾಗಿ ಬಂದೆನೊ ರಂಗಶಾಯಿ (ಸಾ.ಕೀ.೪೬೯)

ಇಲ್ಲಿ ಅಷ್ಟಮದ, ಸಪ್ತವ್ಯಸನಗಳನ್ನು ಬಿಟ್ಟು, ಪಂಚೇಂದ್ರಿಯಗಳನ್ನು ತುಳಿದು ಅಂದರೆ ಇಂದ್ರಿಯನಿಗ್ರಹ ಮಾಡಿ ಮನಸ್ಸನ್ನು ಸ್ಥಿಮಿತದಲ್ಲಿಟ್ಟು ಸೇವಕನಾಗಿ ಸೇವೆಯನ್ನು ಮಾಡುವುದನ್ನು ದಾಸರು ಹೇಳಿದ್ದಾರೆ. ಮನುಷ್ಯನಿಗೆ ಇರುವಂತಹ ಚಂಚಲ ಮನಸ್ಸು ಮದ ಮತ್ಸರಗಳು ಇವೆಲ್ಲವನ್ನು ತ್ಯಜಿಸಿ ಭಗವಂತನನ್ನು ನೆನೆದಾಗ ಭಗವಂತನ ದರ್ಶನ ಸಾಧ್ಯ ಎಂಬುದಾಗಿ ದಾಸರು ಹೇಳಿದ್ದಾರೆ.

ತಾನಾರು ದೇಹವಾರು ದಿವ್ಯ
ಜ್ಞಾನದಲಿ ತಿಳಿದಾತ ಪರಮಯೋಗಿ
ಅಸ್ಥಿ ಪಂಜರದ ನರಗಳ ತೊಗಲ ಹೊದಿಕೆಯು
ವಿಸ್ತರಿಸಿ ಬಿಗಿದ ಮಾಂಸದ ಬೊಂಬೆಯು
ಮೂತ್ರಮಲ ರಕ್ತ ಕೀವಡ ಪ್ರಳಯದೊಡಲೆಂದು
ಸ್ವಸ್ಥದಿಂ ತಿಳಿದಾತ ಪರಮಯೋಗಿ (ಸಾ.ಕೀ.೫೧೫)

'ತಾನು' ಮತ್ತು 'ದೇಹ' ಇವೆರಡನ್ನೂ ಒಂದೇ ಎಂದು ಭ್ರಮಿಸಿದಾಗ ನಾನಾ ತೆರನಾದ ತೊಂದರೆಗೊಳಗಾಗುತ್ತಾನೆ. ಅವು ಬೇರೆಯೆಂದು ಅರಿತಾಗ ಆತ ಯೋಗಿಯಾಗುತ್ತಾನೆ. ದೇಹವೆಂಬುದು ರಕ್ತಮಾಂಸಗಳಿಂದ ಕೂಡಿದ್ದು. ಹಲವು ವಿವಿಧ ಕೊಳೆಯನ್ನು ಹೊರಹಾಕುತ್ತಿರುತ್ತದೆ. ಇದನ್ನು ಚೆನ್ನಾಗಿ ತಿಳಿದಾತ ಪರಮಯೋಗಿಯಾಗುತ್ತಾನೆ.

ಘೋರ ನರಕದ ತನುವೆಂದು
ಗೇರು ಹಣ್ಣಿನ ಬೀಜದಂತೆ ಹೊರಗಿದ್ದು
ಮಾರಪಿತ ಕಾಗಿನೆಲೆಯಾದಿಕೇಶವನ ಪಾದ
ವಾರಿಜನ ನಂಬಿದವನೆ ಪರಮಯೋಗಿ (ಸಾ.ಕೀ.೫೧೫)

ಗೇರು ಹಣ್ಣಿನಲ್ಲಿ ಬೀಜವು ಹೇಗೆ ಹಣ್ಣಿನಿಂದ ಹೊರಗಿರುವುದೋ ಹಾಗೆ ತನುವು ಆತ್ಮಕ್ಕಿಂತ ಭಿನ್ನವೆಂದು ತಿಳಿದವನು ಪರಮಯೋಗಿಯಾಗುತ್ತಾನೆ ಎಂಬುದಾಗಿ ಕನಕದಾಸರು ತಿಳಿಸಿದ್ದಾರೆ.

ಯಾತರವನೆಂದುಸುರಲಿ ಜಗ
ನ್ನಾಥ ಮಾಡಿದ ಒಂದು ನರರೂಪವನ್ನು
ಒಂಬತ್ತು ಎಜ್ಜದೊಳೊಸರುವ ಹೊಲಸದು
ತುಂಬಿ ತುಳುಕುವ ಕೊಡವಾಗಿರಲು
ಇಂಬಿಲ್ಲದೆ ಹೊಲೆಗೊಂಡ ಠಾವಿನಲಿ ಬಂದಂಥ
ಡಂಬಕ ನನಗಿನ್ಯಾತರ ಕುಲವಯ್ಯ (ಸಾ.ಕೀ.೫೮೦)

ಲೀಲಾನಾಟಕದ ಸೂತ್ರಧಾರಿಯಾದ ಹರಿಯ ಮನುಷ್ಯ ವೇಷ ಕೃಷ್ಣನನ್ನು ಯಾರೆಂದು ಹೇಳಲಿ ಎಂತಹವನೆಂದು ಹೇಳಲಿ ಎಂಬ ತಮ್ಮ ಗೊಂದಲಗಳಿಗೆ ಕನಕದಾಸರು ಕಂಡುಕೊಂಡ ನಿರ್ಣಯವು ಈ ತೆರನದ್ದಾಗಿದೆ.

ನವರಂಧ್ರಗಳಿಂದ ಕೂಡಿದ ಮನುಷ್ಯನ ಶರೀರ ಹೊಲಸು ತುಂಬಿ ತುಳುಕುವ ಕೊಡವಾಗಿರುವಾಗ ನನಗೆ ಯಾವ ಕುಲ ಎಂಬುದಾಗಿ ಹೇಳಿದ್ದಾರೆ.

ಕರುಳ ಖಂಡ ನಾರುವ ಚರ್ಮ ರೋಹಿತ
ನರಪಂಜರದೀ ಹುರುಳಿಲ್ಲದ
ನರದೇಹ ಹೊತ್ತು ತಿರುಗುವಂಥ
ತಿರುಕ ನನಗಿನ್ಯಾತರ ಕುಲವಯ್ಯ (ಸಾ.ಕೀ.೫೮೦)

ಎಲುಬು ರಕ್ತ ಮಾಂಸಗಳಿಂದ ಕೂಡಿದ ಶರೀರ ವಿನಾಶ ಹೊಂದುವಂತದ್ದು. ಇಂತಹ ಶರೀರವನ್ನು ಹೊತ್ತು ತಿರುಗುವವರಲ್ಲಿ ಕುಲವೇನು? ಎಂಬುದಾಗಿ ಹೇಳಿದ್ದಾರೆ.

ಹಚ್ಚಡದ ಮೇಲೆ ಲಚ್ಚಿಕೆಯಿಟ್ಟಂತೆ
ಹೆಚ್ಚು ಕಡಮೆ ಎಂದು ಹೆಣಗಾಡುತ
ನಿಚ್ಚಕಾಗಿನೆಲೆಯಾದಿ ಕೇಶವನ
ಹುಚ್ಚಗೆ ನನಗಿನ್ಯಾತರ ಕುಲವಯ್ಯ. (ಸಾ.ಕೀ.೫೮೦)

ಹಾಸಿಗೆಯ ಮೇಲೆ ಇಟ್ಟ ಗುರುತು ಎಷ್ಟೇ ಹೆಣಗಾಡಿದರೂ ದೃಢವಾಗಿ ನಿಲ್ಲಲು ಅಸಾಧ್ಯ. ಅಂತೆಯೇ ನಮ್ಮ ಕುಲದ ಬಗ್ಗೆ ಮಾತನಾಡುವ, ಆಕ್ಷೇಪಿಸುವ ಜನರನ್ನು ನಾವು ಎಷ್ಟೇ ಪ್ರಯತ್ನಪಟ್ಟರೂ ಸರಿಪಡಿಸಲು ಸಾಧ್ಯವಿಲ್ಲ. ಕಾಗಿನೆಲೆಯಾದಿಕೇಶವನ ಹುಚ್ಚನಾದ ಬಳಿಕ ನನಗೆ ಯಾವ ಕುಲದ ಹಂಗೂ ಇಲ್ಲ ಎಂಬುದು ಕನಕದಾಸರ ಅಭಿಮತ. ಇಲ್ಲಿ ಹುಚ್ಚ ಎಂಬುದು ದೇವರ ಬಗೆಗಿನ ವಿಶೇಷವಾದ ಭಕ್ತಿಯನ್ನು ಸೂಚಿಸುತ್ತದೆ. ಭಕ್ತನಾದ ಬಳಿಕ ಈ ಲೌಕಿಕದ ಜನರ ಕುಲದ ಹಂಗು ತಾನಾಗಿ ಅಳಿದು ಹೋಗುತ್ತದೆ.

ನಾರಾಯಣ ಎಂಬ ನಾಮದ ಬೀಜವ ನಾಲಿಗೆಯ
ಕೂರಿಗೆಯ ಮಾಡಿ ಬಿತ್ತಿರಯ್ಯಾ
ತನುವ ನೇಗಿಲ ಮಾಡಿ ಹೃದಯ ಹೊಲವನು ಮಾಡಿ
ತನ್ವಿರಾ ಎಂಬ ಎರಡೆತ್ತ ಹೂಡಿ
ಜ್ಞಾನವೆಂಬೊ ಮೀಣೆಯ ಕಣ್ಣಿ ಹಗ್ಗವ ಮಾಡಿ
ಮನವೆಂಬ ಧಾನ್ಯವ ನೋಡಿ ಬಿತ್ತಿರಯ್ಯಾ (ಸಾ.ಕೀ.೫೩೬)

ನಾರಾಯಣ ಎಂಬ ನಾಮದ ಬೀಜವನ್ನು ಹೃದಯವೆಂಬ ಹೊಲದಲ್ಲಿ ಬಿತ್ತಿ ಬೆಳೆಯಬೇಕೆಂಬ ಆಧ್ಯಾತ್ಮಿಕ ಕೃಷಿ ಕಾಯಕವನ್ನು ಹೇಳುತ್ತಾರೆ. ಶರೀರವೆಂಬ ನೇಗಿಲನ್ನು ಮಾಡಿ ಹೃದಯವೆಂಬ ಹೊಲದಲ್ಲಿ

ನಾರಾಯಣ ಎಂಬ ಬೀಜವನ್ನು ಬಿತ್ತಬೇಕು. ತನ್ವಿರಾ ಎಂಬ ಎತ್ತನ್ನು ಹೂಡಿ ಜ್ಞಾನವೆಂಬ ಹಗ್ಗವನ್ನು ಮಾಡಿ ಮನವೆಂಬ ಧಾನ್ಯವನ್ನು ಬಿತ್ತಬೇಕು.

ಕಾಮಕ್ರೋಧಗಳೆಂಬ ಗಿಡವನು ತರಿಯಿರಯ್ಯಾ
ಮದ ಮತ್ಸರವೆಂಬ ಪೊದೆಯ ಇರಿಯಿರಯ್ಯಾ
ಪಂಚೇಂದ್ರಿಯಗಳೆಂಬ ಮಂಚಿಕೆಯ ಹಾಕಿರಯ್ಯಾ
ಚಂಚಲವೆಂಬ ಹಕ್ಕಿಯ ಓಡಿಸಿರಯ್ಯಾ (ಸಾ.ಕೀ.೫೩೬)

ಅರಿಷಡ್ವರ್ಗಗಳೆಂಬ ಗಿಡವನ್ನು ಕತ್ತರಿಸಬೇಕು. ಪಂಚೇಂದ್ರಿಯಗಳೆಂಬ ವೇದಿಕೆಯನ್ನು ಮಾಡಿ ಚಂಚಲವೆಂಬ ಹಕ್ಕಿಯನ್ನು ಓಡಿಸಬೇಕು.

ಉದಯಾಸ್ತಮಾನವೆಂಬ ಎರಡು ಕೊಳಗವ ಮಾಡಿ
ಆಯುಷ್ಯದ ರಾಶಿಯನು ಅಳೆಯಿರಯ್ಯ
ಇದು ಕಾರಣ ಕಾಗಿನೆಲೆಯಾದಿ ಕೇಶವನ
ಮುದದಿಂದ ನೆನೆನೆನೆದು ಸುಖಿಯಾಗಿರಯ್ಯಾ (ಸಾ.ಕೀ.೫೩೬)

ಕೊನೆಯಲ್ಲಿ ಹಗಲು ಇರುಳು ಎಂಬ ಎರಡು ಅಳತೆಯ ಮಾಪನದಲ್ಲಿ ಆಯುಷ್ಯ ರಾಶಿಯನ್ನು ಅಳೆಯಬೇಕು. ಇದು ಅಂತರಂಗದ ಪರಿಭಾವನೆಯನ್ನು ದಟ್ಟವಾಗಿಸುತ್ತದೆ. ಇದರಲ್ಲಿ ಕನಕದಾಸರು ಪ್ರತಿಮೆಗಳ ಮೂಲಕ ಆಧ್ಯಾತ್ಮಿಕ ಕೃಷಿ ಕಾಯಕವನ್ನು ಮಾಡುವುದು ಹೇಗೆ ಎನ್ನುವುದನ್ನು ವಿವರಿಸಿದ್ದಾರೆ.

ಅಡಿಗೆಯನು ಮಾಡಬೇಕಣ್ಣ ನಾನೀಗ ಸುಜ್ಞಾನದ
ಅಡಿಗೆಯನು ಮಾಡಬೇಕಣ್ಣ
ಅಡಿಗೆಯನು ಮಾಡಬೇಕು ಮಡಿಸಬೇಕು ಮದಗಳನ್ನು
ಒಡೆಯನಾಜ್ಞೆಯಿಂದ ಒಳ್ಳೆ ಸಡಗರದಿ ಈ ಮನೆಯ ಸಾರಿಸಿ (ಸಾ.ಕೀ.೪೫೪)

ಅಂತರಂಗ ಪರಿಪಕ್ವವಾದಾಗ ಅನುಭವದ ಪಾಕ ಸಿದ್ಧವಾಗುತ್ತದೆ. ಇಲ್ಲಿ 'ಅಡಿಗೆ' ಎನ್ನುವ ಪ್ರತಿಮೆಯ ಮೂಲಕ ಅಂತರಂಗದ ಸಾಧನೆಯ ವಿವರಗಳಿವೆ. ಸಡಗರದಿಂದ ಈ ಮನೆಯನ್ನು ಸಾರಿಸಿ, ಮದಗಳನ್ನು ಮದಿಸಿ ಜ್ಞಾನದ ಅಡಿಗೆಯನ್ನು ಮಾಡಬೇಕು. ಒಡೆಯನ ಆಜ್ಞೆಯಂತೆ ಅಡಿಗೆ ಮಾಡಬೇಕು.

ತನ್ನ ಗುರುವನ್ನು ನೆನೆಯಬೇಕಣ್ಣ ತನುಭಾವವೆಂಬ
ಭಿನ್ನ ಕಲ್ಮಶವಳಿಯಬೇಕಣ್ಣ
ಒನಕೆಯಿಂದ ಕುಟ್ಟಿ ಕೇರಿ ತನಗೆ ತಾನೆ ಆದ ಕೆಟ್ಟ

ನನುವರಿತು ಇಕ್ಕಬೇಕು ಅರಿವರ್ಗವೆಂಬ ತುಂಟರಳಿಸಿ (ಸಾ.ಕೀ.೪೫೪)

ಗುರು ಸ್ಮರಣೆಯಿಂದ ತನುಭಾವವೆಂಬ ಕಲ್ಮಶವನ್ನು ಮೊದಲು ತೊಳೆಯಬೇಕು. ಆನಂತರ ಒನಕೆಯಿಂದ ಕುಟ್ಟಿ ಕೇರಿ ಕಾಮ, ಕ್ರೋಧ, ಮೋಹ, ಲೋಭ, ಮದ, ಮತ್ಸರವೆಂಬ ವೈರಿಗಳನ್ನು ಮೃದುಗೊಳಿಸಿ ಹದಮಾಡಬೇಕು.

ತತ್ವಭಾಂಡವ ತೊಳೆಯಬೇಕಣ್ಣ ಸತ್ಯಾತ್ಮವಾಗಿ
ಅರ್ತಿ ಅಕ್ಕಿಯ ಮಥಿಸಬೇಕಣ್ಣ
ಕತ್ತರಿಮನವೆಂಬ ಹೊಟ್ಟನ್ನು ಎತ್ತಿ ಒಲೆಗೆ ಹಾಕಿ ಇನ್ನು
ಹೊತ್ತಿಕೊಂಡಿಹ ಮಮತೆಯನ್ನು ಎತ್ತಿ ಎತ್ತಿ ಎಸರ ಹಿಂಗಿಸುತಲಿ (ಸಾ.ಕೀ.೪೫೪)

ತತ್ವ ಪಾತ್ರೆಗಳನ್ನು ತೊಳೆದು ಸತ್ಯಾತ್ಮವಾಗಿ ಪ್ರೇಮವೆಂಬ ಅಕ್ಕಿಯನ್ನು ಮಥಿಸಿ ಕತ್ತರಿ ಮನಸ್ಸೆಂಬ ಹೊಟ್ಟನ್ನು ಹಾಕಿ, ಮಮತೆಯೆಂಬ ಬೆಂಕಿಯಿಂದ ಬೇಯಿಸಿ ಎಸರನ್ನು ಹಿಂಗಿಸಬೇಕೆನ್ನುತ್ತಾರೆ.

ಜನನ ಸೊಂಡಿಗೆ ಹುರಿಯಬೇಕಣ್ಣ ನಿಜವಾಗಿ ನಿಂತು
ತನುವು ತುಪ್ಪವ ಕಾಸಬೇಕಣ್ಣ
ಕನಕಗಿರಿ ನೆಲೆಯಾದಿಕೇಶವದಾಸ
ಕನಕನ ಕಟ್ಟಳೆಯೊಳು ನಿಂತು ಸುಖದ ಪಾಕವನು
ಚಂದದಿ ಸವಿದುಣ್ಣಲಿಕ್ಕೆ (ಸಾ.ಕೀ.೪೫೪)

ಅಡಿಗೆಯಾದ ಮೇಲೆ ಊಟ ಪೂರ್ಣವಾಗಲು ತುಪ್ಪ ಸೆಂಡಿಗೆಗಳೂ ಬೇಕು. ಅದು ಜನನ ಎಂಬ ಸೊಂಡಿಗೆ ಹಾಗೂ ಶರೀರ ಎಂಬ ತುಪ್ಪವನ್ನು ಕಾಯಿಸಬೇಕು. ಅದು ಸುಖದ ಪಾಕವನ್ನು ಸವಿದು ಉಣ್ಣಲಿಕ್ಕೆ ಎಂಬುದಾಗಿ ಅಡಿಗೆ, ಭಾಂಡವ ಮೊದಲಾದ ಪ್ರತಿಮೆಗಳ ಮೂಲಕ ಅಂತರಂಗದ ಸಾಧನೆಯನ್ನು ಹೇಳಿದ್ದಾರೆ. ಈ ರೀತಿಯಾಗಿ ಅಡಿಗೆ ಮಾಡಿದಾಗ ಅದು ಸುಖದ ಪಾಕ. ಅದನ್ನು ಸವಿದು ಉಣ್ಣುವುದೇ ಈ ಶ್ರಮದ ಸಾರ್ಥಕತೆ ಎಂಬುದಾಗಿ ತಿಳಿಸಿದ್ದಾರೆ. ಇದರೊಂದಿಗೆ ಪುರಂದರದಾಸರು ರಚಿಸಿದ ಈ ಕೀರ್ತನೆಯನ್ನು ತುಲನೆ ಮಾಡಬಹುದು –

ಅನುಭವದಡಿಗೆಯ ಮಾಡಿ ಅದ
ಕ್ಕನುಭವಿಗಳು ಬಂದು ನೀವೆಲ್ಲ ಕೂಡಿ
ತನುವೆಂಬ ಭಾಂಡವ ತೊಳೆದು ಕಟ್ಟ
ಮನದ ಚಂಚಲವೆಂಬ ಮುಸುರೆಯ ಕಳೆದು
ಘನವಾಗಿ ಮನೆಯನ್ನು ಬಳಿದು ಅಲ್ಲಿ
ಮಿನುಗುವ ತ್ರಿಗುಣದ ಒಲೆಗುಂಡ ನಡೆದು (ಸಾ.ಕೀ.೧೬೨)

ಅಡುಗೆ ಮಾಡಲು ಮುಸುರೆ ಪಾತ್ರೆಯನ್ನು ತೊಳೆದು ಪರಿಶುದ್ಧವಾಗಿ ಮಿಂದು ಮಡಿಯುಟ್ಟು, ನೀರಿಡುವುದು, ಸೌದೆಗೆ ಬೆಂಕಿ ಹಾಕುವುದು ಇತ್ಯಾದಿ ಅನೇಕ ಕಾರ್ಯಗಳಿವೆ. ಇಲ್ಲಿ ಅಡುಗೆ ಮಾಡುವುದರ ವಿವರಗಳನ್ನು ನೀಡುವುದರೊಂದಿಗೆ ಮನಶುದ್ಧಿಯ 'ಅಡುಗೆ' ಮಾಡಬೇಕಾದ ವಿವರಗಳಿವೆ. ಇದರಲ್ಲಿ ಕನಕದಾಸರು ಮತ್ತು ಪುರಂದರದಾಸರು 'ಅಡುಗೆ' ಪ್ರತಿಮೆಯ ಮೂಲಕ ಹೇಳಿದ ತತ್ವ ಒಂದೇ ಆಗಿದೆ.

ನಾರಾಯಣ ನಿನ್ನ ನಾಮವೊಂದಿರುತಿರೆ
ಬೇರೊಂದು ನಾಮವಿನ್ನೇತಕಯ್ಯ
ನೆಟ್ಟನ ದಾರಿಯು ಬಟ್ಟೆಯೊಳಿರುತಿರೆ
ಬೆಟ್ಟವ ಬಳಸಲಿನ್ನೇತಕಯ್ಯ
ಅಷ್ಟೈಶ್ವರ್ಯದ ಮೃಷ್ಟಾನ್ನವಿರುತಿರೆ
ಬಿಟ್ಟಕೂಳನು ತಿನ್ನಲೇತಕಯ್ಯಾ (ಸಾ.ಕೀ.೫೩೭)

ಭಗವಂತನ ಸ್ಮರಣೆ ಮಾಡಿದರೆ ಅದು ಅಷ್ಟೈಶ್ವರ್ಯ ಲಭಿಸಿದಂತೆ ಮೃಷ್ಟಾನ್ನ ಭೋಜನ ಮಾಡಿದಂತೆ. ಆಗ ನಮಗೆ ಬೇರೆಯವರ ಹಂಗು ಬೇಕಾಗಿಲ್ಲ; ಎಂಜಲಿಗೆ ಬಾಯಿಬಿಡಬೇಕಾಗಿಲ್ಲ ಎಂದು ದಾಸರು ಹೇಳಿದ್ದಾರೆ.

ಬೆಲ್ಲವು ಕರದೊಳಗಿರುತಿರೆ ಕಾಡಿನ
ಕಲ್ಲನು ಕಡಿಯಲಿನ್ನೇತಕಯ್ಯಾ
ಬಲ್ಲಿದ ಕಾಗಿನೆಲೆಯಾದಿಕೇಶವನಿರೆ
ಚೆಲ್ಲರೆ ದೈವದ ಹಂಬಲೇತಕಯ್ಯ (ಸಾ.ಕೀ.೫೩೭)

ಸವಿಯಾದ ಬೆಲ್ಲವು ಕೈಯಲ್ಲಿರುವಾಗ ಕಾಡಿನ ಕಲ್ಲು ಬೇಡ. ಭಗವಂತನೇ ನಮ್ಮ ಅಂತರಂಗದಲ್ಲಿರುವಾಗ ಇತರ ದೈವಗಳ ಹಂಬಲಬೇಡ. ಅದಕ್ಕಾಗಿ ಭಗವಂತನ ಸ್ಮರಣೆ ಮಾತ್ರ ಸಾಕು ಎಂದು ಉಪದೇಶಿಸಿದ್ದಾರೆ. ಏಕದೇವತಾರಾಧನೆ, ಪರಿಶುದ್ಧ ಭಕ್ತಿ ಇವುಗಳು ಮುಖ್ಯ ಎಂದು ಪ್ರತಿಪಾದಿಸುವ ದಾಸರು ಕೇಶವ ನಾಮವೆಂಬ ದಿವ್ಯ ರತ್ನವಿದ್ದರೆ ಅದಕ್ಕಿಂತ ಮಿಗಿಲಾದ ರತ್ನವೊಂದಿಲ್ಲವೆಂದಿದ್ದಾರೆ.

ಬಾಯಿ ನಾರಿದ ಮೇಲೆ ಏಕಾಂತವೆ
ತಾಯಿ ತೀರಿದ ಮೇಲೆ ತವರಾಸೆಯೆ
ಕಿಲುಬಿನಾ ಬಟ್ಟಲೊಳು ಹುಳಿ ಕಲಿಸಿ ಉಣಬಹುದೆ
ಚಳಿಯರಿಗೆ ಚಂದನದ ಲೇಪ ಹಿತವೆ (ಸಾ.ಕೀ.೫೬೨)

"ಎಲ್ಲ ಶಕ್ತಿ ಕುಗ್ಗಿ ಮುಪ್ಪು ಅಡರಿದ ಬಳಿಕ ಮನುಷ್ಯನಿಂದ ಉದಾತ್ತವಾದುದನ್ನು ಒಳ್ಳೆಯದನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. ತನ್ನಲ್ಲಿ ಶಕ್ತಿ ಇರುವಾಗಲೇ ಭಕ್ತಿವಂತನಾಗಿ ಶುದ್ಧ ಜೀವನ ನಡೆಸಬೇಕು. ಅದು ನಿಜವಾದ ಮುಕ್ತಿ, ಮಕ್ತಿಗೆ ದಾರಿ"[7] ಎಂಬುದಾಗಿ ದಾಸರು ಹೇಳಿದ್ದಾರೆ.

ಭೂಮಿಯಲ್ಲಿ ಭಗವಂತನ ಮೇಲೆ ಭಕ್ತಿ ಇರಬೇಕು. ಇಲ್ಲದವರಿಗೆ ಮುಕ್ತಿ ಎಂಬುದಿಲ್ಲ. ಮೋಕ್ಷ ಸಾಧನೆಗಾಗಿ ಭಗವಂತನನ್ನು ನೆನೆಯಬೇಕು ಎಂಬುದಾಗಿ ಹೇಳಿದ್ದಾರೆ. ಕಿಲುಬಿನ ಬಟ್ಟಲಿನಲ್ಲಿ ಹುಳಿ ಕಲಸಿ ತಿಂದರೆ ಪ್ರಯೋಜನವಿಲ್ಲ. ಹಾಗೆಯೇ ಚಳಿ ಇರುವವರಿಗೆ ಚಂದನದ ಲೇಪ ಹಿತವಲ್ಲ. ಆದ ಕಾರಣ ಈಗಲೇ ಭಗವಂತನನ್ನು ಸ್ಮರಿಸು ಎಂಬುದಾಗಿ ಹೇಳಿದ್ದಾರೆ.

ಹೂವ ತರುವರ ಮನೆಗೆ ಹುಲ್ಲ ತರುವೆ
ಆವ ಪರಿಯಲಿ ಸಲಹೊ ದೇವ ಚೆನ್ನಯನೆ
ಈರೇಳು ಜನುಮದಿಂ ದಾಸನಾಗಿಹೆ ನಾನು
ಸೇರಿದೆನೊ ತವಶರಣರ ಸೇವೆಗೆ
ಘೋರ ದುರಿತಗಳೆಂಬ ವಾರಿಧಿಯ ಬತ್ತಿಸಿ
ನಾರಸಿಂಹನೆ ದಯದಿ ಸಲಹೆನ್ನ ಸ್ವಾಮಿ (ಸಾ.ಕೀ.೫೯೭)

ಭಕ್ತರು ಬೇಡಿದುದನ್ನು ನೀಡುವ ವಾತ್ಸಲ್ಯಮಯಿ ಭಗವಂತ. ಆತ ದೀನನಾಗಿ ಬೇಡಿದವನಿಗೆ ಅನುಗ್ರಹ ಬೀರುತ್ತಾನೆ. ಶ್ರದ್ಧೆಯಿಂದ ಹೂವನ್ನು ತಂದವನ ಮನೆಗೆ ಹುಲ್ಲನ್ನು ತಂದು ಹಾಕುತ್ತಾನೆ. ಆದ ಕಾರಣ ಇದೇ ತೆರದಲ್ಲಿ ತನ್ನನ್ನು ಸಲಹಲಿ ಎಂಬ ಕಳಕಳಿ ಈ ಕೀರ್ತನೆಯಲ್ಲಿದೆ. ಏಳೇಳು ಜನ್ಮದಿಂದಲೂ ನಾನು ನಿನ್ನ ದಾಸ. ನನ್ನ ದುರಿತಗಳು ಸಮುದ್ರದಷ್ಟಿವೆ. ಅದನ್ನೆಲ್ಲ ಹೋಗಲಾಡಿಸಿ ತನ್ನನ್ನು ರಕ್ಷಿಸು ಎಂಬುದಾಗಿ ಭಗವಂತನಲ್ಲಿ ತನ್ನ ನಿವೇದನೆಯನ್ನು ಹೇಳಿದ್ದಾರೆ.

ಹಣ್ಣು ಕೊಂಬುವ ಬನ್ನಿರಿ ಹರಿದಾಸರು
ಹಣ್ಣುಕೊಂಬುವ ಬನ್ನಿರಿ
ಚೆನ್ನಬಾಲಕೃಷ್ಣನೆಂಬ
ಕನ್ನೆಗೊನೆ ಬಾಳೆಹಣ್ಣು (ಸಾ.ಕೀ. ೫೯೫)

ಕನಕದಾಸರು ಹಣ್ಣಿನ ಪ್ರತಿಮೆಯ ಮೂಲಕ ಧರ್ಮದ ಮರ್ಮವನ್ನು ವಿವರಿಸಿದ್ದಾರೆ.

ಹಣ್ಣನ್ನು ಮಾಧ್ಯಮವನ್ನಾಗಿ ಮಾಡಿಕೊಂಡು ಕನಕದಾಸರು ಇಲ್ಲಿ ಧಾರ್ಮಿಕ ಉಪದೇಶವನ್ನು ಮಾಡುತ್ತಾರೆ. ಇಲ್ಲಿ 'ಹಣ್ಣುಕೊಂಬುವ' ಎಂಬುದು ವಿಶೇಷವಾದ ಅರ್ಥವನ್ನು ಪಡೆದಿದ್ದು. ಅದು ಸಾಧಾರಣ ಹಣ್ಣಲ್ಲ. ಅಪೂರ್ವವಾದ ಚೆನ್ನ ಬಾಲಕೃಷ್ಣನೆಂಬ ಹಣ್ಣು. ವ್ಯಾಪಾರಿಗಳು ವಸ್ತುಗಳ

ಗುಣಗಾನ ಮಾಡುವಂತೆ ದಾಸರು ಇಲ್ಲಿ ಹಣ್ಣಿನ ಮೂಲಕ ಬಾಲಕೃಷ್ಣನ ಗುಣಗಾನ ಮಾಡಿದ್ದಾರೆ. ಬಾಳೆಯ ಹಣ್ಣನ್ನು ಸುಲಿದು ತಿನ್ನುವುದು ಬಹಳ ಸುಲಭ.

ಸುತ್ತೇಳು ಲೋಕದಿ ಸುರರು ಬಿತ್ತಿದ ಹಣ್ಣು
ಭಕ್ತರ ಬಾಯೊಳು ನೆನೆವ ಹಣ್ಣು
ಅರ್ತಿಯುಳ್ಳವರೆಲ್ಲ ಕೊಳ್ಳಿ ಬೇಕಾದರೆ
ನಿತ್ಯ ಮಾಧವನೆಂಬ ಅಚ್ಚ ಮಾವಿನ ಹಣ್ಣು. **(ಸಾ.ಕೀ. ೫೯೫)**

ಈ ಹಣ್ಣು ಏಳು ಲೋಕದಲ್ಲಿ ದೇವತೆಗಳು ಬಿತ್ತಿದ ಹಣ್ಣು. ಇದು ಭಕ್ತರು ಅಂತರಂಗದಲ್ಲಿ ಸ್ಮರಿಸುವ ಹಣ್ಣು, ಸವಿ ನೀಡುವ ಮುಗಿಯದ ಹಣ್ಣು. ಪ್ರೀತಿಯಿಂದ ಎಲ್ಲರೂ ಸ್ವೀಕರಿಸಿ. ಇದು ಶಾಶ್ವತವಾಗಿರುವ ಒಳ್ಳೆಯ ರುಚಿಕರವಾದ ಮಾವಿನ ಹಣ್ಣು ಎಂದು ಶ್ರೀ ಕೃಷ್ಣನನ್ನು ನೆನೆದಿದ್ದಾರೆ. ಇಲ್ಲಿ ಕೃಷ್ಣನ ಲೀಲೆಗಳನ್ನು ವರ್ಣಿಸಿದ್ದಾರೆ. ಅದರ ಜೊತೆಗೆ ಅಧ್ಯಾತ್ಮ ಸಾಧನೆಗೆ ದಾಸರು ಕರೆ ಕೊಟ್ಟಿದ್ದಾರೆ. ಮಾವಿನ ಹಣ್ಣು, ಬಾಳೆ ಹಣ್ಣಿನ ಪ್ರತಿಮೆಯ ಮೂಲಕ ಕೃಷ್ಣನ ಬಾಲಲೀಲೆಗಳನ್ನು ವರ್ಣಿಸಿದ್ದಾರೆ. ‘ಕರುಣಾಳು ಕಾಗಿನೆಲೆಯಾದಿಕೇಶವ ಹಣ್ಣು’ ಎಂಬುದಾಗಿ ದಾಸರು ತನ್ನ ಅಂತರಂಗದ ಭಕ್ತಿಯನ್ನು ನಿರೂಪಣೆ ಮಾಡಿದ್ದಾರೆ.

ಈ ಕೀರ್ತನೆಯನ್ನು ಪುರಂದರ ದಾಸರ ‘ಹಣ್ಣು ಬಂದಿದೆ ಕೊಳ್ಳಿರೋ ನೀವೀಗ’ ಎಂಬ ಕೀರ್ತನೆಯೊಂದಿಗೆ ಹೋಲಿಸಬಹುದು.

ಹಣ್ಣು ಬಂದಿದೆ ಕೊಳ್ಳಿರೊ ನೀವೀಗ
ಚೆನ್ನಬಾಲಕೃಷ್ಣನೆಂಬೊ ಕನ್ನೆಬಾಳೆ
ಹವ್ಯಕವ್ಯದ ಹಣ್ಣು ಸವಿದ ಸಕ್ಕರೆ ಹಣ್ಣು
ಭವರೋಗಗಳನೆಲ್ಲ ಕಳೆವ ಹಣ್ಣು
ಕೊಳೆತು ಹೋಗುವುದಿಲ್ಲ ಹುಳುತು ಹೋಗುವುದಿಲ್ಲ
ಕಳೆದು ಬಿಸಾಡಿಕೊಳ್ಳುವುದಿಲ್ಲ
ಅಳತೆ ಕೊಂಬುವುದಿಲ್ಲ ಗಿಳಿಕಚ್ಚಿ ತಿಂಬೋದಲ್ಲ
ಒಳಿತಾದ ಹರಿಯೆಂಬೊ ಮಾವಿನ ಹಣ್ಣು ’

ಈ ಹಣ್ಣು ಕೊಳೆತು ಹೋಗಲಾರದು. ಹುಳಿ ಹಿಡಿಯಲಾರದು, ಕಳೆದು ಹೋಗುವಂತಹದ್ದಲ್ಲ. ಪಕ್ಷಿಗಳು ತಿಂದು ಹೋಗಲಾರವು. ಇದು ಶಾಶ್ವತವಾದ ಮಾವಿನ ಹಣ್ಣು ಎಂಬುದಾಗಿ ಪುರಂದರದಾಸರು ಹೇಳಿದ್ದಾರೆ. ಹೀಗೆ ಈ ಕೀರ್ತನೆಗಳನ್ನು ನೋಡಿದರೆ ಪುರಂದರದಾಸರ ಪ್ರಭಾವ ಕನಕದಾಸರ ಮೇಲೆ ಆಗಿರುವುದು ಸ್ಪಷ್ಟವಾಗುತ್ತದೆ.

ಕನಕದಾಸರು ಇಡೀ ಮಹಾಭಾರತವನ್ನು ಒಂದು ಬೊಂಬೆಯಾಟದ ಪ್ರತಿಮೆಯ ಮೂಲಕ ಚಿತ್ರಿಸಿದ್ದಾರೆ.

ಬೊಂಬೆಯಾಟವನಾಡಿಸಿದೆ ಮಹಾಭಾರತದ
ಅಂಬುಜಭವಾದಿ ಅಮರರು ನೋಡುತಿರಲು
ಕುರುಭೂಮಿಯೆಂಬ ಪುರವೀಥಿ ರಂಜಿಸಲು
ಮರೆಯ ಮಾಯದ ಐದು ತೆರೆಯ ಹಾಕಿ
ಧರಣೀಶರೆಂಬ ನರಪ್ರತಿಮೆಗಳನಳವಡಿಸಿ
ನರನ ಹಯರಥದ ವಾಘೇಯ ಸೂತ್ರವಿಡಿದು (ಸಾ.ಕೀ.೫೭೫)

ಇಡೀ ಭಾರತವೇ ಒಂದು ಬೊಂಬೆಯಾಟ. ಕುರು ಭೂಮಿಯೇ ಬೀದಿ, ಅದೇ ಆಟದ ವೇದಿಕೆಯೂ ಆಗಿದೆ. ಅಲ್ಲಿ ನಡೆಯುವ ಮರೆ ಮಾಯೆಗಳೇ ತೆರೆಗಳು. ರಾಜಕೀಯ ಬೊಂಬೆಗಳು. ಅರ್ಜುನನ ಕಥೆಯ ಕುದುರೆಯ ಕಡಿವಾಣವೇ ಸೂತ್ರ. ಭಗವಂತನೇ ಆಟವಾಡಿಸುವ ಸೂತ್ರಧಾರಿ. ಅವನು ಹೇಳಿದಂತೆ ಆಟ.

ಓದುವನು ನಾರದನು ವಾದ್ಯಕಾರನು ಶಂಭು
ಬಾದರಾಯಣನೇ ಕತೆಗಾರನು
ಮೇದಿನಿಯ ಹೊರೆಗಳೆವ ಮೃತ್ಯುವಿನ ಹಾಸ್ಯರಸ
ವೇದನಿಕರಗಳು ಕೈವಾರಿಸುತಲಿರಲು (ಸಾ.ಕೀ.೫೭೫)

ನಾರದ ಹಾಡುಗಾರ ಶಂಭು ಮದ್ದಲೆ ನುಡಿಸುವವ. ಕಥೆ ನಡೆಸುವವ ವೇದವ್ಯಾಸ. ಹೀಗೆ ಮಹಾಭಾರತದ ವೈವಿಧ್ಯಮಯ ಚಟುವಟಿಕೆಗಳ ಹಿನ್ನೆಲೆಯಲ್ಲಿ ಅದನ್ನು ನಿಯಂತ್ರಿಸುವ ಸೂತ್ರಧಾರಕ ಶಕ್ತಿ ಭಗವಂತನೆಂಬುದನ್ನು ಧ್ವನಿಸುತ್ತದೆ. ಇದೇ ರೀತಿ ನಮ್ಮ ಜೀವನವೆಂಬ ಆಟವನ್ನು ನಿಯಂತ್ರಿಸುವ ಸೂತ್ರಧಾರಕ ಶಕ್ತಿ ಭಗವಂತನೇ. ಹೀಗೆ ಬೊಂಬೆಯಾಟದ ಪ್ರತಿಮೆಯ ಮೂಲಕ ಇಡೀ ಮಹಾಭಾರತವೆಂಬ ಜನಪದ ಆಟವನ್ನು ಬಳಸಿಕೊಂಡಿರುವ ಕನಕದಾಸರ ಶೈಲಿ ವಿಶಿಷ್ಟವಾಗಿದೆ.

ಎಲ್ಲಿರುವನೋ ರಂಗ ಎಂಬ ಸಂಶಯ ಬೇಡ
ಎಲ್ಲಿ ಭಕ್ತರು ಕರೆಯೆ ಅಲ್ಲಿ ಬಂದೊದಗುವನು
ತರಳ ಪ್ರಹ್ಲಾದ ಹರಿ ವಿಶ್ವಮಯನೆಂದು
ಬರೆದೋದಲವನ ಪಿತ ಕೋಪದಿಂದ
ಸ್ಥಿರವಾದೊಡೀ ಕಂಬದಲಿ ತೋರು ತೋರೆನಲು
ಭರದಿಂದ ಬರಲದಕೆ ವೈಕುಂಠ ನೆರೆಮನೆಯೆ (ಸಾ.ಕೀ.೪೮೦)

ದೇವರು ಎಲ್ಲಿದ್ದಾನೆ ಎನ್ನುವ ಸಂಶಯ ಬೇಡ. ದೇವರು ಸರ್ವಾಂತರ್ಯಾಮಿ. ಅವನು ನೆನೆದವರ ಮನದಲ್ಲಿರುತ್ತಾನೆ. ಪ್ರಹ್ಲಾದ, ಅಜಮಿಳ, ಗಜರಾಜ, ದ್ರೌಪದಿ ಮುಂತಾದ ಭಕ್ತರು ಭಕ್ತಿಯಿಂದ ಮೊರೆಯಿಟ್ಟಾಗ ಅವರನ್ನು ಕಷ್ಟದಿಂದ ಶೀಘ್ರವಾಗಿ ಪಾರು ಮಾಡಿದ ದಯಾಮಯಿ ಭಗವಂತ. ಹಾಗಾಗಿ ದೇವರು ಎಲ್ಲೆಲ್ಲೂ ಇದ್ದಾನೆ. ಇಲ್ಲಿ ಪುರಾಣ ಪ್ರತಿಮೆಯ ಮೂಲಕ ಕನಕದಾಸರು ಭಗವಂತನ ಗುಣಗಾನ ಮಾಡಿದ್ದಾರೆ.

ಅಣು ಮಹತ್ತಿನೊಳಗೆಲ್ಲ ಪರಿಪೂರ್ಣ ವಿಶ್ವಮಯ
ಗಣನೆಯಿಲ್ಲದ ಮಹಾಮಹಿಮನೆನಿಪ
ಘನ ಕೃಪಾನಿಧಿ ಕಾಗಿನೆಲೆಯಾದಿಕೇಶವನು
ನೆನೆದವರ ಮನದೊಳಿಹನೆಂಬ ಬಿರುದುಂಟಾಗಿ (ಸಾ.ಕೀ.೪೮೦)

ವಿಶ್ವ ಸಂಚಾರಿಯಾದ ಭಗವಂತ ಎಲ್ಲೆಲ್ಲೂ ಇದ್ದಾನೆ. ಭಕ್ತರ ಮನದಲ್ಲಿಯೇ ಇದ್ದಾನೆ ಎಂಬುದನ್ನು ದಾಸರು ತಿಳಿಸಿದ್ದಾರೆ. ಇಲ್ಲಿ ಪುರಾಣ ಪ್ರತಿಮೆಯ ಮೂಲಕ ದಶಾವತಾರದ ವರ್ಣನೆಯನ್ನು ಹೇಳಿದ್ದಾರೆ.

ಈತನೀಗ ವಾಸುದೇವನು ಲೋಕದೊಡೆಯ
ಈತನೀಗ ವಾಸುದೇವನು
ಈತನೀಗ ವಾಸುದೇವನೀ ಸಮಸ್ತ ಲೋಕದೊಡೆಯ
ದಾಸಗೊಲಿದು ತೇರನೇರಿ ತೇಜಿ ಪಿಡಿದು ನಡೆಸಿದಾತ (ಸಾ.ಕೀ.೪೭೦)

ವಾಸುದೇವನೇ ಲೋಕದ ಒಡೆಯ. ತನ್ನ ಭಕ್ತನಾದ ಅರ್ಜುನನಿಗೆ ಒಲಿದು ಅವನ ರಥವನ್ನು ನಡೆಸಿದವನು.

ದನುಜೆಯಾಳ್ದನಣ್ಣನಯ್ಯನ ಪಿತನ ಮುಂದೆ ಕೌರವೇಂದ್ರ
ನನುಜೆಯಾಳಿದವನ ಶಿರವ ಕತ್ತರಿಸುತ ತನ್ನ
ಅನುಜೆಯಾಳಿದವನ ಬೆಂಕಿ ಮುಟ್ಟದಂತೆ ಕಾಯ್ದ ರುಕ್ಮ
ನನುಜೆಯಾಳಿದವನ ಮೂರ್ತಿಯನ್ನು ನೋಡಿರೋ (ಸಾ.ಕೀ.೪೭೦)

ಕೌರವನ ತಂಗಿಯ ಗಂಡನಾದ ಸೈಂಧವನನ್ನು ವಧಿಸಲು ಅರ್ಜುನನಿಗೆ ಸಹಾಯ ಮಾಡಿದವನು. ಇದರಿಂದ ಅರ್ಜುನ ಅಗ್ನಿ ಪ್ರವೇಶ ಮಾಡದಂತೆ ರಕ್ಷಿಸಿದವನು. ಹೀಗೆ ಇಲ್ಲಿ ಕೃಷ್ಣ ಬೇರೆ ಬೇರೆ ರೀತಿಯಲ್ಲಿ ಭಕ್ತರನ್ನು ಕಾಪಾಡಿದವನು. ಇಲ್ಲಿ ಪುರಾಣ ಪ್ರತಿಮೆಯ ಮೂಲಕ ಕನಕದಾಸರು ಭಕ್ತ ಮತ್ತು ಭಗವಂತನ ಬಗ್ಗೆ ತಿಳಿಸಿದ್ದಾರೆ.

ದ್ಯಾವಿ ನಮ್ಮ ದ್ಯಾವರು ಬಂದರು
ಬನ್ನಿರೇ ನೋಡ ಬನ್ನಿರೇ
ಕೆಂಗಣ್ಣ ಮೀನನಾಗಿ ನಮರಂಗ
ಗುಂಗಾಡಿ ಸೋಮನ ಕೊಂದಾನ್ಯಾ್ಕ (ಸಾ.ಕೀ.೫೨೩)

ಕನಕದಾಸರು ಈ ಕೀರ್ತನೆಯಲ್ಲಿ ದಶಾವತಾರದ ವರ್ಣನೆಯನ್ನು ಮಾಡಿದ್ದಾರೆ. ಗುಂಗಾಡಿ ಎಂದರೆ ಸೊಳ್ಳೆ. ಇಲ್ಲಿ ಸೊಳ್ಳೆಯನ್ನು ಹೊಸಕಿ ಹಾಕಿದಂತೆ ಭಗವಂತ ಸೋಮಕಾಸುರನನ್ನು ಹೊಸಕಿ ಹಾಕಿದ ಎಂಬುದಾಗಿ ಸೊಳ್ಳೆಯ ಪ್ರತಿಮೆಯ ಮೂಲಕ ಪುರಾಣದ ದಶಾವತಾರದ ವರ್ಣನೆಯನ್ನು ಮಾಡಿದ್ದಾರೆ.

ದೊಡ್ಡ ಮಡುವಿನೊಳಗೆ ನಮರಂಗ
ಗುಡ್ಡವ ಹೊತ್ಕೊಂಡು ನಿಂತಾನ್ಮ್ಯಾಳೆ
ಗುಡ್ಡವ ಹೊತ್ಕೊಂಡು ನಿಂತು ಸುರರನು
ದೊಡ್ಡವರನ್ನ ಮಾಡ್ಯಾನ್ಮ್ಯಾಳೆ (ಸಾ.ಕೀ.೫೨೩)

ಇಲ್ಲಿ ಸಮುದ್ರವನ್ನು 'ದೊಡ್ಡಮಡು' ಎಂಬುದಾಗಿ ಕರೆದಿದ್ದಾರೆ. ಇಲ್ಲಿ ಸಮುದ್ರ ಮಥನದ ಕಥೆಯನ್ನು ದಾಸರು ಹೇಳಿದ್ದಾರೆ. ಇಲ್ಲಿ ಹಳ್ಳಿಯ ಮುಗ್ದತೆಯ ಅದ್ಭುತ ಚಿತ್ರಣವನ್ನು ನೀಡಿದ್ದಾರೆ.

ಚೆನ್ನಕಾಡಿನ ಹಂದಿಯಾಗಿ ನಮರಂಗ
ಚೆನ್ನದ ಕಣ್ಣನ ಕೊಂದಾನ್ಮ್ಯಾಳೆ
ಚೆನ್ನದ ಕಣ್ಣನ ಕೊಂದು ಭೂಮಿಯ
ವನಜಸಂಭವನಿಗಿತ್ತಾನ್ಮ್ಯಾಳೆ (ಸಾ.ಕೀ.೫೨೩)

ಇಲ್ಲಿ ವರಾಹ 'ಕಾಡುಹಂದಿ' ಯಾಗುತ್ತಾನೆ. ಹಿರಣ್ಯಾಕ್ಷನನ್ನು ಚೆನ್ನದ ಕಣ್ಣನೆಂದು ಕರೆದಿದ್ದಾರೆ. ಇಲ್ಲಿ ಹಳ್ಳಿಯ ಬೇಟೆಗಾರರಿಗೆ ಅರ್ಥವಾಗುವ ರೀತಿಯಲ್ಲಿ 'ಕಾಡುಹಂದಿ' ಎಂಬುದಾಗಿ ನಿರೂಪಿಸಿದ್ದು ಕನಕದಾಸರ ವೈಶಿಷ್ಟ್ಯ.

ಸಿಟ್ಟಿಂದ ಸಿಂಹನಾಗಿ ನಮರಂಗ
ಹೊಟ್ಟೆಯ ಕರುಳ ಬಗೆದಾನ್ಮ್ಯಾಳೆ
ಹೊಟ್ಟೆಯ ಕರುಳ ಬಗೆದು ನಮರಂಗ
ಪುಟ್ಟಗೆ ವರವ ಕೊಟ್ಯಾನ್ಮ್ಯಾಳೆ (ಸಾ.ಕೀ.೫೨೩)

ಇದರಲ್ಲಿ ನರಸಿಂಹಾವತಾರದ ವರ್ಣನೆಯನ್ನು ದಾಸರು ಮಾಡುತ್ತಾರೆ. ಪುಟ್ಟ ಎಂಬುದಾಗಿ ಬಾಲಕ ಪ್ರಹ್ಲಾದನನ್ನು ಹೇಳಿದ್ದಾರೆ .

ಹುಡುಗ ಹಾರುವನಾಗಿ ನಮರಂಗ
ಬೆಡಗಿಲಿ ಮುಗಿಲಿಗೆ ಬೆಳೆದಾನ್ಮ್ಯಾಳೆ
ಬೆಡಗಿಲಿ ಮುಗಿಲಿಗೆ ಬೆಳೆದು ಬಲಿಯನ್ನು
ಅಡಿಯಿಂದ ಪಾತಾಳ ಕೊತ್ತಾನ್ಮ್ಯಾಳೆ (ಸಾ.ಕೀ.೫೨೩)

ಇದರಲ್ಲಿ ವಾಮನಾವತಾರದ ಕಥೆಯನ್ನು ಹೇಳುತ್ತಾರೆ. ಬ್ರಾಹ್ಮಣರ ಪುಟ್ಟ ಹುಡುಗನಾಗಿ ಯಜ್ಞ ಶಾಲೆಗೆ ಬಂದು ಥಟ್ಟನೆ ಮುಗಿಲೆತ್ತರಕ್ಕೆ ಬೆಳೆದು ನಿಂತು ಹಾಗೆಯೆ ಅಡಿಯಿಂದ ಎಂದರೆ ಕಾಲಿನಿಂದ ತುಳಿದು ಪಾತಾಳಕ್ಕೆ ಬಲಿಯನ್ನು ತಳ್ಳಿದ ಎಂಬುದಾಗಿ ಹೇಳುತ್ತಾರೆ. ಹೀಗೆ ಕನಕದಾಸರು ಪುರಾಣದ ಪ್ರತಿಮೆಯ ಮೂಲಕ ದಶಾವತಾರವನ್ನು ವರ್ಣಿಸಿದ್ದಾರೆ. ದೇವರೊಂದಿಗೆ ದಾಸರಿಗಿದ್ದ ನಿಕಟವಾದ ಪ್ರೀತಿ ಇಲ್ಲಿ ಪ್ರಕಟಗೊಂಡಿದೆ. ಇದು ಜಾನಪದ ಶೈಲಿಯಲ್ಲಿ ರಚನೆಗೊಂಡಂತಹ ಕೀರ್ತನೆಯಾಗಿದೆ.

ಮಗುವು ಕಾಣಿರಯ್ಯ ಮಾಯದ ಮಗುವು ಕಾಣಿರಯ್ಯ
ಸುಗುಣ ವಾದಿರಾಜರೆ ಮೂ
ಜಗವನು ತನ್ನುದರದೊಳಿಟ್ಟ (ಸಾ.ಕೀ.೫೬೮)

ಈ ಕೀರ್ತನೆಯು ವಿಶೇಷತಃ ಪೌರಾಣಿಕ ಪ್ರತಿಮೆಯನ್ನೊಳಗೊಂಡು ಕೃಷ್ಣನ ಲೀಲಾವಿನೋದವನ್ನು ಮಹಿಮಾತಿಶಯವನ್ನು ಬಣ್ಣಿಸುತ್ತದೆ. 'ಮಾಯದ ಮಗು' ಇಲ್ಲಿ ಕೃಷ್ಣ. ಈತನು, ಈತನ ಲೀಲೆಗಳನ್ನು ದಾಸರಿಗೆ ಕಂಡು ನೋಡಿದ ನೇರ ಅನುಭವವಿದ್ದಷ್ಟು ಆತ್ಮೀಯತೆ ಹೃದಯಕ್ಕೆ ಹತ್ತಿರರಾದವರು ತಮ್ಮ ಕಣ್ಣ ಮುಂದಿದ್ದಂತೆಯೇ ಅನಿಸುವುದು ಸಹಜ. ಕನಕದಾಸರಿಗೆ ಹರಿಯು ತನ್ನ ಜೊತೆಗಿದ್ದಾನೆಂಬ ನಂಬುಗೆಯಿಂದ ಮಗುವಾಗಿ ಕೃಷ್ಣನನ್ನು ಕಾಣುತ್ತಾರೆ. ವಾದಿರಾಜರು ಮೂಲೋಕಗಳನ್ನು ತನ್ನ ಬಸಿರಿನಲ್ಲಿಟ್ಟ 'ಮಗು' ಎಂದು ದಾಸರು ಕೃಷ್ಣನನ್ನು ಕೊಂಡಾಡಿದ್ದಾರೆ.

ಡಿಂಬಿನೊಳು ಪ್ರಾಣವಿರಲು ಕಂಬ ಸೂತ್ರದ ಗೊಂಬೆಯಂತೆ
ಎಂದಿದ್ದರೊಂದು ದಿನ ಸಾವು ತಪ್ಪದು.
ಹುಟ್ಟುತ್ತೇನು ತರಲಿಲ್ಲ ಹೋಗುತೇನು ಒಯ್ಯಲಿಲ್ಲ
ಸುಟ್ಟು ಸುಟ್ಟು ಸುಣ್ಣದ ಹರಳಾಯಿತೀ ದೇಹ
ಹೊಟ್ಟೆ ಬಲು ಕೆಟ್ಟದೆಂದು ಎಷ್ಟುಕಷ್ಟಪಟ್ಟು ಪ್ರಾಣ
ಬಿಟ್ಟು ಹೋಗುವಾಗ ಗೇಣು ಬಟ್ಟೆ ಕಾಣಲಿಲ್ಲವೋ (ಸಾ.ಕೀ.೫೧೨)

ಬೆರಳಿನಿಂದ ಆಡಿಸುವ ಸೂತ್ರದ ಗೊಂಬೆಯಂತೆ ಈ ಶರೀರದ ಒಳಗಿರುವ ಪ್ರಾಣ ಮನುಷ್ಯನಾಗಿ ಹುಟ್ಟಿದ ಮೇಲೆ ಸಾವು ಒಂದಲ್ಲ ಒಂದು ದಿನ ಬಂದೇ ಬರುತ್ತದೆ. ನಾವು ಹುಟ್ಟುವಾಗ ಖಾಲಿ ಕೈ ಹೋಗುವಾಗ ಖಾಲಿ ಕೈ. ಮನುಷ್ಯ ಹೊಟ್ಟೆ ಪಾಡಿಗಾಗಿ ಎಷ್ಟು ಕಷ್ಟಪಟ್ಟರೂ ಪ್ರಾಣಬಿಟ್ಟು ಹೋಗುವಾಗ ಏನೂ ಇಲ್ಲದ ನಶ್ವರತೆ ಎಂಬುದಾಗಿ ಹೇಳಿದ್ದಾರೆ.

ಬೆಳ್ಳಿ ಬಂಗಾರಿಟ್ಟುಕೊಂಡು ಒಳ್ಳೆವಸ್ತ್ರ ಹೊದ್ದುಕೊಂಡು
ಅಳ್ಳಾಚಾರಿ ಗೊಂಬೆಯಂತೆ ಆಡಿಹೋಯಿತು
ಹಳ್ಳ ಹರಿದು ಹೋಗುವಾಗ ನೀರಗುಳ್ಳೆ ಒಡೆಯುವಂತೆ
ಉಳ್ಳೆ ಮೊರೆಯಂತೆ ಕಾಣೊ ಸಂಸಾರದಾಟವು (ಸಾ. ಕೀ. ೫೧೨)

ನಾನು ನನ್ನ ಸಂಸಾರ ನನ್ನ ಬಂಧುಬಳಗ ಎಂದು ಜೀವಿಸುವವರಿಗೆ ಬಂಗಾರ ಭೂಮಿಗಾಗಿ ಬಡಿದಾಡಿದರೆ ಹೇಗೆ? ಅದು ಕಲಾವಿದ ನಿರ್ಮಿಸಿದ ಬೊಂಬೆಯಂತೆ ಸತ್ತನಂತರ ಅದು ಬೇರೆಯವರ ಪಾಲಾಗುತ್ತದೆ. ಸಂಸಾರ ಎನ್ನುವುದು ಶಾಶ್ವತವಲ್ಲ. ಅದು ನೀರಿನ ಪ್ರವಾಹ ಹೋಗುವಾಗ ನೀರಗುಳ್ಳೆ ಒಡೆದು ಹೋಗುವಂತೆ ಕ್ಷಣಿಕ. ಹಾಗಾಗಿ ಈ ಸಂಸಾರವೇ ಸ್ಥಿರವಾದದ್ದು ಎಂದು ತಿಳಿಯಬಾರದು. ಈ

ಸಂಸಾರದಲ್ಲಿ ಮನುಷ್ಯ ಸತ್ತ ಮೇಲೆ ಕೀರ್ತಿ ಬರುತ್ತದೆ. ಸುದ್ದಿ ಹರಡುತ್ತದೆ. ಹಾಗಾಗಿ ಮನುಷ್ಯ ಬದುಕಿರುವಾಗ ಒಳ್ಳೆಯ ಕಾರ್ಯ ಮಾಡಬೇಕು. ಭಗವಂತನನ್ನು ಸ್ಮರಿಸಬೇಕು. ಇಲ್ಲಿ ಸಂಸಾರದ ನಿಸ್ಸಾರತೆಯನ್ನು ಕ್ಷಣಿಕತೆಯನ್ನು ಸಾರುವ ಮೂಲಕ ಭಗವಂತನನ್ನು ಭಕ್ತಿಯಿಂದ ಸ್ಮರಿಸಬೇಕು ಎಂದಿದ್ದಾರೆ.

ಆರು ಸಂಗಡ ಬಾಹೋರಿಲ್ಲ ಸಿರಿ
ನಾರಾಯಣನ ಸ್ಮರಣೆ ನೆರೆ ಬಾಹೋದಲ್ಲದೆ
ಸುತ್ತಮುತ್ತಲು ಕುಳಿತಿದ್ದ ಬಂಧು ಜನರು
ಹೊತ್ತು ಹೋಯಿತೇಳಿರೇಳಿರೆಂದು
ಒತ್ತಿದ ಕಸಕಿಂತ ಕಡು ಕಷ್ಟದೀ ದೇಹ
ಹೊತ್ತೊಯ್ದು ಅಗ್ನಿಯೊಳು ಬಿಸುಟಬಾಹರೊ (ಸಾ.ಕೀ.೪೬೭)

ನಮ್ಮ ಕಷ್ಟಕಾಲಕ್ಕೆ ಯಾರೂ ನಮ್ಮ ಜೊತೆ ಇರುವುದಿಲ್ಲ . ನಾರಾಯಣನ ಸ್ಮರಣೆ ಮಾಡಬೇಕು ಎಂಬುದಾಗಿ ಹೇಳಿದ್ದಾರೆ. ದೇಹದಲ್ಲಿ ಜೀವ ಇದ್ದಷ್ಟು ಕಾಲ ಬಂಧುಗಳಿರುತ್ತಾರೆ. ಆ ದೇಹವು ಹೊರಟು ಹೋದಾಗ ಅದೇ ಬಂಧು ಜನರು ಬೆಂಕಿಗೆ ಇಕ್ಕಿ ಸುಡುತ್ತಾರೆ. ಸ್ವಲ್ಪ ಕಾಲ ಆದರಿಸುವ ಬಂಧು ಜನರು ದಿನಗಳೆದಂತೆ ದೂರ ಇರುತ್ತಾರೆ. ಇಂತಹ ಬಂಧು ಜನರನ್ನು ನೆಚ್ಚದೆ ಕೇಶವನನ್ನು ನೆಚ್ಚಿದರೆ ಸುಖ ದೊರಕುತ್ತದೆ ಎಂದು ಇಲ್ಲಿ ದಾಸರು ಹೇಳಿದ್ದಾರೆ.

ಹರಿಯಲ್ಲಿ ಒಲುಮೆಯಿಲ್ಲದವನಿಗೆ ಭಕ್ತಿಯಿರಲು ಸಾಧ್ಯವಿಲ್ಲ. ಅಂತಹುದೇ ತನ್ನ ಸ್ಥಿತಿ ಎಂದು ಕನಕದಾಸರು ಇಲ್ಲಿ ಹೇಳುತ್ತಾರೆ–

ನರಜನ್ಮವೆಂಬ ಪಾತಕದ ಪಂಜರದೊಳಗೆ
ಸ್ಥಿರವೆಂಬೊ ಅಹಂಕೃತಿ ಜೀವನವ ನಿರ್ಮಿಸಿ
ಎರವಿನ ಮಾತಾಪಿತರನುಜರೆಂಬ
ಉರಿಕಾವು ಕ್ಷಯವೆಂಬ ನರಿಗಳನು ವಂದಿಸುವೆನು (ಸಾ. ಕೀ. ೪೭೩)

ಮನುಷ್ಯ ಜನ್ಮವನ್ನು ಪಾಪದ ಪಂಜರವೆಂದು ದಾಸರು ಕರೆಯುತ್ತಾರೆ. ಇದರೊಳಗೆ ಜೀವನು ಬಂಧಿಸಲ್ಪಟ್ಟಿರುತ್ತಾನೆ. ಮಾತಾಪಿತರು ಬಂಧುಬಳಗವೆಂದು ಹಲಬಗೆಯ ಸಂಬಂಧವನ್ನು ಇರಿಸಿಕೊಂಡು ಹಲಬಗೆಯ ಯಾತನೆಯಿಂದ ತೊಳಲಾಡುತ್ತಾರೆ. ಇದರಿಂದಾಗಿ ದಾಸರು ಬೇಡಿದುದನ್ನು ಸ್ವಾಮಿ ಕೊಡದಿದ್ದರೆ ದಾಸನಿಗೆ ಅವಮಾನ ಆದ್ದರಿಂದ ತನಗೆ ಅಭೀಷ್ಟವನ್ನು ನೀಡಬೇಕಂದು ಇಲ್ಲಿ ದಾಸರು ಕೇಳಿಕೊಳ್ಳುತ್ತಾರೆ.

ಉಣ್ಣಬರದವರಲ್ಲಿ ಊರೂಟವಾದರೆ ಏನು
ಹಣ್ಣು ಬಿಡದ ಮರಗಳು ಹಾಳದರೇನು
ಕಣ್ಣಿಲ್ಲದವಗಿನ್ನು ಕನ್ನಡಿಯಿದ್ದು ಫಲವೇನು
ಪುಣ್ಯವಿಲ್ಲದವನ ಪ್ರೌಢಿಮೆ ಮೆರೆದರೇನು (ಸಾ.ಕೀ.೪೬೧)

ಹಣ್ಣು ಬಿಡದ ಮರಗಳು ನಿಷ್ಪ್ರಯೋಜಕ. ಮರಗಳು ಇದ್ದರೆ ಅದರಲ್ಲಿ ಹಣ್ಣು ಬಿಡಬೇಕು. ಹಾಗೆಯೇ ಕುರುಡನಿಗೆ ಕನ್ನಡಿಯನ್ನು ತೋರಿಸಿ ಫಲವಿಲ್ಲ. ಇದೇ ರೀತಿ ಯಾವುದೇ ವಸ್ತು ಇದ್ದರೂ ಅದು ಪ್ರಯೋಜನಕ್ಕೆ ಸಿಗುವಂತಾಗಬೇಕು ಇಲ್ಲದಿದ್ದರೆ ಅದು ಇದ್ದೂ ವ್ಯರ್ಥ. ಹಾಗೆಯೇ ಭಗವಂತನು ಸ್ಮರಣೆಯನ್ನು ಮಾಡದ ಮನುಷ್ಯ ಬದುಕಿದ್ದೂ ವ್ಯರ್ಥ ಎಂಬುದನ್ನು ದಾಸರು ಹೇಳಿದ್ದಾರೆ.

ಅಕ್ಕರಿಲ್ಲದವಗೆ ಮಕ್ಕಳಿದ್ದು ಫಲವೇನು
ಹೊಕ್ಕು ನಡೆಯದ ನಂಟತನದೊಳೇನು
ರೊಕ್ಕ ವಿಲ್ಲದವನಿಗೆ ಬಂಧುಗಳು ಇದ್ದರೇನು
ಮರ್ಕಟನ ಕೈಯೊಳಗೆ ಮಾಣಿಕ್ಯವಿದ್ದರೇನು (ಸಾ. ಕೀ.೪೬೧)

ಮಕ್ಕಳಲ್ಲಿ ಪ್ರೀತಿ ಇಲ್ಲದವರಿಗೆ ಮಕ್ಕಳಿದ್ದು ಏನೂ ಪ್ರುಯೋಜನವಿಲ್ಲ. ಮಂಗನ ಕೈಯಲ್ಲಿ ಮಾಣಿಕ್ಯವಿದ್ದರೆ ಅದಕ್ಕೆ ಮಾಣಿಕ್ಯದ ಬೆಲೆ ಗೊತ್ತಿಲ್ಲ. ಇದೇ ರೀತಿ ಮನುಷ್ಯ ಜೀವನದಲ್ಲಿ ಹರಿಯ ಸ್ಮರಣೆ ಮಾಡಬೇಕು ಇಲ್ಲದಿದ್ದರೆ ಅದೆಲ್ಲವೂ ವ್ಯರ್ಥ ಎಂಬುದಾಗಿ ಕೆಲವು ನಿದರ್ಶನಗಳ ಮೂಲಕ ದಾಸರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಏನೆಂದು ಕೊಂಡಾಡಿ ಸ್ತುತಿಸುವೆನೊ ದೇವ
ನಾನೇನು ಬಲ್ಲೆ ನಿಮ್ಮ ಮಹಿಮೆಗಳ ಮಾಧವ
ಹರಿ ಮುಕುಂದನು ನೀನು ನರಜನ್ಮ ಹುಳು ನಾನು
ಪರಮಾತ್ಮ ನೀನು ಪಾಮರನು ನಾನು
ಗರುಡ ಗಮನನು ನೀನು ಮರುಳ ಪಾಪಿಯು ನಾನು
ಪರಮಜ್ಯೋತಿಯು ನೀನು ದುರುಳ ತಿರುಕನು ನಾನು (ಸಾ.ಕೀ.೪೯೦)

ಇಲ್ಲಿ ಭಗವಂತನ ಮಹಿಮೆಗಳನ್ನು ದಾಸರು ಕೊಂಡಾಡುತ್ತಾರೆ. ಅದರ ಜೊತೆಗೆ ನಾನು 'ನರಜನ್ಮಹುಳು' ಎಂಬುದಾಗಿ ಮನುಷ್ಯನ ಅವಗುಣಗಳನ್ನು ನಿವೇದಿಸುತ್ತಾರೆ. ಇಲ್ಲಿ ಭಕ್ತ ತನ್ನನ್ನು ತಾನು ದೂಷಿಸುತ್ತಾನೆ. ಎಲ್ಲವೂ ಹೌದು ಎಂಬುದಾಗಿ 'ತನು ನಿತ್ಯವಲ್ಲದ ಗೊಂಬೆ ನಾನು' ಎಂದು ಶಾಶ್ವತವಲ್ಲದ ಶರೀರವನ್ನು ಹೇಳಿದ್ದಾರೆ. ಕೊನೆಯಲ್ಲಿ ನಾನು ನಿಮ್ಮನ್ನು ಸ್ಮರಿಸುವ ಭಕ್ತ, ನೀನು ಭಗವಂತನು, ನಾನು ನಿನ್ನ ಮನೆ ಹೊಕ್ಕವನು ಎಂಬುದಾಗಿ ತನ್ನ ಆತ್ಮನಿವೇದನೆಯನ್ನು ಹೇಳಿದ್ದಾರೆ.

ನಮಗೆಲ್ಲಿ ಮನೆಗಳಯ್ಯ ನಾರಾಯಣ
ನಾಡದೇವತೆಗಳ ಸೆರೆಗಳ ಬಿಡಿಸಿ
ಕ್ರೀಡೆಯಾಯಿತು ನಿಮ್ಮ ದಯದಿಂದಲಿ
ರೂಢಿಯೊಳವೆ ಸೇವಕನಾದ ಗರುಡನಿಗೆ
ಬೋಡು ಮರದ ಮೇಲೆ ಇಹ ಪ್ರಾಪ್ತಿಯಾಯಿತು. (ಸಾ.ಕೀ.೫೩೧)

ಅನ್ನ, ವಸನ, ವಸತಿ ಮಾನವನಿಗೆ ಮೂಲಭೂತವಾಗಿ ಅವಶ್ಯಕವಾದ ವಸ್ತುಗಳು. ಅವುಗಳಲ್ಲದೆ ನಾಗರಿಕನಾಗಿ ಬದುಕಲು ಸಾಧ್ಯವಿಲ್ಲ. ಹೀಗಿರಲು ಅವುಗಳನ್ನು ಒದಗಿಸಿಕೊಡುವನೆಂಬ ನಂಬುಗೆಯಿಂದ ಪಾಲನಾಕರ್ತೃ ಹರಿಯಲ್ಲಿ ದಾಸರ ಮೊರೆ ಈ ತೆರನಾಗಿ ಸಾಗುತ್ತದೆ. ತನ್ನನ್ನು ಶರಣು ಹೊಕ್ಕವರನ್ನು ರಕ್ಷಿಸಿ ಅವರಿಗೆ ನೆಲೆಯನ್ನು ಕೊಟ್ಟ ಹರಿ, ನಮಗೆ ಎಲ್ಲಿ ನೆಲೆಯನ್ನು ಕೊಡುತ್ತಾನೆ? ಎಂಬುದು ದಾಸರಲ್ಲಿ ಹುಟ್ಟಿಕೊಂಡ ಪ್ರಶ್ನೆ.

ಮರೆಯದಿರು ಮರೆಯದಿರು ಮರುಳು ಮನುಜಾ
ನಾರಯಣನ ಸ್ಮರಣೆಯನು ಮಾಡು ಮನುಜಾ
ರಂಗನಾಥನು ಇರಲಿಕ್ಕೆ ಜಂಗುಳಿ ದೈವಗಳೇಕೆ
ತುಂಗಭದ್ರೆ ಇರಲಿಕ್ಕೆ ಕೆರೆ ಬಾವಿಯೇಕೆ
ಅಂಗನೆ ಸತಿ ಇರಲಿಕ್ಕೆ ಬಣಗು ಹೆಣ್ಣುಗಳೇಕೆ
ಮಂಗಳಾತ್ಮನಿರಲಿಕ್ಕೆ ಪರದೈವವೇಕೆ. (ಸಾ.ಕೀ.೫೭೧)

ಇಲ್ಲಿ ದಾಸರು ಮಾನವನಿಗೆ ಎಚ್ಚರಿಕೆ ಕೊಟ್ಟಿದ್ದಾರೆ. ಮರುಳು ಮನುಜಾ ನಾರಾಯಣನ ಸ್ಮರಣೆ ಮಾಡಲು ಮರೆಯಬೇಡ ಎಂಬುದಾಗಿ ಹೇಳಿದ್ದಾರೆ.

ಇಲ್ಲಿ ಶ್ರೇಷ್ಠನಾದ ಹರಿ ಇರುವಾಗ ಕ್ಷುದ್ರದೈವಗಳೇಕೆ, ಹಾಗೆಯೇ ನದಿಯೇ ಇರುವಾಗ ನೀರಿಗಾಗಿ ಕೆರೆ, ಬಾವಿ ಎಂದು ಅಲೆದಾಡುವ ಪ್ರಮೇಯವೇಕೆ. ತನ್ನ ಹೆಂಡತಿ ಇರುವಾಗ ಇತರ ಹೆಣ್ಣುಗಳು ಬೇಡ ಎಂಬುದಾಗಿ ಹರಿಯ ಮಹಿಮೆಯನ್ನು ಕೊಂಡಾಡಿದ್ದಾರೆ.

ಹಾಲು ಹಳ್ಳವಿರಲಿಕ್ಕೆ ವಾಳಿಯುವ ತರಲೇಕೆ
ಮೇಲು ನಾಮವಿರಲಿಕ್ಕೆ ಕಟಕು ಇನ್ನೇಕೆ
ಬಾಲಹನುಮನಿರಲಿಕ್ಕೆ ಹುಲು ಕಪಿಗಳೇಕೆ
ಒಳ್ಳೆ ತುಳಸಿಯಿರೆ ಕಣ್ಣೊರಲೆಯೇಕೆ (ಸಾ.ಕೀ.೫೭೧)

ಶ್ರೇಷ್ಠನಾದ ಹನುಮಂತನಿರುವಾಗ ಇತರ ಕಪಿಗಳ ಅಗತ್ಯವಿಲ್ಲ. ಶ್ರೇಷ್ಠವಾದ ತುಳಸಿಯಿರುವಾಗ ಸಾಮಾನ್ಯವಾದ ಇತರ ಹೂಗಳ ಅಗತ್ಯವಿಲ್ಲ ಎಂಬುದಾಗಿ ದಾಸರು ಹೇಳಿದ್ದಾರೆ.

ಚಿನ್ನದ ಗಿರಿಯಿರಲಿಕ್ಕೆ ಕಬ್ಬಿಣದ ಮೊರಡಿಯೇಕೆ
ರನ್ನ ಮಾಣಿಕವಿರಲಿಕ್ಕೆ ಕಾಜಿನ ಹರಳೇಕೆ
ಅನ್ನ ತುಪ್ಪವಿರಲಿಕ್ಕೆ ಮದ್ಯಪಾನಗಳೇಕೆ
ಚೆನ್ನಾದಿಕೇಶವನಿಗೆ ಬಿನುಗು ದೈವಗಳೇಕೆ (ಸಾ.ಕೀ.೫೭೧)

ಚಿನ್ನದ ಬೆಟ್ಟವೇ ಇರುವಾಗ ಕಬ್ಬಿಣದ ದಿನ್ನೆಗೆ ಆಸೆಪಡಬಾರದು. ನಮ್ಮಲ್ಲಿ ಒಳ್ಳೆಯ ವಸ್ತುಗಳಿರುವಾಗ ಕೀಳು ವಸ್ತುಗಳನ್ನು ಬಯಸಬಾರದು. ದೇವನು ಒಬ್ಬನೇ ಭಗವಂತನಿರುವಾಗ ಇತರ ದೈವಗಳೇಕೆ? ಭಗವಂತನನ್ನೇ ಸ್ಮರಿಸಿ ಜೀವನವನ್ನು ಸಾರ್ಥಕ ಮಾಡಿಕೊಳ್ಳಬೇಕು ಎಂಬುದಾಗಿ ಕೆಲವು ನಿದರ್ಶನಗಳ ಮೂಲಕ ಮಾನವನ ಕರ್ತವ್ಯವನ್ನು ಎಚ್ಚರಿಸಿದ್ದಾರೆ.

ಒಟ್ಟಾರೆಯಾಗಿ ಕನಕದಾಸರು ಸಾಮಾಜಿಕ ವಿಮರ್ಶೆ ಮಾಡುವ ಹಲವಾರು ಕೀರ್ತನೆಗಳನ್ನು ಹಾಗೂ ರಾಮಧಾನ್ಯ ಚರಿತೆಯಂಥ ಕಾವ್ಯವನ್ನು ಬರೆದಿದ್ದಾರಾದರೂ ಅವರ ಪ್ರತಿಮಾ ಶ್ರೀಮಂತಿಕೆ ಅಥವಾ ಪ್ರತಿಮಾ ಜಗತ್ತು ಹೆಚ್ಚಾಗಿ ಆವರಿಸಿರುವುದು ಅಧ್ಯಾತ್ಮದ ಹಂಬಲವುಳ್ಳ ಕೀರ್ತನೆಗಳಲ್ಲಿ ಎಂದು ಗೊತ್ತಾಗುತ್ತದೆ. ಕನಕದಾಸರ ಕಾವ್ಯಶಿಲ್ಪದ ಸಿದ್ಧಿಯು ಅವರ ಆಧ್ಯಾತ್ಮಿಕ ಹಂಬಲವುಳ್ಳ ಕೀರ್ತನೆಗಳಲ್ಲಿ ಬಳಸಿದ ಪ್ರತಿಮೆಗಳನ್ನು ಕೂಡ ಅವಲಂಬಿಸಿದೆ.

ಟಿಪ್ಪಣಿಗಳು :

೧. ದೇ. ಜವರೇಗೌಡ, ಜನಪ್ರಿಯ ಕನಕಸಂಪುಟ, ಪುಟ ೮೨
೨. ಪ್ರವೀಣ ಪಿ, ಪುರಂದರದಾಸರ ಪ್ರತಿಮಾಜಗತ್ತು, ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ, ಪುಟ ೫೪

ಅಧ್ಯಾಯ ೬

ಉಪಸಂಹಾರ

ಅಧ್ಯಾಯ – ೬

ಉಪಸಂಹಾರ

ಒಬ್ಬ ಕವಿ, ಕಲಾವಿದ, ದಾಸನಾಗಲಿ ತನ್ನ ಕಾಲದ ಸಮಾಜದ ಚೌಕಟ್ಟಿನೊಳಗೆಯೇ ಸಾಗುತ್ತಾನೆ. ಕವಿ ಪ್ರತಿಪಾತಿಸಿದ ಮೌಲ್ಯಗಳು ಸಾರ್ವಕಾಲಿಕ ಸತ್ಯವಾಗಿದ್ದರೂ ವಿಷಯ ಪ್ರತಿಪಾದನೆಯು ಆಯಾ ಕಾಲದ ಯುಗ ಧರ್ಮವನ್ನು ಅವಲಂಬಿಸಿರುತ್ತದೆ. ಸತ್ಯ ದರ್ಶನಕ್ಕೆ ಸಮಾಜವು ಕನ್ನಡಿಯಿದ್ದಂತೆ. ಕವಿಗೆ ಸತ್ಯದರ್ಶನಕ್ಕೆ ಕಾವ್ಯವು ಒಂದು ಮಾಧ್ಯಮವಾಗಿದೆ.

ಸಾಮಾನ್ಯ ಜನರಿಗೆ ಕಾಣದ ಅನೇಕ ಸತ್ಯಗಳನ್ನು ಕನಕದಾಸರು ಕಂಡರು. ಕಣ್ಣಾರೆ ಕಂಡ ದಿವ್ಯ ಸತ್ಯವನ್ನು ಮನಸಾರೆ ಮೆಚ್ಚಿ ಬಾಳನ್ನು ಕಳೆದವರು. ಅವರು ಕಂಡ ಸತ್ಯ ಹೃದಯತುಂಬಿ ಕೀರ್ತನೆಗಳಲ್ಲಿ ಬಂದಿದ್ದು ಅವು ಪೋಣಿಸಿದ ಮುತ್ತಿನಂತಿವೆ.

ಸಾಹಿತ್ಯದಲ್ಲಿ ಪ್ರತಿಮೆಗಳು ಪ್ರತಿಮಾ ನಿರ್ಮಿತಿಯ ವಿಧಾನಕ್ಕೆ ಪ್ರೇರಕವಾದವು ಸಂಕೇತಗಳು ಒಂದು ವಸ್ತುವಿನ ಅಸ್ತಿತ್ವದ ಸೂಚನೆಯನ್ನು ಮಾತ್ರ ಕೊಟ್ಟರೆ ಪ್ರತೀಕವು ಆ ಘಟನೆ ಅಥವಾ ವಸ್ತುವಿನ ಸ್ವರೂಪವನ್ನು ಸಾಕ್ಷಾತ್ಕರಿಸುತ್ತದೆ. ಒಂದು ಪದವು ಧ್ವನಿಪೂರ್ಣವಾದಾಗ ಉಪಮೆ ಅಥವಾ ರೂಪಕವೂ ಪ್ರತಿಮೆಯಾಗಬಹುದು. ಉಪಮೆಯಲ್ಲಿ ಸಾದೃಶ್ಯ ಸಂಬಂಧಪಟ್ಟರೆ, ರೂಪಕದಲ್ಲಿ ಉಪಮಾನ ಉಪಮೇಯಗಳು ಅಭೇದವಾಗಿದ್ದು ಸಂಕ್ಷಿಪ್ತವಾಗಿ ಪ್ರಧಾನವಾಗಿರುತ್ತದೆ.

'ಪ್ರತಿಮೆ'ಯು ಕೇವಲ ಪ್ರತಿಮೆಗಾಗಿ ಅಲ್ಲ. ಅದು ಕಾವ್ಯದಲ್ಲಿ ಕವಿಯ ಅರಿವಿಗೆ ಬಾರದ ರೀತಿಯಲ್ಲಿ ನಿರ್ಮಾಣಗೊಳ್ಳುವುದರ ಮೂಲಕ ಕವಿಯ ಅಂತರಂಗದ ಭಾವದ ಅಭಿವ್ಯಕ್ತಿಯ ಮಾಧ್ಯಮವಾಗುತ್ತದೆ. ಕನಕದಾಸರಿಗೆ ಅಂತರಂಗದ ಅಭಿವ್ಯಕ್ತಿಯ ಮಾಧ್ಯಮವಾಗಿ ಕೀರ್ತನೆಗಳು ನೆರವಾಗಿವೆ.

ಕನಕದಾಸರ ಕೀರ್ತನೆಗಳಲ್ಲಿನ ಪ್ರತಿಮಾಜಗತ್ತನ್ನು ಅಭ್ಯಾಸ ಮಾಡಿದಾಗ ಅವರ ಪ್ರಮುಖ ವಿಶಿಷ್ಟ ಚಿಂತನೆಗಳು ಮತ್ತು ಅವು ಪ್ರತಿಮಾ ರೂಪದಲ್ಲಿ ಜನರಿಗೆ ಸತ್ಯದ ಸಂವಹನಕ್ಕೆ ಸಹಾಯವಾಗಿರುವುದು ಕಂಡುಬರುತ್ತದೆ. ಸಾಮಾನ್ಯ ಜನರಿಗೆ ಕಾಣದ ಅದೆಷ್ಟೋ ಸತ್ಯಗಳು ದಸಾರ ಕೀರ್ತನೆಗಳ ಮೂಲಕ ಕಂಡಿವೆ. ಅವರ ಕೀರ್ತನೆಗಳಲ್ಲಿ ಪ್ರತಿಮಾ ನಿರ್ಮಿತಿ ಕನ್ನಡಿಯಂತೆ ಕೆಲಸ ಮಾಡಿದ್ದು ದಾಸ ಸಾಹಿತ್ಯದ ವ್ಯಾಪಕತೆಯನ್ನು ಹೆಚ್ಚಿಸುವಲ್ಲಿ ಯಶಸ್ವಿಯಾಗಿದೆ. ಶಾಸ್ತ್ರದ ದೃಷ್ಟಿಯಿಂದ ಕನಕದಾಸರ ಕೀರ್ತನೆಗಳನ್ನು ಗಮನಿಸಿದರೆ ಇಲ್ಲಿ ಮಾಧ್ವ ತತ್ವದ ಪ್ರತಿಪಾದನೆಯ ಸಮಗ್ರ ಭಂಡಾರವೇ ಇದೆ.

ಕನಕದಾಸರ ಕೀರ್ತನೆಗಳಲ್ಲಿ ಮುಖ್ಯವಾಗಿ ಭಕ್ತಿಯ ತೀರ್ವತೆ, ಸಾಮಾಜಿಕ ಕಳಕಳಿ, ಪೌರಾಣಿಕ ಚಿತ್ರಗಳು ಇವೆಲ್ಲವು ವ್ಯಕ್ತವಾಗಿವೆ. 'ಕಾಗಿನೆಲೆಯಾದಿಕೇಶವರಾಯ ರಕ್ಷಿಸು ನಮ್ಮನನವರತ' ಎಂದು ಮುಕ್ತ ಮನಸ್ಸಿನ ಶರಣಾಗತ ಭಾವವಿದೆ. ಮೇಲ್ನೋಟಕ್ಕೆ ಸಾಮಾಜಿಕ ವಿಚಾರ, ವಿಡಂಬನೆಗಳು ಕೆಲವು ಕೀರ್ತನೆಗಳಲ್ಲಿ ಕಂಡುಬಂದರೂ ಇಲ್ಲೆಲ್ಲಾ ಆಧ್ಯಾತ್ಮಿಕತೆಯಿದೆ. ಜೀವನದ ಎಲ್ಲಾ ಸಮಸ್ಯೆಗಳಿಗೆ ಆಧ್ಯಾತ್ಮಿಕ ಹಿನ್ನಲೆಯಲ್ಲಿ ಉತ್ತರವನ್ನು ಕಂಡುಕೊಳ್ಳುವ ಗುಣವನ್ನು ಅವರ ಕೀರ್ತನೆಗಳಲ್ಲಿ ಕಾಣಬಹುದು. ಅವರ ಕೀರ್ತನೆಗಳಲ್ಲಿ ಕಾಣಬಹುದು. ಅವರ ಕೀರ್ತನೆಗಳಲ್ಲಿ ಆತ್ಮವಿಮರ್ಶೆಯೂ ಹೃದ್ಯವಾಗಿ ವ್ಯಕ್ತಗೊಂಡಿದೆ.

ನಿತ್ಯ ಬದುಕಿನ ಜಂಜಾಟಗಳು, ಸಂಕೀರ್ಣತೆಗಳನ್ನು, ವಾಸ್ತವತೆಯನ್ನು ಕೀರ್ತನೆಗಳಲ್ಲಿ ಬಿಚ್ಚಿಟ್ಟಿರುವುದು ಕನಕದಾಸರ ಕೀರ್ತನೆಗಳ ಜೀವಂತಿಕೆಗೆ ಸಾಕ್ಷಿಯಾಗಿವೆ. ಎಲ್ಲಿಯೂ ತತ್ವಶಾಸ್ತ್ರಗಳನ್ನು, ನೀತಿಬೋಧೆಗಳನ್ನು ನೇರವಾಗಿ ಮಾಡದೆ ವೈಚಾರಿಕತೆಯೊಂದಿಗೆ ಭಾವಮಯವಾಗಿ ಸರಳವಾಗಿ ನಿರೂಪಿಸಿದ್ದಾರೆ. ಧರ್ಮದ ವಿಚಾರದಲ್ಲಿ ದಾಸರ ವಿಚಾರಧಾರೆಗಳು 'ದಾನ ಧರ್ಮವ ಮಾಡಿ ಸುಖಿಯಾಗು ಮನವೆ', 'ಮಾಡು ದಾನ ಧರ್ಮ ಪರ ಉಪಕಾರವ ಮರೆಯದಿರೆಚ್ಚರಿಕೆ' ಮೊದಲಾದ ಕೀರ್ತನೆಗಳಲ್ಲಿ ಸ್ಪಷ್ಟವಾಗಿದೆ.

ಕನಕದಾಸರು ತಮ್ಮೊಳಗಿನ ಕುಂದುಕೊರತೆಗಳನ್ನು ಗುರುತಿಸಿಕೊಂಡಿದ್ದು ಅವುಗಳನ್ನು ಅಂತರಾತ್ಮನಿಗೆ ನಿವೇದಿಸಿ ಆತ್ಮವನ್ನು ಶುದ್ಧೀಕರಿಸುವ ಗುಣವನ್ನು ಕೆಲವು ಕೀರ್ತನೆಗಳಲ್ಲಿ ಗುರುತಿಸಬಹುದು. 'ನಾರಾಯಣ ನಿನ್ನ ನಾಮದ ಬೀಜವನು', 'ಸ್ನಾನವ ಮಾಡಿರೊ ಜ್ಞಾನ ತೀರ್ಥದಲ್ಲಿ' ಮೊದಲಾದ ಕೀರ್ತನೆಗಳಲ್ಲಿ ಆತ್ಮವನ್ನು ಶುದ್ಧಿಕರಿಸುವ ಗುಣವನ್ನು ಕಾಣಬಹುದು.

ಕನಕದಾಸರು ವರ್ಗಸಂಘರ್ಷ ಮತ್ತು ಜಾತಿಸಂಘರ್ಷದ ಕುರಿತು 'ಕುಲ ಕುಲವೆಂದು ಹೊಡೆದಾಡದಿರಿ', 'ಕುಲ ಕುಲ ಕುಲವೆನ್ನುತಿಹರು' ಮೊದಲಾದ ಕೀರ್ತನೆಗಳಲ್ಲಿ ಹೇಳಿದ್ದಾರೆ. 'ಎಲ್ಲರೂ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ' ಕೀರ್ತನೆಯಲ್ಲಿ ಸಮಾನತೆಯ ತತ್ವವನ್ನು ಹೇಳುತ್ತಾರೆ. ಸಮಾಜದ ಓರೆಕೋರೆಗಳನ್ನು ವಿಡಂಬನೆಯೊಂದಿಗೆ ಎತ್ತಿ ತೋರಿಸುವ ಗುಣ ಕನಕದಾಸರ ಕೀರ್ತನೆಯಲ್ಲಿ ಕಂಡುಬರುತ್ತದೆ. 'ಏನು ಮಾಡಲಯ್ಯಾ ಬಯಲಾಸೆ ಬಿಡದು', 'ದಾಸಪಟ್ಟವೋ ಸಂನ್ಯಾಸಪಟ್ಟವೋ' ಮೊದಲಾದ ಕೀರ್ತನೆಗಳಲ್ಲಿ ಕಂಡುಬರುತ್ತದೆ.

ಕನಕದಾಸರು ಲೌಕಿಕದ ಅದೆಷ್ಟೋ ಕಾಯಕಗಳನ್ನು ಹೊಟ್ಟೆಪಾಡಿನ ಒಂದು ಭಾಗವೆಂದು ತಿಳಿದಿರುವುದನ್ನು ನಾವು ಅವರ ಕೀರ್ತನೆಗಳಲ್ಲಿ ಗುರುತಿಸಬಹುದು. ಅದಕ್ಕಿಂತ ಹೆಚ್ಚಾಗಿ ಅವರೊಬ್ಬ ಮಹಾನ್ ಕವಿ, ದಾರ್ಶನಿಕ ಎಂಬುದನ್ನೂ ನಿಸ್ಸಂಶಯವಾಗಿ ಹೇಳಬಹುದು. ಜನರಿಗೆ ಅಮೂರ್ತ ವಿಚಾರಗಳನ್ನು, ಆಧ್ಯಾತ್ಮಿಕ ವಿಚಾರಗಳನ್ನು ಸರಳ ಸುಂದರವಾಗಿ ನಿರೂಪಿಸುವಲ್ಲಿ ಅವರ ಕೀರ್ತನೆಗಳಲ್ಲಿನ ಪ್ರತಿಮೆಗಳು ಯಶಸ್ವಿಯಾಗಿವೆ. ಕಾವ್ಯದಲ್ಲಿ ಪ್ರತಿಮೆಯ ಅಗತ್ಯವೂ ಇದೇ ಎಂಬುದು ಗಮನೀಯ.

ಕೀರ್ತನೆಗಳ ಪ್ರಧಾನ ಆಶಯ ಭಕ್ತಿ, ಆ ಮೂಲಕ ಆಧ್ಯಾತ್ಮಿಕತೆಯಾಗಿದ್ದರೂ ಕನಕದಾಸರ ಕೀರ್ತನೆಗಳಲ್ಲಿ ಸಾಕಷ್ಟು ಸಾಮಾಜಿಕ ಅಂಶಗಳನ್ನೂ ಗುರುತಿಸಬಹುದು. ಮಾನವನ ನೀಚತನ, ಇಂದ್ರಿಯಸುಖಕ್ಕೆ 'ಮೇಕೆಯಂದದಿ ಬಾಯಿ ಬಿಡುವ' ಮನುಷ್ಯನ ದುರಾಸೆಯನ್ನು ಕಂಡ ದಾಸರು ಇದರಿಂದ ಪಾರಾಗಲು ದೇವರ ಅನುಗ್ರಹವೇ ಮುಖ್ಯವೆಂದಿದ್ದಾರೆ. ಬೀದಿನಾಯಿ, ಹುಚ್ಚುನಾಯಿಯಂತೆ ತಿರುಗಿ ಫಲವಿಲ್ಲವೆಂದು ಸಾರಿದ್ದಾರೆ; ಕುಲಕುಲವೆಂದು ಹೊಡೆದಾಡಿ ಏನೂ ಫಲವಿಲ್ಲವೆಂಬ ಸಾರ್ವಕಾಲಿಕ ಸತ್ಯವನ್ನರುಹಿದ್ದಾರೆ. ಜೀವನದಲ್ಲಿ ಯಶಸ್ಸು ಕಾಣಬೇಕಾದರೆ ತಾಳ್ಮೆ ಮುಖ್ಯ, ಅದಕ್ಕಿಂತ ದೊಡ್ಡ ತಪಸ್ಸು ಬೇರೆ ಇಲ್ಲ ಎಂಬ ಕನಕನ ಮಾತು 'ತಾಳಿದವನು ಬಾಳಿಯಾನು' ಎಂಬ ಸತ್ಯವನ್ನು ಹೊರಗೆಡಹುತ್ತದೆ. ಕಿರ್ತನೆಗಳಲ್ಲಿ ಸಾಮಾಜಿಕ ನ್ಯಾಯ, ರಾಜಕೀಯದ ಬಗೆಗಿನ ವಿಡಂಬನೆಯನ್ನು ಮಾಡುವಲ್ಲಿ ಪ್ರತಿಮೆಗಳನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳುವಲ್ಲಿ ಕನಕದಾಸರು ಯಶಸ್ವಿಯಾಗಿದ್ದು ಅವರ ಕವಿತಾಪ್ರೌಢಿಮೆಗೆ ಸಾಕ್ಷಿಯಾಗಿವೆ. ದಾಸರ ಯಾವುದೇ ಕೀರ್ತನೆಗಳಿರಲಿ ಅಲ್ಲಿ ಆಧ್ಯಾತ್ಮಿಕತೆ ಇದ್ದೇ ಇರುತ್ತದೆ. ಕೀರ್ತನೆಗಳ ಹಿನ್ನೆಲೆಯೂ ಇದೇ ಆಗಿದೆ. ಎಲ್ಲ ನದಿಗಳೂ ಅಂತಿಮವಾಗಿ ಸಾಗರವನ್ನೇ ಸೇರುವಂತೆ ಕೀರ್ತನೆಗಳೆಲ್ಲವೂ ಭಕ್ತಿಯಲ್ಲಿ ಲೀನವಾಗುತ್ತದೆ. ಸಮಾಜದ ಅಂಕು ಡೊಂಕುಗಳನ್ನು ತಿದ್ದುತ್ತಾ ಜನರಲ್ಲಿ ಆಧ್ಯಾತ್ಮಿಕ ಜ್ಞಾನದ ಬುತ್ತಿಯನ್ನುಣಬಡಿಸುವಲ್ಲಿ ದಾಸರ ಪ್ರತಿಮೆಗಳು ಯಶಸ್ವಿಯಾಗಿವೆ.

ಸಮಾಜವಿಮರ್ಶೆಯನ್ನು ಮಾಡಲು ಕನಕದಾಸರು ನಾಯಿ, ಆನೆ, ಕತ್ತೆ, ಕುದುರೆ, ಮಂಗ, ಹಾವು, ನರಿ, ಪತಂಗ, ಬೊಂಬೆ, ಕೊಂಪೆ, ಬಯಲು, ಆಲಯ ಮುಂತಾದ ಪ್ರತಿಮೆಗಳನ್ನು ಬಳಸಿದ್ದಾರೆ. ಪ್ರಾಣಿ, ಪಕ್ಷಿ, ವೃಕ್ಷ, ಸಂಸಾರ ಮುಂತಾದ ಪ್ರತಿಮೆಗಳನ್ನು ಬಳಸುವ ಮೂಲಕ ಸಮಾಜವನ್ನು ತಿದ್ದುವ ಯತ್ನ ಮಾಡಿದ್ದಾರೆ. ಸಾಮಾಜಿಕವಾಗಿ ಇದ್ದ ಭೇದ ಭಾವಗಳನ್ನು ನೀಗಬೇಕೆಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ಕನಕದಾಸರು ಸಾಮಾಜಿಕ ವಿಮರ್ಶೆ ಮಾಡುವ ಹಲವಾರು ಕೀರ್ತನೆಗಳನ್ನು ಹಾಗೂ ರಾಮಧಾನ್ಯ ಚರಿತೆಯಂಥ ಕಾವ್ಯವನ್ನು ಬರೆದಿದ್ದಾರಾದರೂ ಅವರ ಪ್ರತಿಮಾ ಶ್ರೀಮಂತಿಕೆ ಅಥವಾ ಪ್ರತಿಮಾ ಜಗತ್ತು ಹೆಚ್ಚಾಗಿ ಆವರಿಸಿರುವುದು ಅಧ್ಯಾತ್ಮದ ಹಂಬಲವುಳ್ಳ ಕೀರ್ತನೆಗಳಲ್ಲಿ ಎಂದು ಗೊತ್ತಾಗುತ್ತದೆ. ಕನಕದಾಸರ ಕಾವ್ಯಶಿಲ್ಪದ ಸಿದ್ಧಿಯು ಅವರ ಆಧ್ಯಾತ್ಮಿಕ ಹಂಬಲವುಳ್ಳ ಕೀರ್ತನೆಗಳಲ್ಲಿ ಬಳಸಿದ ಪ್ರತಿಮೆಗಳನ್ನು ಕೂಡಾ ಅವಲಂಬಿಸಿದೆ.

ಕನಕದಾಸರು ಕೀರ್ತನೆಗಳಲ್ಲಿ ಪ್ರತಿಮೆಗಳ ಮೂಲಕ ಸಾಮಾಜಿಕ, ಧಾರ್ಮಿಕ, ರಾಜಕೀಯ ಇತ್ಯಾದಿ ಏನೇ ವಿಚಾರವನ್ನು ಹೇಳಿದರೂ ಅಲ್ಲಿ ಕೀರ್ತನೆಗಳ ಪ್ರಧಾನ ಆಶಯ ಭಕ್ತಿ ಇದ್ದೇ ಇದೆ. ಕಾಗಿನೆಲೆಯಾದಿಕೇಶವನ ಭಜಿಸದವ ಹುಟ್ಟುಕುರುಬ ಎನ್ನುವ ಮೂಲಕ ಕುಲದ ಬಗೆಗಿನ ವ್ಯಾಖ್ಯಾನವನ್ನೂ ಮನಮುಟ್ಟುವಂತೆ ಹೇಳಿದ್ದಾರೆ. ಕನಕದಾಸರ ಬಗ್ಗೆ ಸಾಕಷ್ಟು ಅಧ್ಯಯನಗಳಾಗಿದ್ದರೂ ಅವರ ಕೀರ್ತನೆಗಳಲ್ಲಿನ ಪ್ರತಿಮೆಗಳ ಬಗೆಗಿನ ಈ ಅಧ್ಯಯನ ಕನಕದಾಸರ ಚಿಂತನೆಗಳ ಹೊಸ ದೃಷ್ಟಿಯನ್ನು ತೆರೆಯಬಹುದು.

ಪರಾಮರ್ಶನ ಗ್ರಂಥಸೂಚಿ

೧. ಅಂಗಡಿ ಎಸ್.ಎಸ್, ದಾಸ ಸಾಹಿತ್ಯ ಭಾಷೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೨. ಉಷಾಕಿರಣ್, ಬಸವೇಶ್ವರ ಮತ್ತು ಪ್ರತಿಮಾ ನಿರ್ಮಿತಿ, ಆನಂದ ಪ್ರಕಾಶನ, ಬೆಂಗಳೂರು, ೨೦೦೧.

೩. ಕುಲಕರ್ಣಿ ಜೀವಿ, ಗೋಕಾಕ ಎ.ವಿ, ಕಾವ್ಯದಲ್ಲಿ ಪ್ರತಿಮಾ ಸಂವಿಧಾನ, ಹರ್ಷವರ್ಧನ ಪ್ರಕಾಶನ, ಮುಂಬಯಿ, ೧೯೯೯.

೪. ಕೃಷ್ಣಶರ್ಮ ಬೆಟಗೇರಿ ಮತ್ತು ಹುಚ್ಚರಾವ ಬೆಂಗೇರಿ (ಸಂ), ಕನಕದಾಸರ ಹಾಡುಗಳು, ಸಮಾಜ ಪುಸ್ತಕಾಲಯ, ಧಾರವಾಡ, ೨೦೦೯.

೫. ಗೋವಿಂದಾಚಾರ್ಯ ಬನ್ನಂಜೆ, ಕನಕೋಪನಿಷತ್ತು, ಕನಕದಾಸ ಅಧ್ಯಯನ ಸಂಶೋಧನ ಪೀಠ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ, ೨೦೦೮.

೬. ಜವರೇಗೌಡ ದೇ (ಸಂ), ಜನಪ್ರಿಯ ಕನಕ ಸಂಪುಟ, ಈಸ್ಟ್ರನ್ ಪ್ರೆಸ್, ಬೆಂಗಳೂರು, ೧೯೮೯.

೭. ತಿಪ್ಪೇರುದ್ರಸ್ವಾಮಿ ಯಚ್, ತೌಲನಿಕ ಕಾವ್ಯ ಮೀಮಾಂಸೆ, ಡಿ. ವಿ. ಕೆ.ಮೂರ್ತಿ ಮೈಸೂರು, ೧೯೯೮.

೮. ನಾಗಭೂಷಣ ಸ್ವಾಮಿ ಓ. ಎಲ್, ವಿಮರ್ಶೆಯ ಪರಿಭಾಷೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೧.

೯. ನಾಗರತ್ನ ಟಿ. ಎನ್ (ಸಂ), ದಾಸಸಾಹಿತ್ಯ ಸೌರಭ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ೨೦೦೭.

೧೦. ನಾವಡ ಎ. ವಿ, ಅರಿವಿನ ಕುರುಹು, ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಮೈಸೂರು, ೨೦೦೮.

೧೧. ನಾವಡ ಎ. ವಿ ಮತ್ತು ಡಾ. ಗಾಯತ್ರಿ ನಾವಡ (ಸಂ), ಸಾವಿರಾರು ಕೀರ್ತನೆಗಳು, ಅಂಕಿತ ಪ್ರಕಾಶನ, ಬೆಂಗಳೂರು, ೨೦೧೨.

೧೨. ಪ್ರವೀಣ .ಪಿ, ಪುರಂದರದಾಸರ ಪ್ರತಿಮಾ ಜಗತ್ತು (ಅಪ್ರಕಟಿತ ಎಂ.ಫಿಲ್. ಸಂಪ್ರಬಂಧ), ೨೦೦೯.

೧೩. ಪ್ರಸನ್ನ ಎ. ವಿ, ಕುಮಾರವ್ಯಾಸನ ಕಾವ್ಯ ಚಿತ್ರಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೧೦.

೧೪. ಭಗವತಿ ಎಸ್.ಎಸ್, ಮೇಲಿನಮನಿ ಎಚ್. ಎಸ್ (ಸಂ), ಕನಕದಾಸ ಒಂದು ಅಧ್ಯಯನ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೭.

೧೫. ಭಾಸ್ಕರ ಮಯ್ಯ, ಕನಕದಾಸರೊಂದಿಗೆ ಮುಖಾಮುಖಿ, ಚಿಂತನಬಯಲು, ಸಂಪುಟ೨, ಸಂಚಿಕೆ೩, ೨೦೧೪

೧೬. ಮುಗಳಿ ರಂ.ಶ್ರೀ, ಕನ್ನಡ ಸಾಹಿತ್ಯ ಚರಿತ್ರೆ, ಉಷಾ ಸಾಹಿತ್ಯ ಮಾಲೆ, ೧೯೭೧

೧೭. ಲಕ್ಷ್ಮೀನಾರಾಯಣ ಭಟ್ಟ. ಎನ್.ಎಸ್, ಕಾವ್ಯಪ್ರತಿಮೆ, ಅಂಕಿತ ಪುಸ್ತಕ, ಬೆಂಗಳೂರು, ೨೦೧೦.

೧೮. ವಸಂತ ಕುಮಾರ ತಾಳ್ತಜೆ, ಮುತ್ತಿನ ಸತ್ತಿಗೆ, ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ ೨೦೦೧.

೧೯. ವಿಜಯಶಂಕರ ಎಸ್.ಆರ್ (ಸಂ), ಪ್ರತಿಮಾಲೋಕ, ಅಂಕಿತ ಪುಸ್ತಕ, ೨೦೦೮.

೨೦. ವೆಂಕಟೇಶ್ .ಜಿ (ಸಂ), ದಾಸ ಸಾಹಿತ್ಯ ಕೋಶ, ಪ್ರಿಸಮ್ ಬುಕ್ಸ್, ಬೆಂಗಳೂರು, ೨೦೧೦.

೨೧. ಶಿವರಾಮ ಶೆಟ್ಟಿ ಬಿ, ಪ್ರತಾಪ್‌ಚಂದ್ರ ಶೆಟ್ಟಿ ಹಳ್ನಾಡ್ (ಸಂ), ಕನಕ ಚಿಂತನ ೨೦೦೭-೨೦೦೮, ಕನಕದಾಸ ಸಂಶೋಧನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳ ಗಂಗೋತ್ರಿ, ೨೦೧೦.

೨೨. ಶಿವರಾಮ ಶೆಟ್ಟಿ. ಬಿ, ಅಕ್ಷಯ ಶೆಟ್ಟಿ, ರಾಧಿಕಾ, ಹಜರತ್ ನದಾಫಾ (ಸಂ), ಕನಕ ಚಿಂತನ ೨೦೦೯-೨೦೧೦, ಕನಕದಾಸ ಸಂಶೋಧನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ೨೦೧೦.

೨೩. ಶಿವರಾಮ ಶೆಟ್ಟಿ. ಬಿ (ಸಂ), ಕನಕ ಚಿಂತನ ೨೦೧೧-೨೦೧೨, ಕನಕದಾಸ ಸಂಶೋಧನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ೨೦೧೩.

೨೪. ಶಿವರಾಮ ಶೆಟ್ಟಿ. ಬಿ (ಸಂ), ಕನಕನ ಸುತ್ತಮುತ್ತ : ಸಂಕಥನಗಳ ಜಿಜ್ಞಾಸೆ, ಕನಕದಾಸ ಸಂಶೋಧನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ೨೦೧೩.

೨೫. ಶಿವರಾಮ ಶೆಟ್ಟಿ ಬಿ (ಸಂ), ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ, ಕನಕದಾಸ ಅಧ್ಯಯನ ಪೀಠ, ಕನಕದಾಸ ಸಂಶೋಧನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ೨೦೧೩.

೨೬. ಶಿವರುದ್ರಪ್ಪ ಕೆ, ಸಂಶೋಧನಾ ಸಮೀಕ್ಷೆ ಹಾಗೂ ವಿಶ್ಲೇಷಣೆ, ಜ್ಞಾನೋದಯ ಪಬ್ಲಿಕೇಶನ್, ಮೈಸೂರು, ೨೦೦೮.

೨೭. ಶಿವರುದ್ರಪ್ಪ ಜಿ.ಯಸ್, ಕಾವ್ಯಾರ್ಥ ಚಿಂತನ, ಶಾರದಾ ಪ್ರಕಾಶನ, ಬೆಂಗಳೂರು, ೧೯೮೮.

೨೮. ಶಿವರುದ್ರಪ್ಪ ಜಿ.ಯಸ್, ಬೆಡಗು, ಸುವಿದ್ಯಾ ಪ್ರಕಾಶನ, ಬೆಂಗಳೂರು, ೧೯೮೯.

೨೯. ಸತ್ಯನಾರಾಯಣ ರಾವ್ ಹೊ. ರಾ (ಸಂ), ಕನಕದಾಸರ ಜನಪ್ರಿಯ ಕೀರ್ತನೆಗಳು, ಅಂಕಿತ ಪುಸ್ತಕ, ಬೆಂಗಳೂರು, ೨೦೦೮.

ಸಂಕ್ಷೇಪ ಸೂಚಿ :

೧. ಕ. ಹಾ. – ಕನಕದಾಸರ ಹಾಡುಗಳು

೨. ಸಾ. ಕೀ – ಸಾವಿರಾರು ಕೀರ್ತನೆಗಳು